
# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್–2024




ಬಿಡಿ ಪ್ರತಿ: ರೂ. 10/–


Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com


Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in
fbb
BHIMA

ನನ್ನ ಕಾಲದಿಂದಲೂ ಬೆಂಗಳೂರಲ್ಲಿ ಮಳೆ ಕಣ್ಣು ಮುಚ್ಚಾಲೆ ಆಡ್ತಾನೇ ಇದೆ ಕಣ್ರೋ ! ಅದಿಕ್ಕೆ ನಾನು ಒಂದು ಕೆರೆಯಿಂದ ಇನ್ನೊಂದು ಕೆರೆಗೆ, ಇನ್ನೊಂದು ಕೆರೆಯಿಂದ ಮತ್ತೊಂದು ಕೆರೆಗೆ ಕೋಡಿ ಬಿದ್ದು ಪ್ರತಿ ನೀರಿನ ಹನಿ ಪೋಲು ಆಗದೆ ಸಂಗ್ರಹ ಆಗೋ ಹಾಗೆ ವ್ಯವಸ್ಥೆ ಮಾಡಿದ್ದೆ.

ಧರ್ಮಾಂಬುಧಿ ಕೆರೆ ತುಂಬಿದರೆ
ಸಿದ್ದಿಕಟ್ಟೆ ಕೆರೆಗೆ ಬರ್ತಿತ್ತು....
ಸಿದ್ದಿಕಟ್ಟೆ ಕೆರೆ ತುಂಬಿ ಕಾರಂಜಿ ಕೆರೆಗೆ ಬರ್ತಿತ್ತು..
ಕಾರಂಜಿ ಕೆರೆ ತುಂಬಿ ಕೆಂಪಾಂಬುಧಿ ಕೆರೆಗೆ ಹೋಗ್ತಿತ್ತು....

ಇರೋ ಬರೋ ಕೆರೆನೆಲ್ಲ ಮುಚ್ಚಿಹಾಕಿ ಇವತ್ತು ನೀರಿಲ್ಲ ಅಂದ್ರೆ ಎಲ್ಲಿಂದ ಬರತ್ತೆ?

ನಿಲ್ದಾಣಗಳಿಗೆ, ರಸ್ತೆಗೆ ನನ್ ಹೆಸರು ಇಡ್ತೀರೇ ಹೊರತು, ನನ್ ಹೆಸರು ಉಳಿಯೋ ಹಾಗೆ ಮಾಡ್ರೋ !

**ಬೆಂಗಳೂರನ್ನ ಚೆನ್ನಾಗಿ ಹಸಿರಾಗಿ ಮಾಡಿರಯ್ಯ !**

## ನಲುಮೆಯಿಂದ
## ನಿಮ್ಮವ
# ಕೆಂಪೇಗೌಡರು



Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED — PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.

# ಅಪರಂಜಿ
ತಿಳಿನಗೆಯ ಕಾರಂಜಿ



ಸಂಪುಟ 41
ಸಂಚಿಕೆ – 07
ಏಪ್ರಿಲ್ – 2024

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್
ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ
ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮನಿಮ್ಮಲ್ಲಿ | ಶಿವಕುಮಾರ್ | 3 |
| ಕಚ್ಚೆ ಸೀರೆ ಮತ್ತು ಕಟ್ಟಿನ ಸಾರು! | ಜಯಶ್ರೀ ದೇಶಪಾಂಡೆ | 4 |
| ಕೊರೋನಾ–ಯುಗಾದಿ ಬೇವು ಬೆಲ್ಲ.. | ಸುಮನಾ | 8 |
| ಅರವತ್ತರ ಅರಳುಮರಳು..... | ರವೀಂದ್ರನಾಥ | 12 |
| ಸಮಯ ತಿರುಗಿಸಿದ ಕ್ಷಣ | ರಾಜೇಶ್ವರಿ | 14 |
| ಮದುವೆ ಮಾಡಿ ನೋಡು..! | ಅರವಿಂದ.ಜಿ. | 15 |
| ಶ್ವಾನ ಪ್ರಸಂಗ | ಲತಾ ಹೆಗಡೆ | 18 |
| ಅಂಡರ್–ಗ್ರೌಂಡ್ ವೈರಿಂಗ್ | ಇ.ಆರ್. ರಾಮಚಂದ್ರನ್ | 21 |
| ಸೂತಕದ ಮನೆಯಲ್ಲೂ...... | ಜಯಲಕ್ಷ್ಮಿ ಭಟ್ | 24 |
| ತುಂತುರು | ದಂನಆ | 26 |
| ಕುಮಾರನ ಕಿಡ್ನ್ಯಾಪ್ | ಪಾಲಹಳ್ಳಿ ವಿಶ್ವನಾಥ್ | 27 |
| ಚಪ್ಪರಿಸಿ ತಿನ್ನಬಹುದಾದ.... | ಕೆ.ಎಸ್.ಸೋಮೇಶ್ವರ | 30 |
| ಈಗಿನ್ನೂ ನೆನ್ನೆ | ಕುಮುದ ಪುರುಷೋತ್ತಮ್ | 32 |
| ದೀಡ ಶ್ಯಾಣ್ಯಾ | ವಿಲಾಸ ನಾ. ಹುದ್ದಾರ | 34 |
| ನಮ್ಮಪ್ಪನ ಉದ್ಯೋಗ ಪರ್ವ | ಶ್ರೀಧರ ಬಾಣಾವರ | 35 |


**ವ್ಯಂಗ್ಯ ಚಿತ್ರಗಳು :**
**ಹೊರಪುಟ : ರಾಂಕಿ,**
**ಒಳಪುಟಗಳು : ರಾಂಕಿ, ಅಶೋಕ್ ಹೆಮ್ಮಿಗೆ**

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಒಂದು ದೇಶ, ಒಂದು ಚುನಾವಣೆ

ಪತ್ರಿಕೆ

ಸಾಧಕ, ಬಾಧಕಗಳ ಸಮೀಕ್ಷೆ ಸೂಕ್ತ!!

* * *

ಮಹಿಳಾ ಕ್ರಿಕೆಟ್ ಮೇಲುಗೈ ಸಾಧಿಸುತ್ತದೆ ಎಂಬುದು ಕುಹಕ
ಎಂದರೂ ತಪ್ಪಾದೀತು !!!

* * *

ಚುನಾವಣಾ ಬಾಂಡ್ ಎಂಬ ಸುಂಟರ ಗಾಳಿ

ದೇಶದಲ್ಲೆಲ್ಲ ಹರಡುತ್ತಿದೆ !!

* * *

ಅಭ್ಯರ್ಥಿ ಸಿಕ್ಕದೆ ಕೈಗೆ ತಲೆನೋವು !

ಪತ್ರಿಕೆ

ವೈದ್ಯಕೀಯ ಪವಾಡ ಅನ್ನಬಹುದು !!

* * *

ದಳಕ್ಕೆ ಮುಳುವಾಗಲಿದೆಯೇ ಕಮಲದ ಸಖ್ಯ?

ಪತ್ರಿಕೆ

ಕಾದುನೋಡಬೇಕು !

* * *

ಕಾಂಗ್ರೆಸ್‌ಗೆ ಭ್ರಷ್ಟಾಚಾರವೇ ಆಕ್ಸಿಜನ್.

ಮಾನ್ಯಪ್ರಧಾನಿಗಳು

ರಸಾಯನಶಾಸ್ತ್ರ ಪಂಡಿತರು ಚಕಿತರಾದರಂತೆ

* * *

123 ಅಡಿ ಎಂ ಟಿ ರ್ ದೋಸೆ ಗಿನೆಸ್ ದಾಖಲೆಗೆ

ಸುದ್ದಿ

ಅಜೀರ್ಣ ಆದೀತು ಹುಷಾರ್ !

■

# ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ನಾವೆಲ್ಲಾ ಚಿಕ್ಕವರಾಗಿದ್ದಾಗ ಆಡುತ್ತಿದ್ದ ಒಂದು ಅತಿಪ್ರಿಯ ಆಟವೆಂದರೆ "ಟೆಲಿಫೋನ್" ಆಟ. ಎರಡು ಕಡ್ಡಿ ಪೆಟ್ಟಿಗೆಗಳ ಒಳ ಪೆಟ್ಟಿಗೆಗಳನ್ನು ತೆಗೆದುಕೊಂಡು ಒಂದು ಉದ್ದವಾದ ದಾರದಿಂದ ಅವೆರಡಕ್ಕೂ ಸಂಪರ್ಕ ಕಲ್ಪಿಸಿ ನಾನು ಮತ್ತು ನಮ್ಮಕ್ಕ ದೂರ ದೂರದಲ್ಲಿ ನಿಂತು ಒಬ್ಬರು ಒಂದು ಪೆಟ್ಟಿಗೆಯಲ್ಲಿ ಪಿಸುಗುಟ್ಟಿದರೆ ಇನ್ನೊಂದು ತುದಿಯಲ್ಲಿದ್ದವರಿಗೆ ಆ ಪಿಸುಗುಟ್ಟುವಿಕೆ ಬಹು ಸ್ಪಷ್ಟವಾಗಿ ಕೇಳುತ್ತಿತ್ತು. ಮೊಟ್ಟಮೊದಲ ಬಾರಿ ನಾವು ಆ ಆಟ ಆಡುವಾಗ ನಾನು ಕೇಳಿಸಿಕೊಂಡ ನಮ್ಮಕ್ಕನ ಮಾತೆಂದರೆ, "**ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ....**" ಎಂಬ ಸಾಲುಗಳು.

ಯಾಕೆ ಹೇಳುಕ್ಕೆ ಬಂದೆ ಅಂದರೆ ನೋಡ್ತಾ ನೋಡ್ತಾ ಮತ್ತೆ ಒಂದು ಯುಗಾದಿಯ ಸಂಭ್ರಮ ನಮ್ಮ ಮುಂದೆ ಬಂದು ಮನೆ ಮನಗಳನ್ನು ಸ್ವಚ್ಛಗೊಳಿಸಿ ಸಿಂಗರಿಸುವ ಅವಕಾಶವನ್ನು ನೀಡಿದೆ. ಕೊರವಂಜಿಯ ದಿನಗಳಿಂದಲೂ ಯುಗಾದಿ ವಿಶೇಷಾಂಕವನ್ನು ಓದುಗರು ಕಾತರದಿಂದ ಇದಿರುನೋಡುತ್ತಿದ್ದರು. ಅಪರಂಜಿಯ ಯುಗಾದಿ ವಿಶೇಷಾಂಕಗಳೂ ಓದುಗರ ಒಲವನ್ನು ಗಳಿಸುವುದರಲ್ಲಿ ಯಶಸ್ವಿಯಾಗಿದ್ದವು. ಕಳೆದ ವರ್ಷ ಅಕ್ಟೋಬರಿನಲ್ಲಿ ಅಪರಂಜಿಯ ನಲವತ್ತನೆಯ ಹುಟ್ಟುಹಬ್ಬದ ಪ್ರಯುಕ್ತ ಒಂದು ವಿಶೇಷ ಸಂಚಿಕೆಯನ್ನು ತಂದನಂತರ ಈ ವರ್ಷದಿಂದ ಅಕ್ಟೋಬರ್ ತಿಂಗಳಲ್ಲೇ ವಿಶೇಷಾಂಕವನ್ನು ಹೊರತರುವುದೆಂದು ನಿರ್ಧರಿಸಿದ್ದೇವೆ.

ಈ ಯುಗಾದಿಯ ಶುಭ ಸಂದರ್ಭದಲ್ಲಿ ನಮ್ಮ ಅಪರಂಜಿ ಬಳಗದ ಎಲ್ಲ ಓದುಗರಿಗೆ, ಲೇಖಕ ಲೇಖಕಿಯರಿಗೆ, ವ್ಯಂಗ್ಯಚಿತ್ರಕಾರರಿಗೆ, ಜಾಹಿರಾತುದಾರರಿಗೆ ಮತ್ತು ಎಲ್ಲ ಹಿತೈಷಿಗಳಿಗೆ ಭಗವಂತನು ಆಯುರಾರೋಗ್ಯ ಸಂತನ ನೆಮ್ಮದಿಗಳನ್ನು ಕರುಣಿಸಲೆಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.



# ಕಚ್ಚೆ ಸೀರೆ ಮತ್ತು ಕಟ್ಟಿನ ಸಾರು!

ಜಯಶ್ರೀ ದೇಶಪಾಂಡೆ

ಆ ಕಚ್ಚೆ ಸೀರೆ ಉಟ್ಕೋಳ್ಳುದಂದ್ರೆ ನನಗೆ ಮೊದಲೇ ಜೀವಕ್ಕೆ ಬಂದಿತ್ತು. ಆದರೆ ಮಾಯಿ ಆ ಮಂಗಳವಾರದ ದಿನ ಬೆಳಗಾಗೆದ್ದು,

"ಇದು ಮನೀಪದ್ಧತಿ, ನಾವೆಲ್ಲಾ ನೌವಾರೀ ಬನಾರಸೀ ಶಾಲೂ (ಅರ್ಥಾತ್ ಒಂಬತ್ತು ಗಜದ ಪಟ್ಟೆ ಸೀರೆ) ಉಟ್ಗೊಂಡೇ ಮಂಗಳಾಗೌರಿ ಪೂಜಾ ಮಾಡಿದ್ದು. ನೀವೂ ಇಬ್ರೂ ಉಟುಗೊಳ್ರಿ ಇಕಾ, ಇವೆರಡೂ ಶಾಲೂ ತೊಗೊಂಡು ನಿಮಗ ಯಾವ ಬಣ್ಣ ಬೇಕೋ ಅದನ್ನ ಆರಿಸಿಗೊಂಡು ಕಚ್ಚಿ ಹಾಕಿ ಉಟ್ಗೊಂಡು ಬರ್ರಿ. ನನಗ ಭಾಳ ಕೆಲಸ ಬಿದ್ದದ..ತಯಾರಿ ಮಾಡಬೇಕು" ಒಂದೇ ಮಾತಿನೊಳಗೆ ಇಷ್ಟು ಹೇಳಿ ಮುಗಿಸಿ ತಮ್ಮ ಇಳಕಲ್ ಸೀರೆಯ ಕಚ್ಚೆ ತೀಡಿಕೊಳ್ತ ನಮಗಿಬ್ಬರಿಗೂ ಒಂದರ್ಥದಲ್ಲಿ–'ಹೇಳಿದ್ದು ಮಾಡ್ರಿ' – ಅನ್ನುವ ಸೂಕ್ಷ್ಮ ಆದೇಶ ಕೊಟ್ಟು ಮಾಯಿ ಒಳಗೆ ಹೋದರು.

ಶ್ರಾವಣ ಬಂದಿತ್ತು, ಮದುವೆ ಆದ ಹೊಸತು...ಹೊಸ ವಧುಗಳು ಮಾಡುವ ನಾಲ್ಕು ಮಂಗಳವಾರದ ಗೌರೀಪೂಜೆ ಒಂದು ರೀತಿಯಲ್ಲಿ ಕಟ್ಟಾ ಶಾಸ್ತ್ರದ ಪ್ರಕಾರ ನಡೀಬೇಕಿದ್ದ ಪದ್ಧತಿ. ಆವತ್ತುಮಂಗಳಾಗೌರಿ ಪೂಜೆ ಮಾಡಬೇಕಿದ್ದವರು ನಾನು ಮತ್ತು ನನ್ನ ಓರಗಿತ್ತಿ ಅಂದರೆ ಭಾವನ ಹೆಂಡತಿ– ನನಗಿಂತ ದೊಡ್ಡವಳು, ಆದರೂ ಅಣ್ಣ ತಮ್ಮ ಇಬ್ಬರದೂ ಮದುವೆ ಎರಡೇ ದಿನಗಳ ಅಂತರದಲ್ಲಿ ನಡೆದಿತ್ತು.

ನಮ್ಮೆದುರು ಕನಿಷ್ಟಪಕ್ಷ ಮೂರು ಕೆಜಿ ತಲಾ ತೂಕದ್ದಿರಬಹುದಾದ ಎರಡು ಬನಾರಸೀ ಶಾಲೂ ಕೂತಿದ್ದುವು. ನಮಗೂ ಮದುವೆಯಲ್ಲಿ ಅಪ್ಪ ಕೊಟ್ಟ ನಮ್ಮವೇ ಹೊಸ ನಮೂನೆಯ (ಅಂದರೆ ಆರು ಮೀಟರ್ ದು) ಬನಾರಸಿ ಶಾಲೂಗಳು ಇದ್ದುವು ಖರೆ, ಆದರೆ ಅವತ್ತು ಅತ್ತೆ ಮನೆಯದೇ ಸಡಗರ ಎದ್ದು ಜಿಗೀತಿತ್ತು, ಅದಕ್ಕೇ ಅಂದು ಮಾಯಿ ಖಾಸ್ ತಮ್ಮ ಅಲಮಾರಿಯಿಂದ ಘಮಘಮಿಸೂ ಎರಡು ಶಾಲೂ ತಂದಿದ್ದರು. ಸೀರೆ ಉಡೂದೇನು ಹೊಸತಿರಲಿಲ್ಲ ನಮಗೆ, ಕಾಲೇಜಿಗೂ ಕೆಲವೊಮ್ಮೆ ಉಡುತ್ತಿದ್ದೆ. ಆದರೆ ಒಂಬತ್ತು ಗಜದ್ದು. ಅಯ್ಯಪ್ಪಾ!! ಅವರ ಹಿಂದೆ ಬಂದು ನಿಂತಿದ್ದ ಅಂಕತ್ಯಾ– ಎಂಬ ಸೋದರತ್ತೆ– ಅತ್ಯಾ ಮಾತಾಡದಿದ್ದರೂ ಕಚ್ಚೆ ಸೀರೆಯ ಫರಮಾಯಿಷ್ ಅವರದೂ, ಅಥವಾ ಅದು ಅವರದೇ ಆಗಿದ್ದು ಅದು ಚಾಲ್ತಿಗೆ ಬಂದದ್ದು ಮಾಯಿ ಕಡೆಯಿಂದ ಎಂಬ ನಮ್ಮ ಅನುಮಾನ ಒಂದ್ರೀತಿ ಖರೆ ಇತ್ತು.

ಹೀಗೆ ಆ ಮಣಭಾರ ತಂದಿಟ್ಟು ಇಬ್ಬರೂ ಸೊಸೆಯಂದಿರನ್ನು ಅವುಗಳೊಳಗೆ ಸಿಗಿಸಿ ಖುಶಿ ಪಡುವವರಿದ್ದರೇನೋ ಅನಿಸಿ ನಾವಿಬ್ಬರೂ ಮುಖ ಮುಖ ನೋಡಿಕೊಂಡು ನಕ್ಕೆವು.ಆದರೆ ಅವೆರಡೂ ಎಷ್ಟು ಚಂದ ಇದ್ದುವೆಂದರೆ ಬೇಡ ಅನ್ನುವ ಮನಸ್ಸು, ಇಲ್ಲ ಅನ್ನುವ ಧೈರ್ಯ ಎರಡೂ ಇರಲಿಲ್ಲ...ಅವುಗಳ ಬಣ್ಣ, ಅಂಚು ಸೆರಗಿನ ಜರಿ, ಸೀರೆಯ ತುಂಬ ಒಂದೊಂದು ಇಂಚಿಗೂ ಅರಳಿಕೊಂಡಿದ್ದ ಪುಟ್ಟ ಪುಟ್ಟ ಕಮಲದ ಬುಟ್ಟಾ ಎಲ್ಲಾ ಮರಳು ಮಾಡುವಷ್ಟು ಗಾಢ.

ನಾನೇನೋ ಸ್ವಲ್ಪ ಹೈಟು (ಪರವಾಗಿಲ್ಲ ಅನ್ನುವಷ್ಟು ದಪ್ಪ ಸಹ) ಇದ್ದವಳು. ನನ್ನ ನೆಗೆಣ್ಣಿ ಅಥವಾ ಓರಗಿತ್ತಿ ಐದಡಿಗೆ ಎರಡಿಂಚು ಕಡಿಮೆ. ಕುಳ್ಳಿ ಎಂದು ಖಂಡಿತ ಹೇಳಬಹುದು. ಅವಳದೇ ಫಜೀತಿ, ಮಾಯಿ ಎತ್ತರದವರು, ಅದರಲ್ಲೂ ಬನಾರಸೀ ಶಾಲೂಗಳನ್ನು ಹೆಚ್ಚಾಗಿ ಉದ್ದುದ್ದಕ್ಕೆ ಇರುವ ಉತ್ತರದವರಿಗಾಗಿಯೂ

ಮಾಡಿರುತ್ತಾರಾದ್ದರಿಂದ ಅವಕ್ಕೆ ಉದ್ದ ಅಗಲಗಳೂ ಭರಪೂರ. ಮಾಯಿಗೆ ಮತ್ತು ಅಂಥವರಿಗೇ ಸರಿ ಆಗುವ ಸೀರೆಗಳವು.

ಈಗ ನಮ್ಮ ಕುಳ್ಳಕ್ಕ ಸೀರೆ ಎತ್ತಿ ಹಿಡಿದು ಅವಳ ತಲೆ ಮೇಲಿಂದಲೂ ಎತ್ತರಕ್ಕೆ ಏರಿ ನಿಂತಿದ್ದ ಅದರಲ್ಲಿ ಕುತ್ತಿಗೆವರೆಗೂ ಮುಳುಗಿ, ಅಂತರ್ಪಟದ ಹಿಂದೆ ನಿಂತ ವಧುವಿನ ಥರ ಮಾಯವಾಗಿದ್ದು ಒಂಥರಾ ಮಜಾ ತರಿಸಿ ಇನ್ನಷ್ಟು ಕಿಸಿ ಕಿಸಿ ನಕ್ಕೆವು. ಹಿಂದಿನ ದಿನ ಆರಿಸಿ ಇಟ್ಟುಕೊಂಡಿದ್ದ ಬ್ಲೌಸುಗಳಲ್ಲಿ ಯಾವುದು ಅದಕ್ಕೆ ಮ್ಯಾಚ್ ಆದೀತು ಎಂದು ತಡಕಾಡಿ ಜೋಡಿ ಮಾಡಿ ಸೀರೆ ಎತ್ತಿಕೊಂಡೆವು. ಈಗ ಬರುವಂತೆ ಆಯಾ ಸೀರೆಗೆ ಅದರದೇ ಅಟ್ಯಾಚ್ಡ್ ಬ್ಲೌಸ್ ಪೀಸು ಆಗೆಲ್ಲ ಬರ್ತಿರಲಿಲ್ಲ.ಹಾಗಾಗಿ ರೇಶ್ಮೆ ಕಸೂತಿ ಬಿಡಿಸಿದ ಬಣ್ಣ ಬಣ್ಣದ ಬ್ಲೌಸ್ ಇರ್ತಿದ್ದವು. ಅದರಲ್ಲೇ ಒಂದು ಮಲ್ಟಿಕಲರ್ ಇದ್ದರೆ ಸಾಕೇ ಸಾಕು...ಇನ್ನೀಗ ಉಡಬೇಕಲ್ಲ? ಮಾಯಿ ತುಂಬಾ ಬಿಜಿ ಇದ್ದರು. ಇನ್ನೊಂದೆರಡು ಗಂಟೆ ಕಳೆದರೆ ಮನೆಗೆ ಪೂಜೆಯ, ಊಟದ ಅತಿಥಿಗಳು ಬರಲಿಕ್ಕೆ ಶುರುವಾಗಲಿತ್ತು.

ನಮ್ಮ ಬಳಗವೇ ತಲೆತುಂಬ ಅನ್ನುವಷ್ಟು ಇದ್ದರಲ್ಲ. ಅವರೆಲ್ಲ ಊಟಕ್ಕೆ, ಪ್ಲಸ್ ವಿಜಾಪುರದ ಹಲವೆಂಟು ಮನೆತನದ ಆಪ್ತೇಷ್ಟರು. ತಾಯಿ ಇಲ್ಲದ ನನಗೆ ತವರು ಮನೆಯಿಂದ ಅಂದರೆ ಅಣ್ಣ, ಅಪ್ಪ, ಸೋದರತ್ತೆ, ಹೀಗೆ ಕೆಲವರೇ. ವಾರಗಿತ್ತಿಯ ತವರುಮನೆ ಬಳಗವೂ ಬರುವುದಿತ್ತು. ಹಾಲ್ ತುಂಬ ಹಾಸಿದ ಜಮಖಾನಗಳು, ಒಂದು ಬದಿಯಲ್ಲಿ ಮಂಗಳಾಗೌರಿ ನಾನಾ ಬಗೆಯ ಆರಾಸ/ಮಂಟಪ ದೀಪಗೀಪ ತಯಾರು ಮಾಡಿಸಿಕೊಂಡು ಪೂಜೆಗೆ ಬಂದು ಕೂತಿದ್ದಳು.ಅಡುಗೆಯ ಕೃಷ್ಣಪ್ಪನ ಜಬರ್ದಸ್ತ್ ಮೃಷ್ಟಾನ್ನ ಹಿತ್ತಲಿನಲ್ಲಿ ಹಾಕಿದ ಚಪ್ಪರದೊಳಗೆ ತಯಾರು ಆಗ್ತಿತ್ತು. ಅದರಲ್ಲೂ ಅವನ ಮಂಡಿಗೆ ಅಂದರೆ ಅತಿ ಸ್ಪೆಶಲ್ ಮಂಡಿಗೆ! ಎಂದೆಂದೂ ಹದ ತಪ್ಪದ ಒಂದೇ ಅಳತೆಯವು. ಬಾಯಿಗಿಟ್ಟರೆ ಅರೆಕ್ಷಣದೊಳಗೆ ನಾಲಿಗೆಯಲ್ಲೇ ಕರಗುವಂಥ ಮಂಡಿಗೆ. ಎಷ್ಟೋ ಬಳಗದವರು ಕೃಷ್ಣಪ್ಪನ ಅಡುಗೆ ಮತ್ತು ಅವನ ಮಂಡಿಗೆಯ ಮೆನು ಇದ್ದ ಯಾವುದೇ, ಯಾರದೇ ಸಮಾರಂಭವನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ ಎನ್ನುವುದು ಖರೆ ಮಾತೇ!

ಅಂತೂ ಕಚ್ಚೆ ಸೀರೆ ಉಡುವ ಘನಘೋರ ಪ್ರಯಾಸದಲ್ಲಿ ನಾವಿಬ್ಬರೂ ಮುಳುಮುಳುಗಿ ಎದ್ದು ಹೇಗೋ ಒಂದು ಕಚ್ಚೆಯ ರೂಪ ತರಿಸಲು ಹೆಣಗಾಡಿದೆವು...ಸೀರೆ ಎತ್ತಲೇ ಒದ್ದಾಡಿದ ನೆನಪು ಈಗಲೂ ನಗು ಮೂಡಿಸುತ್ತದೆ. ಅವಳಿಗೆ ನಾನು ನನಗವಳು ಕಚ್ಚೆ ಪ್ರಾಜೆಕ್ಟ್ ಮುಗಿಸಲು ಕೈ ಹಚ್ಚಿ ಒಟ್ಟಿನಲ್ಲಿ ಆ ಒಂಬತ್ತೂವರೆ ಗಜಗಳನ್ನು ನಮ್ಮ ನಮ್ಮ ಶರೀರಕ್ಕೆ ಹೇಗೋ ಒಂದು ಪ್ಯಾಟರ್ನ್ ನಲ್ಲಿ ಸುತ್ತಿಕೊಂಡು ನಿಂತೆವು.

ಆಗ ಬಂದರು ಗಂಗಕ್ಕ...ನನ್ನ ಮಾವನವರ ಸೋದರತ್ತೆಯ ಮಗಳು. ಗಂಗಾಭಾಗೀರ್ತಿ! ತೀರ್ಥರೂಪಿಣಿ– ಸಾಕ್ಷಾತ್ ಎಂಕೆ ಇಂದಿರಾರ ಫಣಿಯಮ್ಮ ಸ್ವರೂಪಿ. ಅವರ ಹೈಟು ಅಚ್ಚರಿಪಡಿಸಿಬಿಡುತ್ತಿತ್ತು, ಐದಡಿ ಎಂಟಿಂಚು? ಇರಬಹುದು. ಒಂದೇ ಕಡ್ಡಿಯಂಚಿನ ತೆಳ್ಳನೆಯ ನೌವಾರಿ ಉಟ್ಟು ಆ ದಿನಗಳ ಪದ್ಧತಿಯನ್ನು ಪಾಲಿಸುತ್ತ ತಲೆ ತುಂಬಾ ಸೆರಗು, ಮೊಳಕೈ ವರೆಗಿನ ಅಜ್ಜಿ ಬ್ಲೌಸ್ ಹಾಕಿ ಫಟಾಫಟ್ ವೇಗದ ನಡಿಗೆ ಇಟ್ಟು ಬರುವವರು ಗಂಗಕ್ಕ. ಮಾತು ಜೋರು ಆದರೆ ಮನಸ್ಸು ಹೂವಿನ ಹಾಗೆ. ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ.

"ಏನು ನಡಿಸೀರೇ ಇಬ್ರೂ?"

ಅವರ ಕಂಚಿನ ಕಂಠಕ್ಕೆ ಮೊದಲೇ ಬೆದರಿ ಕೂತಿದ್ದ ನಮ್ಮ ಕಚ್ಚೆಯ ನೆರಿಗೆಗಳೇ ಸಡಿಲ ಆದಂಗನಿಸಿ ನಿಂತಲ್ಲೇ ಹಿಂದೆ ಮುಂದೆ ಸರಿದಾಡಿದೆವು.. ಆಗಿನ ಸೊಸೆಯಂದಿರು ನಾವು. ಅತ್ತೆಮನೆಯ ಎಮ್ಮೆಗೂ 'ಯಮುನಕ್ಕಾ ಅವರೇ' ಅಂತ ಕರೆದು ತಿಳಿದವರು...

ಗಂಗಕ್ಕ ಒಳಗೆ ಕಾಲಿಟ್ಟವರೇ ಫಕಫಕ ಫಕ ನಗಲು ಶುರು ಮಾಡಿದರು.

ಯಾಕೆ? ತಿಳಿಯುವ ಬುದ್ಧಿ, ವಯಸ್ಸು ಇದ್ದರೆ ತಾನೇ ನನಗೆ?

"ಏ ಹುಡಗೀರ್ಯಾ... ಇದೇನು ಶೀರೀ ಉಟ್ಟಿರೇ? ಶಾಲೂ ಹೌದಿಲ್ ಇವು...ಮತ್ತಿದಕ್ಕ ಕಚ್ಚಿ ಅಂತಾರೇನು? ಹ್ಹೆಹ್ಹೆಹ್ಹೆಹ್ಹೆ..ಯಾರು ಕಲಿಶಿದರಪ್ಪಾ..ಅಳ್ಳಳ್ಳೀ ಬಾವಾ ಕಾವೀ ಸುತಗೊಂಡಂಗ"

ಅಂತ ಉರುಳುರುಳಿ ನಕ್ಕರೂ ಮತ್ತೆ ಮುಂದೆ ಹರಿದು ಬಂದು ನಮ್ಮಿಬ್ಬರನ್ನೂ ತೋಳು ಹಿಡಿದು ಜಗ್ಗಿ ತಮ್ಮ ಕಡೆ ಮುಖ ಮಾಡಿ ನಿಲ್ಲಿಸಿಕೊಂಡು 'ಬರ್ರಿಲ್ಲೆ, ತತಾ ನಾ ಉಡಸ್ತೀನಿ' ಅಂದು ಮದಲ ಆ ಪರಕಾರ (ಲಂಗ) ಬಿಚ್ರಿ ಅದರ ಮ್ಯಾಲೆ ನೌವಾರೀ ಉಡಂಗಿಲ್ಲ ಹುಚ್ಚಗೋಳ್ರಾ..' ಅಂದವರೇ ನಮ್ಮ ಪೆಟಿಕೋಟ್ಸ್ ಬಿಚ್ಚಿಸಿದರು!

ಪರಕಾರ ಅರ್ಥಾತ್ ಲಂಗದ ಮೇಲೆ ಆ ಒಂಬತ್ತು ಮೀಟರ್ ಜರೀ ಸೀರೆ ಸುತ್ತಿ ನಟ್ಟ ನಡು ಮಧ್ಯೆ ಒಂದು ನೆರಿಗೆ ಎತ್ತಿ ಹಿಂದೆ ಸಿಗಿಸಿಕೊಂಡು ಥೇಟ್ ಗ್ಯಾಸ್ ಸಿಲಿಂಡರಿನಾಕಾರಗಳಾಗಿ ಇಬ್ಬರೂ ನಿಂತಿದ್ದೆವು!

ನಾಚಿಕೆ ಉಕ್ಕುಕ್ಕಿ ಬಂತು, ಆದರೆ ಇನ್ನೊಂದು ದಾರಿ ಇಲ್ಲ. ಪೆಟಿಕೋಟ್ ಇಲ್ಲದೆ ಗಂಗಕ್ಕನೆದುರು ಸೆಮಿ ಕ್ಲಾಡ್ ಆಗಿ ನಿಂತೆವು. ಅವರ ಮಾತು ಜೊತೆಯಲ್ಲಿ ಎರಡೂ ಕೈ ಸರಸರ ಕೆಲಸಕ್ಕಿಳಿದುವು. ಗಂಗಕ್ಕ ನಮ್ಮ ಸೆಮಿ ಸ್ಟ್ರಿಪ್ ಟೀಸ್ ಮಾಡಿಸುವವರಾಗಿ ಕಂಡರು!

ರಾಶಿಯಾಗಿ ಕೆಳಗೆ ಬಿಚ್ಚಿ ಬಿದ್ದಿದ್ದ ಸೀರೆಯನ್ನೇ ಎತ್ತಿ ಬಿಡಿಸಿ ಸೊಂಟಕ್ಕೆ ಗಂಟುಬಿಗಿದು ಸೆರಗು ಒಪ್ಪ ಮಾಡುತ್ತ ಹತ್ತೆಂಟು ನೆರಿಗೆ ಹಿಡಿದರು. ನಡುವೆಯೇ 'ಇಕಾ, ಇನ್ನ ಕಾಲೆತ್ತು..' ಅಂದರು, ನಾ ಕಕ್ಕಾಬಿಕ್ಕಿಯಾದೆ, ಕಾಲು ಎತ್ತಿ ಎಲ್ಲಿಡಬೇಕು? ಎಷ್ಟು ಎತ್ತರಕ್ಕೆ? ಅಕ್ಕಪಕ್ಕದಲ್ಲಿ ಕಾಲಿಡಲು ಸ್ಟೂಲ್ ಏನಾದರೂ ಇದೆಯೋ ಅಂತ ಹೊರಳಿ ನೋಡಿದರೆ ಅಂಥದ್ದೇನೂ ಅಲ್ಲಿರಲಿಲ್ಲ.

ಹೆಚ್ಚು ಮಾತಿನವರಲ್ಲ ಗಂಗಕ್ಕ, ನನ್ನ ಸೊಂಟ ಹಿಡಿದವರೇ ಕಾಲು ಅತ್ತಿತ್ತ ದೂಡಿ ಸೀರೆಯ ಎಂಟು ನೆರಿಗೆಗಳ ಕರೆಕ್ಟ್ ಮಧ್ಯಭಾಗಕ್ಕೆ ವಿಭಜಿಸಿ ಹಿಂದಕ್ಕೆತ್ತಿ ಚನ್ನಾಗಿ ಬಿಗಿ ಕೂರುವಂತೆ ದಬಾಯಿಸಿ ಒತ್ತಿ ಹಿಂದೆ ಸಿಗಿಸಿದರು. ಅಷ್ಟೇ... ಹಿಂದೆ ಶಾಲೂದ ಗೇಣಂಚಿನ ಬಾರ್ಡರ್ ಚೊಕ್ಕವಾಗಿ ಹಿಂಗಾಲಿನ ತುದಿಯವರೆಗೆ ನಿಂತಿತು. ತೊಡೆಯ ಎಡಬಲಕ್ಕೆ ಕೊಂಚ ಸಡಿಲವಾಗಿದ್ದನ್ನು ಬಿಗಿ ಮಾಡುತ್ತ ಮುಂದೆ ಬಂದು ಇನ್ನೊಂದು ನೆರಿಗೆ ಎಳೆದುಕೊಂಡು ಸೊಂಟದ ಎಡಕ್ಕೆ ಸಿಕ್ಕಿಸಿ ಬಲಗೈಯಿಂದ ಅದರ ಪೌಚ್ ಅನ್ನು ನೇರಗೊಳಿಸಿ ಸೆರಗೆತ್ತಿ ಹಿಡಿದು ನನ್ನ ಬಲಭುಜ ಇಡೀ ಮುಚ್ಚುವ ಹಾಗೆ ಹೊಚ್ಚಿ,

"ಈಗ ನೋಡೂ..ಹೆಂಗ್ ಝುಕಾಸ್ ಕಾಣಸ್ತೀದಿ" ಅಂತ ನಕ್ಕರು. "ಶಾಲೂದ ಸೌಂದರ್ಯಕ್ಕ, ಅದರ ಕಚ್ಚಿಗೂ ಒಂದು ಗಮ್ಮತ್ತಿರತ್ತದ ತಿಳೀತೇನು? ಈಗಿನ ಕಾಲದ ಹುಡಿಗ್ಯಾರು" ಅವರ ಮಾತಿನಲ್ಲಿ ವ್ಯಂಗ್ಯ ಇರಲಿಲ್ಲ. ಆದರೆ ಅವನ್ನು ಆಡಿದ ಸಮಯ ಎಪ್ಪತ್ತರ ದಶಕದ್ದು.... ಅಂದಿನ ತರುಣಿಯರು ಅವರಿಗೆ ಹಾಗನಿಸಿದ್ದರೆ ಈಗ ಇನ್ನೇನು ಅಂತಿದ್ದರೋ? ನಗು ಬಂತಾದರೂ ನಗುವ ಧೈರ್ಯವಿರಲಿಲ್ಲ. ಅಷ್ಟು ಹಿರಿಯರೆದುರು

ನಗೋದೇ?!



ನಮ್ಮ ಕುಳ್ಳಕ್ಕನಿಗೆ ಶಾಲೂ ಉಡಿಸಲು ಒಂಚೂರು ಒದ್ದಾಡಿದರೂ ಕಡೆಗೂ ಮಿಶನ್ ಕಚ್ಚೆಸೀರೆಯನ್ನು ಪೂರೈಸದೇ ಬಿಡಲಿಲ್ಲ ಗಂಗಕ್ಕ. "ಇಕಾ, ನನ್ನ ಕೆಲಸಾತು ಇನ್ನ ಉಳದ ವಸ್ತ್ರಾ ವಡವೀ ಹಾಕೋರಿ, ತಲಿತುಂಬ ಮಾಲಿ ಕಟಿಗೋರಿ, ಅತ್ತರ್ ಅದ ಇಲ್ಲೋ ಛಂದಾಗಿ ಅತ್ತರ್ ಹಚಿಗೋರಿ.... ಏ ವಾಾಯೀ ನೋಡಬರ್ರಿಲ್ಲೆ ನಿಮ್ಮ ಸೊಸೆಂದರನ್ನ" ಗಂಗಕ್ಕನ ಕಂಚಿನ ಕಂಠ ಅವರ ಜೊತೆಯಲ್ಲೇ ಮನೆಯ ಒಳಭಾಗಕ್ಕೆ ಹೊರಟಿತು.ಅವರ ಅಂತ:ಕರಣ ಅವರ ಕೈಚಳಕವಾಗಿ ಆ ಶಾಲೂದ ನೆರಿಗೆಗಳಲ್ಲಿ ಅಡಗಿಕೊಂಡು ನಮ್ಮನ್ನು ಸುತ್ತುವರಿದಿತ್ತು.ಅಷ್ಟರೊಳಗೆ ಅವೊತ್ತು ನಮ್ಮ ಜೊತೆಗೇ ಮಂಗಳಾಗೌರಿ ಪೂಜೆ ಮಾಡಲಿಕ್ಕೆಂದು ಆಮಂತ್ರಿಸಿದ್ದ ಇನ್ನೂ ಆರೆಂಟು ನವವಿವಾಹಿತೆ ಸ್ನೇಹ- ಸಂಬಂಧಗಳ ಮನೆಯ ಹುಡುಗಿಯರು ಕೆಲವರು ತಾಯಿಮನೆಗೆ ಬಂದಿದ್ದ ಮೊದಲಗಿತ್ತಿಯರು, ಕೆಲವರು ನಮ್ಮ ಹಾಗೆ ಅತ್ತೆ ಮನೆಯಿಂದ...

ಹೊರಗೆ ಪೂಜೆ ಮಾಡಿಸಿ ಮಂಗಳಾ ಗೌರಿಯ ಕತೆ ಹೇಳಲು ಪುರೋಹಿತರು ಆಗಲೇ ಒಳಗೆ ಬಂದು ಬಾಳೆಯೆಲೆ ತುಂಬ ಹಚ್ಚಿದವಲಕ್ಕಿ ಮೊಸರು ತಿಂದು ಹಾಲು ಕುಡಿದು ಮಡಿ ಉಟ್ಟು ತಯಾರಾಗಿ ಕೂತಿದ್ದರು.

ಪೂಜೆ ಗೀಜೆ ಅಂದರ ರಜಾ ನಮಗೆ ಹೆಣ್ಮಕ್ಕಳಿಗೆ. ಕೋರ್ಟಿಗೆಲ್ಲಿಯ ರಜ? ಬಿಳಿ ಪ್ಯಾಂಟು ಕಪ್ಪು ಕೋಟು ಹಾಕಿ ಕೋರ್ಟಿಗೆ ಹೋಗಲು ರೆಡಿಯಾಗಿ, ನನ್ನ ಪತಿ ಮಹಡಿಯ ಮೆಟ್ಟಲಿಳಿದು ಕೆಳಗೆ ಬಂದವರು ನನ್ನ ಅವತಾರ ನೋಡಿ ಮುಗುಳ್ನಕ್ಕರು. ಅದರೂ ಆ ನಗು ನನಗೆ ಹೇಳಬೇಕಾದ್ದನ್ನು ಹೇಳಿತ್ತು!

ಮಧ್ಯಾಹ್ನದ ಊಟ ಬಂದವರನ್ನೆಲ್ಲ ಎಷ್ಟು ಮೆಚ್ಚಿಸಿತ್ತೆಂದರೆ ಅದರಲ್ಲೂ ಕೃಷ್ಣಪ್ಪನ ಕಟ್ಟಿನ ಸಾರಿನ ಪರಿಮಳಕ್ಕೆ, ರುಚಿಗೆ, ಬ್ಯಾಡಗಿ ಮೆಣಸು ಸೇರಿದ್ದ ಆ ಬಣ್ಣಕ್ಕೆ ಸೋಲದಿದ್ದವರೇ ಇರಲಿಲ್ಲ.ಇಷ್ಟಲ್ಲದರ ನಡುವೆ ನಾನೂ ನನ್ನ ಓರಗಿತ್ತಿಯೂ ಊಟ ಮಾಡುವಾಗ ಒಬ್ಬರಿಗೊಬ್ಬರು ಕೈ ತಾಕಿಸಿಕೊಂಡು ನನ್ನ ಶಾಲೂದ ಮೇಲೆ ಎರಡು ಚಮಚ ಸಾರು, ಅವಳದರ ಮೇಲೆ ಅಂಗೈಯಗಲ ಜಿಲೇಬಿಯ ಎಣ್ಣೆ, ಪಾಕ ಬೀಳಿಸಿಕೊಂಡಿದ್ದೆವು!!

ಆದರೂ ಆ ಶಾಲೂಗಳ ಮೇಲಿನ ಪುಟ್ಟ ಕಲೆಗಳು ಕಾಣಬರದಂತೆ ನಾವಿಬ್ಬರೂ ಆ ಭಾಗವನ್ನು ಸ್ವಚ್ಛವಾಗಿ ತೊಳೆದು ಒಣಗಿಸಿ ನೀಟಾಗಿ ಮಡಿಸಿ ಕೊಟ್ಟ ಗುಟ್ಟು ಮಾಯಿಗೆ ತಿಳಿದಿರಲೇ ಇಲ್ಲ ಅಂದುಕೊಂಡಿದ್ದೆವು! ಹುಚ್ಚುಗಳು!


ಯಾಕೆಂದರೆ ನಮ್ಮದು ಅಬೋಧ ತಾರುಣ್ಯ!

■

# ಕೊರೋನಾ – ಯುಗಾದಿ ಬೇವು ಬೆಲ್ಲ..

ಸುಮನಾ

ಪ್ರತಿ ವರ್ಷದಂತೆ ಬಾನುಲಿ, ಆಕಾಶವಾಣಿ ಬಿತ್ತರಿಸುವ "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ.."ಕುಲವಧು ಚಿತ್ರದ ಸುಮಧುರ ಗಾನ ಆಲಿಸುತ್ತಿದ್ದಂತೆ..ಮನಃಪಟಲದಲ್ಲಿ ಅನೇಕಾನೇಕ ಬಣ್ಣದ ಚಿತ್ರಗಳು ಹಾದುಹೋದವು.. ಶಾ "ರ್ವರಿ" ಸಂವತ್ಸರ ಇಷ್ಟೊಂದು "ವರೀ"ಫುಲ್ ವರ್ಷ ಆಗುವುದೆಂದು ಕನಸು ಮನಸಿನಲ್ಲೂ ಅಂದುಕೊಂಡಿರಲಿಲ್ಲ. 2020/21 ಯುಗಾದಿ ತಂದ ಸುನಾಮಿ ಮಾನವಕುಲವನ್ನು ಬುಡಸಹಿತ ಅಲುಗಾಡಿಸಿಬಿಟ್ಟಿತ್ತು.. ಏನೋ ಕಳವಳ, ಆತಂಕ ಕೋಲಾಹಲದ ನಡುವೆ ಈ ಯುಗಾದಿ ಸಂಭ್ರಮ ಹೇಗೆ ಆಚರಿಸುವುದು?? ಬರುವ ವರ್ಷ ಋತುಮಾನಕ್ಕೆ ತಕ್ಕಂತೆ ಹಬ್ಬ ಬಂದರೂ ಆಚರಿಸಲು ಮನುಕುಲ ಇರುವುದೋ ಇಲ್ಲವೋ ಬಲ್ಲವರಾರು?? ಹೀಗೆಲ್ಲ ಆಲೋಚನೆಗಳು.. ನಡುವೆ.. ಭವ್ಯ ಭಾರತದ ಭೂಮಿಪುತ್ರ, ಪ್ರಳಯ ನಿವಾರಕ, ಬಂಗಾರದ ಮನುಷ್ಯ ಮಾನ್ಯ ಶ್ರೀ." ಮೋದೀಜೀ"ಯವರ ದೂರದರ್ಶನ ಭಾಷಣದಲ್ಲಿ 22 ಮಾರ್ಚ್ ಭಾನುವಾರ ಜನತಾ ಕರ್ಫ್ಯೂ ಇರುತ್ತದೆಂದೂ ಅವಶ್ಯ ಸೇವೆಗಳ ಕರ್ಮಿಗಳ ಹೊರತು ಯಾರೂ ಹೊಸಿಲು ದಾಟುವಂತಿಲ್ಲವೆಂದೂ ಸಂಜೆ ಐದುಘಂಟೆಗೆ "ಕೊರೋನಾ ಸೈನಿಕ"ರಿಗೆ ಐದು ನಿಮಿಷಗಳ ಕಾಲ ಚಪ್ಪಾಳೆ ತಟ್ಟು ವುದರ ಮೂಲಕ, ಘಂಟಾನಾದ ಆರತಿ, ಇತ್ಯಾದಿಗಳನ್ನು ಮಾಡುತ್ತಾ ನಮನ ಸಲ್ಲಿಸಬೇಕೆಂದೂ ಕೈಗಳನ್ನು ಜೋಡಿಸಿ ಕೇಳಿದ ಕಳಕಳಿಯ ಮನವಿ ಹೃದಯ ಕಲಕಿತ್ತು ಮೈಮನ. ನವಿರೆದ್ದು..ಮನೆಯಲ್ಲಿದ್ದು ಇಷ್ಟಾದರೂ ಮಾಡಲೇಬೇಕೆಂಬ ತುಡಿತ, ಸಂಜೆ ಐದು ಘಂಟೆಗೆ ಸರಿಯಾಗಿ ಕೊರೋನಾ ಸೈನಿಕರಿಗೆ ಚಿರರುಣಿಗಳಾಗಿ ಆನಂದಾಶ್ರು ತುಂಬಿದ ನಮ್ಮ ಸೆಲ್ಯೂಟ್.. ನಾವೇ ಯುದ್ಧ ಗೆದ್ದು ಬಂದಂಥ ಅವರ್ಣನೀಯ ಹೆಮ್ಮೆ.ಅದೇ ದಿನವೇ ಲಾಕ್ಡೌನ್ ಘೋಷಣೆ....ಹೊಸಿಲು ದಾಟುವಂತಿಲ್ಲ ಹೊರಗೆ ಹೋಗುವಂತಿಲ್ಲ ಸರಿಯಾಗಿ 24ಮಾರ್ಚ್ ಮಧ್ಯರಾತ್ರಿಯಿಂದಲೇ ಲಾಕ್ಡೌನ್ ಜಾರಿಯಂತೆ..ಅಸಹಾಯಕ ಪರಿಸ್ಥಿತಿ...ಹಬ್ಬವೋ ಹಾಲಾಹಲದ ಕೋಲಾಹಲವೋ? ಈಗೇನು ಮಾಡುವುದು?? ಕಡೇ ಘಳಿಗೆಯಲ್ಲಿ ಟೇಲರ್ ಕೊಡಬೇಕಾದ ಮಕ್ಕಳ ಹೊಸ ಬಟ್ಟೆಗಳನ್ನು ತರಲೂ ಆಗದೇ ಮನಸ್ಸೆಲ್ಲಾ ಮಿಜಿ ಮಿಜಿ.



"...ಅಮ್ಮಾ ಈ ಸರ್ತಿ ನಾನು ಬೇಳೆ ಹೂರಣದ ಹೋಳಿಗೆ ಮಾಡುತ್ತೇನೆಂದು ಅಪರೂಪಕ್ಕೆ ಮಗಳು ಹೇಳಿದ ಸಂತೋಷ ಕರ್ಪೂರ ದಂತೆ ಕರಗಿತ್ತು..ಏಕೆಂದರೆ ರುಚಿ ಕರ ಒಬ್ಬಟ್ಟಿಗೆ ಬೇಕಾದ ಜೇನು ಬೆಲ್ಲ ತಾಜಾ ತರುತ್ತೇನೆಂದು ಹೇಳಿದ ಆಲೆಮನೆ ಬಸಪ್ಪ ಬರುವುದಕ್ಕೂ ಕತ್ತರಿ ಬಿದ್ದಿತ್ತು, ಪ್ರಪಂಚದ ಬಾಗಿಲಿಗೇ ಬೀಗ ಬಿದ್ದು. ಪ್ರಖರ ಸೂರ್ಯನ

ಪ್ರಕಾಶದಲ್ಲೂ. ಗಾಢಾಂಧಕಾರದ ಅನುಭವ ಕೊರೋನಾ ಕೆನ್ನಾಲಿಗೆ ಉಗುಳಿದ ಅಗ್ನಿಜ್ವಾಲೆ ಎಲ್ಲೆಡೆ ಸೃಷ್ಟಿಸಿದ ನೀರವ ಸ್ಮಶಾನ ಮೌನ.ಮನೆಯಲ್ಲೇ, ಹೌಸ್ ಅರೆಸ್ಟ್ ಆಗಿ ಉಸಿರು ಕಟ್ಟಿದಂಥ ಮರಣ ಸಂಕಟ..ಇನ್ನ ಮೂರು ದಿನಕ್ಕೆ ಪರ್ವಕಾಲದ ಹಬ್ಬ ಹೊಸ ವರ್ಷದ ಶುಭಾರಂಭ ಬೇರೆ..ಮುಂಜಾನೆ ಹೊಸಿಲಿಗೆ ಅಂಗಳಕ್ಕೆ  ನೀರು ತಳಿಸಿ ಅರಿಶಿನ ಕುಂಕುಮ ಹಚ್ಚಿ ಬಣ್ಣದ.ರಂಗೋಲಿ ಹಾಕಿ ಬಾಗಿಲಿಗೆ ಶುಭ ಮಂಗಳ ಮಾವಿನ ತೋರಣ ಕಟ್ಟಬೇಕು..ಮೋದಿಜೀಯವರ "ಲಕ್ಷ್ಮಣರೇಖೆ ದಾಟಿದರೆ ಕೊರೋನಾ ಎಂಬ" ರಾವಣ "ಮನುಕುಲದ ಪ್ರಾಣ ಅಪಹರಿಸಿ ಜೀವಹರಣ ಮಾಡಿ ನಡೆಸುವನು ಮಾರಣ ಹೋಮ...ಈ ಲಕ್ಷ್ಮಣ ರೇಖೆ..ನಮ್ಮೆಲ್ಲರನ್ನೂ "ಸುರಕ್ಷಣೆಯ ಪರಿಧಿ"ಯಲ್ಲಿ ಇಟ್ಟ ಕಾರಣ ಹಬ್ಬಕ್ಕೆ ಹೆಬ್ಬಾಗಿಲಿಗೆ ತೋರಣ ಕಟ್ಟಲು ಮಾವಿನ ಎಲೆಗಳನ್ನೂ ತರಲಾಗದ ಸ್ಥಿತಿ, ತರಲೆ ಕಿಟ್ಟಿ ಅಯ್ಯೋ, ಅದಕ್ಯಾಕಮ್ಮ ವರೀ ಮಾಡ್ತೀಯಾ??ಮನೇಲಿ ಮನಿ ಪ್ಲಾಂಟ್ ಇದ್ಯಲ್ಲಾ, ಮನೆಗೇ ಮನಿ ತೋರಣದಂತೆ ಇರುತ್ತೆ, ಶ್ರೀಮಂತ  ಅಂಬಾನಿ ಕೂಡಾ ಈ ಐಡಿಯಾ ಮಾಡಿರೋಲ್ಲ, ಅದನ್ನು  ಬಾಗಿಲಿಗೆ ಕಟ್ಟಬಹುದು ಅಂತ ತನ್ನ ಸೃಜನಾತ್ಮಕ ಪ್ರತಿಭೆ ತೋರಿಸಿ ಅಮ್ಮನ ಕೈಲಿ ಬೈಸಿಕೊಂಡ.

..ಪುಣ್ಯಕ್ಕೆ ಪಕ್ಕದ ಕಾಂಪೌಂಡ್ನಲ್ಲಿ ಬೆಳೆದ ಚಿಕ್ಕ ಮಾವಿನ ಮರ ನಮ್ಮನ್ನು ಬನ್ನಿ ..ಬನ್ನಿ..ಅಂತ ಕೈ ಬೀಸಿ  ಕರೆದಂತೆನಿಸಿತು. ಇಷ್ಟು ವರ್ಷ ಪಕ್ಕದಲ್ಲೇ ವಾಸ ಇದ್ರೂ..ನಮ್ಮ ಮನೆಯ ಮರಗಳ ಎಲೆಗಳು ಅವರ ಅಂಗಳದಲ್ಲಿ ಬೀಳುತ್ತವೆಂದು.. ಅದಕ್ಕೇ ಮರವನ್ನೇ ಕಡಿಸಿಬಿಡಿ ಎನ್ನುವ ಅವರ ಕ್ರೂರ ಸಲಹೆಯ ಕಾರಣಕ್ಕೆ ಸಸ್ಯಪ್ರೇಮಿ ಕುಟುಂಬದ ನಮ್ಮೆಲ್ಲರ ಮನನೊಂದು  ಅವರೊಂದಿಗೆ ಮಾತುಕಥೆ ನಿಂತುಹೋಗಿ ಅವರ ಸ್ನೇಹವೇ ಬೇಡವಾದಂತೆ ಇದ್ದ ನಮ್ಮ ಗೆಳೆತನ ಇದ್ದಕ್ಕಿದ್ದಂತೆ ಮನಸ್ತಾಪವೆಲ್ಲ ಮರೆತು  ಮಾವಿನೆಲೆಗಳ ಮಾತಿನೊಂದಿಗೆ ಶುಭಾರಂಭವಾಯಿತು..ಹಿಂದೆ ಅವರೇ ಕೊಟ್ಟಿದ್ದ ಮೊಬೈಲ್ ನಂಬರ್ಗೆ ಕಾಲ್ ಮಾಡಿ 'ಮಂಜುಳಾ.. ಅವರೇ, ನಾಲ್ಕೇ ನಾಲ್ಕು ಮಾವಿನೆಲೆ 'ತಗೋಬಹುದೇ ಅಂತ ಕೇಳಿ..ಅವರೂ ಮನಸಾರೆ ಖುಷಿಯಿಂದಲೇ  ಓಕೆ..ತಗೋಳಿ ಅಂದದ್ದು ಸ್ವರ್ಗ ಕೈಗೆ ಸಿಕ್ಕಂತಾಗಿತ್ತು. ಜೊತೆಗೆ ಅವರೂ ನಿಮ್ಮ ಮನೆಯ ಒಂದಷ್ಟು ಬೇವಿನ ಎಲೆ ಕಡ್ಡಿಗಳನ್ನು ಕೊಡಿ ಅಂದದ್ದು ಕೊಟ್ಟು ತೊಗೊಳುವ ಬಾರ್ಟರ್ ವ್ಯವಸ್ಥೆಯನ್ನು ನೆನಪಿಸಿತು. ಪಕ್ಕದಲ್ಲೇ ಇದ್ದರೂ ಇಷ್ಟು ದಿನ ಬಧ್ಧ ವೈರಿಗಳಂತಾಗಿದ್ದುದು ಈಗ ಪರಿತಪಿಸಿ, ಸಾಸಿವೆ ಕಾಳಿನಷ್ಟು ವಿಷಯವನ್ನು ಬೆಟ್ಟವನ್ನಾಗಿ ಮಾಡಿದ್ದೆವಲ್ಲಾ ಅನ್ನಿಸ್ತು.

ಕೊರೋನಾ ಎಚ್ಚರಿಕೆಯನ್ನು ಪಾಲಿಸುತ್ತಾ ಅವರಿಗೂ ಬೇವಿನ ಎಲೆ ಕಡ್ಡಿಗಳನ್ನು ಕಿತ್ತು ಅವರ ಕಾಂಪೌಂಡ್ನ ಮೇಲಿರಿಸಿ ಫೋನಾಯಿಸಿ ಹೇಳಿದ್ದಾಯ್ತು.. ಪುನಃ ಬೇರೆ ಕೈಗವುಸು, ಬಾಯಿಗೆ ಮಾಸ್ಕ್ ತೊಟ್ಟು ಎಣಿಸಿದಂತೆ ನಾಲ್ಕೆ ನಾಲ್ಕು ಮಾವಿನ ಎಲೆಗಳನ್ನು ಕಿತ್ತು ಉಪ್ಪು ನೀರು, ಸ್ಯಾನಿಟೈಸರ್‌ನಿಂದ ತೊಳೆದು ಮನೆಯ ಬಾಗಿಲಿಗೆ ಮನೆಯ ಪುಟ್ಟ ಹೂದೋಟದ ಸುಂದರ ಹೂವುಗಳ ಜೊತೆಗೆ  ಮಾಲೆ ಮಾಡಿ ಕಟ್ಟಿದ್ದಾಯ್ತು. ಮನೆಯ ಕಾಂಪೌಂಡ್ ಮೂಲೇಲಿ ಬೆಳೆದ ಚಿಕ್ಕ ಬೇವಿನ ಮರ ನಮ್ಮ ಪಾಲಿಗೆ ವರವಾಗಿತ್ತು. ಮಾವಿಗಿಂತ ಬೇವು ಸ್ವಲ್ಪ ಧಾರಾಳವಾಗಿ ದೊರಕಿ ವರ್ಷ ಪೂರ್ತಿಯಾಗಿ ನಿನಗೆ ಇನ್ನು "ಬೇವಿನ ಫಲ"ವೇ ಇರೋದು ಎಂದು ನಕ್ಕು  ಅಣಗಿಸಿದಂತಾಯ್ತು...ಟೈಲರ್, ಆಲೆಮನೆ ಬಸಪ್ಪ  ಎಲ್ಲರೂ ಬರಲು ರೆಡಿ ಇದ್ರೂ ಅಲ್ಲಲ್ಲೇ ಪೋಲಿಸ್ ಚೆಕ್ ಪೋಸ್ಟ್ ಇದ್ದ ಕಾರಣ ಬಂದು ತೊಂದರೆಗೆ ಸಿಕ್ಕಿಕೊಳ್ಳೋದು, ಮೈ ಮೇಲೆ ಬರೆ ಹಾಕಿಸಿಕೊಳ್ಳೋದು ಬೇಡ ಅಂತ ಹೇಳಿ ಉಭಯ ಕಡೆಯವರೂ ಒಪ್ಪಂದದ ಮಾತಾಡಿ ಸೇಫ್ ಮಾಡಿಕೊಂಡೆವು. ಜನವರಿ ತಿಂಗಳಲ್ಲಷ್ಟೇ ದೊಡ್ಡಪ್ಪನ ಮಗಳ ಮನೆ ಗೃಹಪ್ರವೇಶದ ಸಂದರ್ಭದಲ್ಲಿ ಬಂದಿದ್ದ

ಉಡುಗೆಗಳನ್ನೇ ಹಬ್ಬದ ದಿನ ತೊಡಬಹುದು ಎಂದು ಮಕ್ಕಳ ಐಡಿಯಾ ...ಸಾಂಪ್ರದಾಯಿಕ ಅಡುಗೆ "ಗಸಗಸೆ ಪಾಯಸ, ಹೂರಣದ ಒಬ್ಬಟ್ಟು ಆಂಬೋಡೆ" ಮಾಡಲಾಗದೆ ಇದ್ದದ್ದು ಎಲ್ಲರಿಗೂ ಮನದಲ್ಲಿ ನೆನೆಗುದಿ...ಏನೋ ಅಮೂಲ್ಯವಾದ್ದು ಕಳೆದುಕೊಂಡ ಸಂಕಟ ಮಗಳು ಬೇಳೆ ಒಬ್ಬಟ್ಟು ಮಾಡುವುದರ ಬದಲು ಸಕ್ಕರೆ ಜೊತೆಗೆ ಸಾಮಗ್ರಿಗಳನ್ನು ಹಾಕಿ ಸಕ್ಕರೆ ಹೋಳಿಗೆ ಮಾಡಿದಾಗ ಏನೋ ಹೊಸ ರುಚಿ ಮಾಡಿದಂತೆ, ಅವಳಿಗೆ ಹಿಮಾಲಯದ ತುದಿ ಏರಿದಷ್ಟು ಸಂತಸ ತಂದಿತ್ತು. ಮಾವಿನಕಾಯಿ ಸಿಗದೇ ಚಿತ್ರಾನ್ನ ಕೂಡ ಮಾಡಲು ಆಗದೇ ಹುಣಿಸೆ ಹಣ್ಣು, ಕೊಬ್ಬರಿ ತುರಿ ಒಣಮೆಣಸಿನಕಾಯಿ ಹಾಕಿ ರುಬ್ಬಿದ ಚಿತ್ರಾನ್ನ ಮಾಡಿದ್ದಾಯ್ತು. ಮನೆಯ ಕೈ ತೋಟದ ಎಷ್ಟೋ ಹೂವು, ತರಕಾರಿಗಳು ಬಹಳ ಸಹಾಯಕವಾದವು..ದೊಡ್ಡಪತ್ರೆ ಎಲೆ ಹಾಕಿ ಮಾಡಿದ "ಬೋಂಡಾ"ದ ದಿವ್ಯ ಅನುಭವ ವರ್ಣನಾತೀತ. ತೆಂಗಿನಕಾಯಿ ಹಾಕಿ ಮಾಡುವ ಅಡಿಗೆಗಳೆಲ್ಲವೂ ಖೋ ಕೊಟ್ಟಂತೆ ದೂರಾಗಿದ್ದವು..ಒಟ್ಟಾರೆ ಹೊಸರುಚಿ ಯ ದ್ವಾರ ತೆರೆದಿತ್ತು. ಕಳೆದ ವರ್ಷದ ಅಡಿಗೆಯ ರಸಗವಳದ ರುಚಿಯನ್ನು ಮನಸ್ಸಿಗೆ ಉಣಿಸುತ್ತಾ ಕೊರೋನಾ ಯುಗಾದಿಯ ರುಚಿ ಯನ್ನು ಹೊಟ್ಟೆಗೆ ಉಣಿಸುತ್ತಾ ಊಟ ಮುಗಿಸಿದ್ದಾಯ್ತು.ತರಲೆ ಕಿಟ್ಟು" ಅಮ್ಮಾ ..ಹೋಗಲಿ ಬಿಡು ಈ ಹೊತ್ತಿನಲ್ಲಿ ಭಕ್ತಿಯೇ ಮುಖ್ಯ.::" ಅಂತ ವೇದಾಂತ ಬೇರೆ..ಸಂಜೆ ಪಂಚಾಂಗ ಶ್ರವಣ ಕೆಲವು ಪಂಡಿತರು ಯೂಟ್ಯೂಬ್ನ ಮೂಲಕ ಅವರವರ ಮನೆಯಿಂದಲೇ ರಾಶಿ ಫಲ ಹೇಳುತ್ತಾರೆ ಕೇಳೋಣ ಅಂತ..ಛೇ, ಛೇ..ಎಂಥ ಪರಿಸ್ಥಿತಿ..ಗ್ರಹಗಳಿಗೇ ಗ್ರಹಚಾರವೇ?? ಎನ್ನುವಂತೆ.

ಊರಿಗೆ ಫೋನಾಯಿಸಿ ಯಾರು ಮಾತಾಡಿ ದರೂ ಒಂದೇ ಡೈಲಾಗ್ ಏನ್ಸಮಾಚಾರ?? ಏನಿಲ್ಲ ಹೌಸ್ ಅರೆಸ್ಟ್...ಉಮಹೇ ....ಅಷ್ಟೆ. (ಉಂಡ್ಯಾ ಮಲಗಿದ್ಯಾ, ಹೇತ್ಯಾ) ಮಗ ಏನಂತಾನೆ ಅಂದ್ರೆ "ಉಂಡುಂಡ್ಕಲ್ಲ ಗುಂಡ್ಕಲ್ ಸಿದ್ಧ "ಅಂತಾ ಆಗಿದಾನೆ ಅನ್ನೋ ಉತ್ತರ....ನಾಳೆ ವರ್ಷ ತೊಡಕು, ಸಧ್ಯ ಯಾವ ತೊಡಕೂ ಆಗದೆ ಹಬ್ಬ ಆದ್ರೆ ಸಾಕಪ್ಪಾ ಅಂತ ಎಲ್ಲರ ಆಲೋಚನೆ ಯುಗಾದಿ ಮಾರನೇ ದಿನದ ..ಹಬ್ಬ ಪುನಃ ಹೊಸಬಟ್ಟೆ ಧರಿಸಿ ಚಂದ್ರನನ್ನು ನೋಡುವ ನೆಪದಲ್ಲಿ ಹೊರಗಡೆ ಹೋಗಿ ಅಕ್ಕಪಕ್ಕದವರಿಗೆಲ್ಲಾ ಹೊಸ ದಿರಿಸುಗಳನ್ನು ಪ್ರದರ್ಶಿಸುತ್ತಿದ್ದ ಸುಂದರ ನಾಟಕಕ್ಕೆ ಬಿದ್ದ ಕಡಿವಾಣ..ಅರಗಿಸಿಕೊಳ್ಳುವುದೇ ಕಷ್ಟಸಾಧ್ಯ..ಕಬ್ಬಿಣದ ಕಡಲೆ ಕೊರೋನಾ ಸೃಷ್ಟಿ ಸಿದ ಪ್ರಮಾದಕರ ಸವಾಲುಗಳು ಉತ್ತಮ ಧನಾತ್ಮಕ ಅವಕಾಶ ಗಳನ್ನಾಗಿಸುವ ಸುವರ್ಣ ಸುಸಮಯವಾಗಿ ವಜ್ರದಂಥಹ ಕಠಿಣ ಸವಾಲುಗಳನ್ನು ಅಗಿದು, ಅರಗಿಸಿ ಜೀರ್ಣಿಸಿಕೊಳ್ಳುವಂಥ ಜಾಣ್ಮೆ ತಂದಿತು. ನೀನೊಲಿದರೆ "ಕೊರಡು ಕೊನರುವುದಯ್ಯಾ" ಎಂಬ ಗುರು ಬಸವಣ್ಣನವರ ವಚನದ ನುಡಿ.. ಕೊರೋನಾ ಕನವರಿಕೆಯ ಕಂಟಕದ ಸಮಯವನ್ನು ಅನೇಕಾನೇಕ ರೀತಿಯ ಜಾಣ್ಮೆ ಪ್ರದರ್ಶನ ಮಾಡುವ ದಿಸೆಯಲ್ಲಿ ಕೊನರಿಸಿದ್ದಂತೂ ಶತ ಪ್ರತಿ ಶತ ಸಾಕ್ಷಿಯಾಯಿತು.ಜಡ್ಡುಗಟ್ಟಿದ್ದ ಮೆದುಳಿನ ಅತ್ಯುತ್ತಮ ಚುರುಕು ಉಪಯೋಗಕ್ಕೆ ರಹದಾರಿಯಾಯಿತು. "ಅವಶ್ಯಕತೆಯೇ ಆವಿಷ್ಕಾರದ ಮೂಲ ಜನನಿ "ಎಂಬ ಜನಜನಿತ ನಾಣ್ಣುಡಿಯ ಅಪಾರ ಅನುಭವವಾಯಿತು ..ಈ ಕೊರೋನಾ ನಮಗಂತೂ ಕಡಿದಿದ್ದ ಸ್ನೇಹದ ಕೊಂಡಿಯ ಶಾಶ್ವತ ಗೆಳೆತನದ ಬೆಸುಗೆಯಾಯ್ತು..ಶಾರ್ವರಿ ನಂತರದ ಪ್ಲವ ಸಂವತ್ಸರವೂ ಮಾರ್ಚ್ 2021ರ ಹೊಸ ವರ್ಷದ ಯುಗಾದಿ ಸಂತಸವನ್ನ ಸ್ವಲ್ಪ ಮಟ್ಟಿಗೆ ಕಸಿದುಬಿಟ್ಟಿತು.ಶುಭಕೃತ್..ಬಂದಾಯ್ತು, ಮತ್ತೊಮ್ಮೆ ಓಮಿಕ್ರಾನ್ ದಾಳಿಯಾಗುತ್ತದೆ ಎಂಬ ಸುದ್ದಿಯೂ ಮುಗಿಯಿತು. ಆದರೂ ಏನಾದರೂ ಹೊಸ ಹೆಸರಿನ ವೈರಾಣು ಆವಿಷ್ಕಾರವಾಗುತ್ತಲೇ ಇರುತ್ತದೆ.. ನಮ್ಮ ಹೋರಾಟವೂ ನಿತ್ಯ

ನಿರಂತರ ಇದ್ದೇ ಇರುತ್ತದೆ.ಸಿಹಿ.. ಕಹಿ..ಇರುವುದೇ ಜೀವನ, ಸುಖೇ ದುಃಖೇ ಸಮೇಕೃತ್ವಾ..... ಭಗವದ್ಗೀತೆಯ ಶ್ಲೋಕವನ್ನು ನೆನೆಯುತ್ತಾ ಎಲ್ಲವೂ ಶುಭದಾಯಕವಾಗಲೆಂದು ಆಶಿಸೋಣ.ಈ ಶುಭ ಶೋಭಕೃತ್ ಪ್ರಜ್ವಲಿಸುವ ಹೊಳಪು ನೀಡಿದ್ದು, ಅಯೋಧ್ಯೆಯ "ಶ್ರೀ ಬಾಲರಾಮ"ನ ಮಂದಿರ ಸ್ಥಾಪನೆಗೆ ಐತಿಹಾಸಿಕ ಸಾಕ್ಷಿ ಯಾಗಿದ್ದು..ಅಜರಾಮರ. ಈ ವರ್ಷ "ಕ್ರೋಧಿ" ನಾಮ ಸಂವತ್ಸರ ಕಾಲಿಡಲಿದೆ..

ಯಾರ್ಯಾರು ಯಾರ್ಯಾರ ಕ್ರೋಧಕ್ಕೆ ಒಳಗಾಗುವರೋ ಕಾದು ನೋಡಬೇಕಿದೆ. ಏನೇ ಆದರೂ ಬರುವ "ವಿಶ್ವಾವಸು" ಸಂವತ್ಸರ ಲೋಕದ ವಿಶ್ವಾಸಗಳಿಸಿ, ಅದಕ್ಕೂ ಮುಂದಿನ ಸಂವತ್ಸರದಲ್ಲಿ ಭಾರತ ಜಗವನ್ನೇ "ಪರಾಭವ" ಗೊಳಿಸಿ, "ವಿಶ್ವಗುರು" ವಾಗುವುದು ನಿಸ್ಸಂಶಯ.

ಈ ಕ್ರೋಧಿ...ಕ್ರೋಧಾಗ್ನಿಯಲ್ಲಿ ಯಾರನ್ನೂ ಸುಡದೆ,

ತಂಪು, ತಂಪು, ಟಂಡಾ, ಟಂಡಾ ಕೂಲ್ ಕುಕುಂಬರ್‌ನಂತೆ ಎಲ್ರನ್ನೂ ಕೂಲಾಗಿಟ್ಟಿರಲೆಂದು ಹೃನ್ಮನಗಳಲ್ಲಿ ಆಶಿಸುತ್ತಾ,

"ಸಮಸ್ತ ಲೋಕಾ ಸುಖಿನೋಭವಂತು..ವಸುದೈವ ಕುಟುಂಬಕಂ"ಎಂದು ಹೃದಯಪೂರ್ವಕವಾಗಿ ಹಾರೈಸೋಣ.. ■

**ಲಕ್ಷ್ಮಣ್ ಕೊರವಂಜಿ**

ನಲವತ್ತರ ದಶಕದಲ್ಲಿ ಯುವ ಕನ್ನಡಿಗ
ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ
ಕೊಟ್ಟ ವ್ಯಂಗ್ಯಚಿತ್ರಗಳು ಹಲವು.
ಅವುಗಳಲ್ಲಿ ಇದೂ ಒಂದು – ನಿಮಗಾಗಿ.



# ಅರವತ್ತರ ಅರಳುಮರಳು–ಒಂದು ವ್ಯಾಖ್ಯಾನ

ರವೀಂದ್ರನಾಥ

ಅರವತ್ತು ವಯಸ್ಸಿಗೆ ಅರಳು ಮರಳು ಎಂಬ ನಾಣ್ಣುಡಿಯನ್ನು ಬಹುತೇಕ ಎಲ್ಲರೂ ಒಪ್ಪಿರುತ್ತಾರೆ. ಅರವತ್ತಕ್ಕೆ ಅರಳುಮರಳು ಎಂದು ಪ್ರಾಸ ಸರಿಹೋಗುತ್ತದೆ. ಆದ್ದರಿಂದಲೇ ಎಪ್ಪತ್ತಕ್ಕೆ ಅರಳುಮರಳು ಅಥವಾ ಎಂಬತ್ತಕ್ಕೆ ಅರಳುಮರಳು ಎಂಬುದು ಕಿವಿಗೆ ಹಿತಕರ ಎನಿಸುವುದಿಲ್ಲ.

ಈ ನಾಣ್ಣುಡಿ ಪ್ರಚಲಿತವಾದಾಗ ನಮ್ಮ ದೇಶದ ಸರಾಸರಿ ಜೀವಿತದ ಅವಧಿ ಸುಮಾರು ಬಹುಷಃ 45 ವರ್ಷಗಳಷ್ಟಿತ್ತು ಎಂದು ಅಂದಾಜಿಸಬಹುದು. ಆದ್ದರಿಂದ ಅರವತ್ತು ತಲುಪಿದ ಕೂಡಲೆ 60 ವರ್ಷದ ಶಾಂತಿಯ ಹೆಸರಿನಲ್ಲಿ ಸಂಭ್ರಮಪಡುತ್ತಿದ್ದರು. ಈಗಲೂ ಅದು ಆಚರಣೆಯಲ್ಲಿದ್ದರೂ ಬೇರೆ ಬೇರೆ ಕಾರಣಗಳಿಗಾಗಿ ಸಂಭ್ರಮ ಪಡುತ್ತಾರೆ.ಈಗ ದೇಶದ ಬಹುತೇಕ ಉನ್ನತ ಹುದ್ದೆಗಳೆಲ್ಲವೂ ದಕ್ಕುವುದೇ ಅರವತ್ತು ವಯಸ್ಸಿನ ನಂತರ. ಉನ್ನತ ಹುದ್ದೆಗಳ ಜವಾಬ್ದಾರಿಗಳು ಹಾಗೂ ದೈಹಿಕವಾಗಿ ಬಹಳ ಶ್ರಮವೆನಿಸುವಷ್ಟು ಚಟುವಟಿಕೆಗಳಿರುತ್ತವೆ. ಈಗಿನ ಪರಿಸ್ಥಿತಿ ನೋಡಿದರೆ ಅರವತ್ತು ವಯಸ್ಸಿನವರೆಲ್ಲರೂ ಲೈಂಗಿಕ ಚಟುವ –ಟಿಕೆಯನ್ನೂ ಒಳಗೊಂಡಂತೆ ಸಕ್ರಿಯರಾಗಿರುತ್ತಾರೆ. ಇಷ್ಟೆಲ್ಲ ಮಾಡುವಾಗ ಅವರಿಗೆ ಅರಳು ಮರಳು ಮನಸ್ಥಿತಿ ಇರುತ್ತದೆ ಎಂದು ನಂಬುವುದು ಕಷ್ಟ. ಜೊತೆಗೆ ಈ ಗಾದೆಯನ್ನು ಮಹಿಳೆಯರಿಗೆ ಅನ್ವಯಿಸಿ ಹೇಳುವುದು ಬಹು ಕಡಿಮೆ..ಹಾಗಿದ್ದಲ್ಲಿ ಈ ಗಾದೆ ಮಾತು ತಪ್ಪೇ. ಹಾಗೇನೇ ಇಂದಿನ ಬದಲಾದ ಪರಿಸ್ಥಿತಿಗಳಲ್ಲಿ ನಾವು ಈ ಮಾತುಗಳನ್ನು ನಂಬಬಾರದೇ ಎಂಬ ಸಂದೇಹಗಳು ಮೂಡುತ್ತವೆ.

ಅರವತ್ತು ವಯಸ್ಸನ್ನು ತಲುಪಿದವರು ಬಹುತೇಕವಾಗಿ ನಿವೃತ್ತಿ ಹೊಂದುತ್ತಾರೆ. ನಿವೃತ್ತಿಯಾಗುವ ಹಂತದಲ್ಲಿ ಅವರು ಪೀಟರ್‌ನ ಸೂತ್ರಗಳಂತೆ ತಮ್ಮ ಮಟ್ಟದ ಅನರ್ಹತೆಗೆ ತಕ್ಕಂತೆ ಯಾವುದೋ ಒಂದು ಮಟ್ಟದ ಉನ್ನತ ಹುದ್ದೆಯಲ್ಲಿದ್ದು ಆ ಜವಾಬ್ದಾರಿಯನ್ನು ನಿಭಾಯಿಸಲು ಹೆಣಗುತ್ತಿರುತ್ತಾರೆ. ಅವರ ಮಾತುಗಳಿಗೆ ಸ್ವಲ್ಪ ಮಟ್ಟಿಗೆ ಬೆಲೆ ಇರುತ್ತದೆ. ಆ ಹಂತದಲ್ಲಿ ಮನೆಯಲ್ಲಿ ಅವರ ಮಾತಿಗೆ ಮೂಲತಃ ಅಷ್ಟು ಪ್ರಾಮುಖ್ಯತೆ ಇಲ್ಲದಿದ್ದರೂ ಮನೆಯಲ್ಲಿ ಅವರು ಬಹಳ ಕಡಿಮೆ ಕಾಲ ಇರುವ ಕಾರಣದಿಂದ ಅವರ ಮಾತುಗಳಿಗೆ ಹೆಚ್ಚು ಬೆಲೆ ಇರುತ್ತದೆಯೋ ಇಲ್ಲವೋ ಎಂಬುದು ಸ್ಪಷ್ಟವಾಗಿರುವುದಿಲ್ಲ.

ನಿವೃತ್ತರಾಗಿ ಹೆಚ್ಚು ಒತ್ತಡವಿಲ್ಲದ ವಾತಾವರಣಕ್ಕೆ ಬಂದ ನಂತರ ನಿಜ ಪರಿಸ್ಥಿತಿಯ ಬಗ್ಗೆ ಇವರಿಗೆ ಸ್ವಲ್ಪ ಕಾಲ ಹಿಡಿಯುತ್ತದೆ.ಈ ಸ್ವಲ್ಪ ಕಾಲದಲ್ಲಿಯೇ ಈ ಗಾದೆ ನಿಜವಾಗುವುದು. ಅರವತ್ತು ವಯಸ್ಸಾಗುವಾಗ ವಿವಾಹವಾಗಿ 30–35 ವರ್ಷಗಳೇ ಕಳೆದಿರುತ್ತವೆ. ಹೆಂಡತಿಗೆ ತನ್ನ ಗಂಡನ ಎಲ್ಲಾ ಬಂಡವಾಳವೂ ತಿಳಿದಿರುತ್ತದೆ. ಮೂರು ದಶಕಗಳಲ್ಲಿ ಗಂಡ ಮಾಡಿರುವ ತಪ್ಪುಗಳು ಹೆಂಡತಿಯ ನಾಲಗೆಯ ತುದಿಯಲ್ಲಿಯೇ ಇರುತ್ತದೆ. ಜೊತೆಗೆ ಮಕ್ಕಳ ಮೇಲೂ ತನ್ನ ಹಿಡಿತ ಹೊಂದಿರುತ್ತಾಳೆ.

ಹೀಗಾಗಿ ಬಹುತೇಕ ನಿರ್ಧಾರಗಳನ್ನು ಮಾಡುವ ಅಧಿಕಾರ ಯಜಮಾನತಿಯ ಕೈನಲ್ಲಿಯೇ ಇರುತ್ತದೆ. ಅಂತಹ ಸನ್ನಿವೇಶದಲ್ಲಿ ಆಗ ತಾನೆ ನಿವೃತ್ತನಾದ ಗಂಡನಿಗೆ ಯಾವುದೇ ಅಧಿಕಾರವಿಲ್ಲ ಎಂಬುದನ್ನು ಮನದಟ್ಟು ಮಾಡಿಸುವ ಕೆಲಸ ಮಾತ್ರ ಬಾಕಿ ಇರುತ್ತದೆ. ನಿವೃತ್ತನಾದ ಗಂಡ ಯಾಂತ್ರಿಕವಾಗಿ ಹೆಚ್ಚು ಯೋಚಿಸಿದೇ ಪೂರ್ವಾಪರಗಳ ಆಲೋಚನೆಗಳಿಲ್ಲದೆ ಹಿಂದಿನ ಹಾಗೆ ಮನೆಗೆ ಬರಲು ಯಾರನ್ನಾದರೂ ಆಹ್ವಾನಿಸುವುದು, ಯಾರಿಗಾದರೂ ಹಣವನ್ನು ನೀಡುವ ಆಶ್ವಾಸನೆ ನೀಡುವುದು, ಸ್ನೇಹಿತನ ಮನೆಗೆ

ಇಂತಹ ಸಮಯಕ್ಕೆ ಬರುತ್ತೇನೆಂದು ಒಪ್ಪಿಕೊಂಡಿರುವುದನ್ನು ಸುಳ್ಳು ಮಾಡುವುದು ಹೆಂಡತಿಯ ಮೊದಲ ಆದ್ಯತೆಯಾಗಿರುತ್ತದೆ. "ನೀವು ಯಾರನ್ನು ಕೇಳಿ ಹೀಗೆ ಮಾಡಲು ಒಪ್ಪಿಕೊಂಡಿರಿ". "ನಿಮಗೆ ಯಾರೂ ಹೇಳೋರು ಕೇಳೋರು ಇಲ್ಲ ಎಂದು ಕೊಂಡಿರುವಿರಾ ಹೇಗೆ" ಎನ್ನುವ ಮಾತುಗಳು ಸರಾಗವಾಗಿ ಬಹಳಷ್ಟು ಬಾರಿ ಕೇಳಿಸುತ್ತಿರುತ್ತದೆ. ಗ್ರಹಚಾರ ತಪ್ಪಿಯೋ, ಮುಗ್ದತೆಯಿಂದಲೋ, ಕ್ಷಣಿಕವಾಗಿ ಕೋಪ ಬಂದು ಹೆಂಡತಿಗೆ ಎದುರು ಮಾತನಾಡಿದಲ್ಲಿ ಅವನ ಇಡೀ ಜೀವನದಲ್ಲಿ ಮಾಡಿರುವ ಮಾಡಿಲ್ಲದಿರುವ ಎಲ್ಲಾ ತಪ್ಪುಗಳ ಸರಮಾಲೆ ಅವನ ಕೊರಳಿಗೆ ಬೀಳುವುದಲ್ಲದೇ ಅವನ ಗುಣಗಾನ ದಿನಗಟ್ಟಲೇ ನಡೆಯುತ್ತಲೇ ಇರುತ್ತದೆ.

ಇಂತಹ ಸನ್ನಿವೇಶಗಳಲ್ಲಿ ಸಿಲುಕಿಕೊಂಡಿರುವ ನಿವೃತ್ತ ಪತಿ ಮಹಾಶಯನಿಗೆ ಪದೇ ಪದೇ ತಾನು ಹೇಳಿದ ಹಾಗೆ ನಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹೆಂಡತಿಯು ತನಗೆ ಹೀನಾಮಾನ ಬೈದಳು ಅದಕ್ಕೆ ತಾನು ಹೇಳಿದ ಹಾಗೆ ನಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಹೇಳಲು ಎರಡು ರೀತಿಯ ಧೈರ್ಯಗಳು ಬೇಕಾಗುತ್ತವೆ. ಒಂದು ಧೈರ್ಯವೆಂದರೆ ತನ್ನ ದೌರ್ಬಲ್ಯವವನ್ನು ಎಲ್ಲರ ಮುಂದೆ ಒಪ್ಪಿಕೊಂಡಲ್ಲಿ ನಗೆಪಾಟಲಿಗೆ ಈಡಾಗುವುದನ್ನು ಎದುರಿಸುವ ಧೈರ್ಯ. ಎರಡನೆಯ ಧೈರ್ಯ ಎಂದರೆ ಹೀಗೆ ಹೇಳಿದ್ದು ತನ್ನ ಹೆಂಡತಿಗೆ ತಿಳಿದರೆ ಆಗಬಹುದಾದ ನರಕ ಸದೃಶ ಅನಾಹುತವನ್ನು ಎದುರಿಸುವ ಧೈರ್ಯ. ಮೊದಲನೆಯ ಸನ್ನಿವೇಶವನ್ನು ಎದುರಿಸುವ ಧೈರ್ಯವಿದ್ದರೂ ಯಾವ ಶೂರರೂ ಯಾವ ಮೂರ್ಖರೂ ಎರಡನೇ ಸನ್ನಿವೇಶವನ್ನು ಎದುರಿಸುವ ಧೈರ್ಯ ಹೊಂದಿರುವುದಿಲ್ಲ.

ಅಂತಹ ಪರಿಸ್ಥಿತಿಯಲ್ಲಿ ಅರಳು ಮರಳು ಸುಲಭವಾದ ತಪ್ಪಿಸಿಕೊಳ್ಳುವ ಮಾರ್ಗವಾಗುತ್ತದೆ. ತನಗೆ ಮರೆತು ಹೋಯಿತು, ತಾನು ಯಾವುದೋ ಯೋಚನೆಯಲ್ಲಿ ಒಪ್ಪಿಕೊಂಡುಬಿಟ್ಟೆ, ಇತ್ಯಾದಿ ವಿವರಣೆಗಳು ಹೊರಬರುತ್ತವೆ. ಕೆಲವು ವಿಚಾರಗಳಲ್ಲಿ ಸಂಪೂರ್ಣವಾಗಿ ಎಚ್ಚರಿಕೆಯಿಂದ ಇರುವ ವ್ಯಕ್ತಿ ಕೆಲವು ವಿಚಾರಗಲ್ಲಿ ಮಾತ್ರ ಐಲು ಐಲಾಗಿ ಆಡಿದಾಗ ಅರಳುಮರಳು ಎಂಬ ರಕ್ಷಕ ಲಭ್ಯವಾಗುತ್ತದೆ. ■

ಯುವಕನೊಬ್ಬ ಕೋರ್ಟ್ ಕಟಕಟೆಯಲ್ಲಿ ಆಪಾದಿತನಾಗಿ ನಿಂತಿದ್ದ ಆಪಾದನೆ ಏನು ಅಂದ್ರೆ ಅನೇಕ ರೀತಿಯ ತಂಪಾದ ಪಾನೀಯಗಳನ್ನು ಮಾರುತ್ತಿದ್ದ ಅಂಗಡಿಗೆ ನುಗ್ಗಿ ಬಹಳಷ್ಟು ನೀರಾ ಬಾಟಲುಗಳನ್ನು ಕದ್ದು ಕುಡಿಯುತ್ತಿರುವಾಗ ಸಿಕ್ಕಿಕೊಂಡಿದ್ದ.

ಜಡ್ಜ್ ಆಶ್ಚರ್ಯಚಕಿತರಾಗಿ ಕೇಳಿದರು. ಅಲ್ಲಯ್ಯಾ ಅಂಗಡಿಯಲ್ಲಿ ಬೇರೆ ಬೇರೆ ರೀತಿಯ ತಂಪು ಪಾನೀಯಗಳಿದ್ದರೂ ನೀನು ನೀರಾ ಬಾಟಲುಗಳನ್ನೇ ಕದ್ದು ಕುಡಿದೆ ಏಕೆ ಅಂತ.

ಅದಕ್ಕೆ ಆಪಾದಿತ ಏನು ಮಾಡೋದು ಜಡ್ಜ್ ಸಾಹೇಬರೇ ನಾನು ತಿಂಡಿ ತಿನ್ನುವಾಗ ಉಪ್ಪು ಜಾಸ್ತಿ ತಿಂದುಬಿಟ್ಟಿದ್ದೆ. ಹೇಗೂ ಉಪ್ಪಾ ತಿಂದಾ ಮೇಲೆ ನೀರಾ ಕುಡಿಯಲೇ ಬೇಕು ಅಂತ ಗಾದೆನೇ ಇದೆಯಲ್ಲ. ಗಾದೆನ ನಿಜ ಮಾಡೋಕೆ ನಾನು ನೀರಾ ಕದ್ದು ಕುಡಿದೆ.

ಅಂದಾಗ ಜಡ್ಜ್ ಆದಿಯಾಗಿ ಕೋರ್ಟಿನಲ್ಲಿದ್ದವರೆಲ್ಲಾ ಹೊಟ್ಟೆ ಹುಣ್ಣಾಗುವಂತೆ ನಕ್ಕರು.

**–ಸುಮನಾ**

# ಸಮಯ ತಿರುಗಿಸಿದ ಕ್ಷಣ

ರಾಜೇಶ್ವರಿ, ಹುಲ್ಲೇನಹಳ್ಳಿ.

ನಾನಾಗ ಕೆಲಸಕ್ಕೆ ಸೇರಿದ ಹೊಸತು. ನಾನು ಕೆಲಸ ಮಾಡುತ್ತಿದ್ದ ಕಛೇರಿ ಕಟ್ಟಡದಲ್ಲಿ ನಾವಿಬ್ಬರೇ ಹೆಣ್ಣು ಮಕ್ಕಳಿದ್ದೆವು ಒಂದು ಎಂ.ಡಿ. ಪಿ.ಎ ಮಂಜುಳ ಮತ್ತೆ ನಾನು. ಮಂಜುಳ ಮೆಲಂತಿಸ್ತಿನಲ್ಲಿದ್ದರೆ ನಾನು ಕೆಳ ಅಂತಸ್ತಿನ ಡಿ.ಸಿ.ಎಸ್ ವಿಭಾಗದಲ್ಲಿದ್ದೆ. ಇಡೀ ಕಛೇರಿ ಆಡಳಿತ ಕಟ್ಟಡದಲ್ಲಿ ಇಬ್ಬರೇ ಮಹಿಳಾ ಸಹೋದ್ಯೋಗಿಗಳು ಇದ್ದುದರಿಂದ ಕೆಲಸ ಮುಗಿಸಿ ಬಿಡುವಾದರೆ ಒಮ್ಮೆ ಅವಳು ಕೆಳಗಿನ ನಮ್ಮ ವಿಭಾಗಕ್ಕೆ ಬರುವುದು ಮತ್ತೆ ಹಲವು ಬಾರಿ ಎಂ.ಡಿ. ಸರ್ ಇಲ್ಲದಾಗ ನಾನು ಅವರ ವಿಭಾಗಕ್ಕೆ ಹೋಗಿ ಅಂದಿನ ಪತ್ರಿಕೆಯ ಸುದ್ದಿ, ಉಡುಗೆ ತೊಡುಗೆ, ಆಗಷ್ಟೇ ಹೊಸದಾಗಿ ಬಂದ ಟಿ.ವಿ.ಯಲ್ಲಿ ಬರುತ್ತಿದ್ದ ಹಿಂದಿ ಸೀರಿಯಲ್ಗಳ ಕುರಿತು ತುಸು ವಿಚಾರ ವಿನಿಮಯ ಮಾಡುವುದು ರೂಢಿಯಲ್ಲಿತ್ತು. ಹಾಗೇ ಒಂದು ದಿನ ಮಧ್ಯಾಹ್ನ ಸುಮಾರು ಹನ್ನೆರಡು ಮೂವತ್ತರ ಸಮಯದಲ್ಲಿ ಮೇಲಂತಸ್ತಿನಲ್ಲಿದ್ದ ನನ್ನ ಸಹೋದ್ಯೋಗಿ ಗೆಳತಿ ಮಂಜುಳಾದೊಂದಿಗೆ ಮಾತನಾಡಲೆಂದು ಮೆಟ್ಟಿಲನ್ನೇರಿ ನಾನು ಹೋಗುವುದಕ್ಕೂ ನಮ್ಮ ಎಂ.ಡಿ. ಸರ್ ಎದುರಾಗುವುದಕ್ಕೂ ಸರಿ ಹೋಯ್ತು.! ಅವರಿರುವುದರ ಅರಿವಿರಲಿಲ್ಲ ನನಗೆ. ಅವರು ಇಲ್ಲವೆಂದು ಭಾವಿಸಿ ನಾನು ಮೇಲೆ ಹೋಗಿದ್ದೆ. ಗಾಭರಿಯಿಂದ ನಮಸ್ತೆ ಸರ್ ಎಂದೆ. "ಹಾ ನಮಸ್ತೆ ಏನಮ್ಮಾ ಇಲ್ಲಿ ಅಂದರು "ಕೂಡಲೇ ನಾನು ಸರ್ ಕ್ಯಾಂಟೀನಿಗೆ ಊಟಕ್ಕೆ ಹೋಗಲು ಮಂಜುಳಾಳನ್ನು ಕರೆಯಲು ಬಂದೆ". ಎಂದೆ ತಕ್ಷಣ ಅವರು "ಓಹ್ ಆಗಲೇ ಒಂದು ಗಂಟೆನಾ? ಊಟದ ಸಮಯ ಆಗೋಯ್ತಾ? ಎಂದು ತಮ್ಮ ಬಲಗೈಗೆ ಕಟ್ಟಿದ್ದ ವಾಚ್ ಕಡೆಗೊಮ್ಮೆ ನೋಡಿ ಓಹ್ ನನ್ನ ಗಡಿಯಾರ ಅರ್ಧ ಗಂಟೆ ಹಿಂದೆ ತೋರಿಸುತ್ತಿದೆಯಲ್ಲಾ" ಎಂದು ತಕ್ಷಣ ತಮ್ಮ ವಾಚನ್ನು ತಿರುಗಿಸಿ ಒಂದು ಗಂಟೆಗೆ ಇಟ್ಟು ಕೊಂಡರು. ಆ ಸಮಯದಲ್ಲಿ ಅಲ್ಲಿ ಹೋಗಿ ಅವರು ಎದುರು ಸಿಕ್ಕಿ ಹಾಗೆ ಕೇಳಿದ್ದಕ್ಕೆ ಊಟದ ಸಮಯ ಎಂದೆನೇ ಹೊರತು ನಾನು ಖಂಡಿತಾ ಸಮಯ ಒಂದು ಗಂಟೆಯಾಗಿದೆ ಎಂದು ಹೇಳಲಿಲ್ಲ!. ಅವರು ಕೈ ಗಡಿಯಾರ ತಿರುಗಿಸಿ ಮುಂದಕ್ಕೆ ಇಟ್ಟುಕೊಂಡಾಗ ನನಗೋ ಒಳಗೊಳಗೇ ಬಂದ ನಗುವನ್ನು ತಡೆಯಲಾಗಲಿಲ್ಲ. ಅವರು ಕೆಳಗಿಳಿದು ಹೋದೊಡನೆ ಮಂಜುಳಾ ಬಳಿ ಹೋಗಿ ನಡೆದ ಘಟನೆಯನ್ನು ಹೇಳಿ ನಕ್ಕಿದ್ದೇ ನಕ್ಕಿದ್ದು. ಹಾಗೇ ಈ ಘಟನೆಯನ್ನು ಉಳಿದ ಸಹೋದ್ಯೋಗಿಗಳಿಗೂ ಹೇಳಿ ನಕ್ಕದ್ದಾಯ್ತು. ಹಾಗೂ ಕೆಲವು ಸಹೋದ್ಯೋಗಿಗಳು ನನ್ನನ್ನು ಹಲವೊಮ್ಮೆ " ಆಹಾ ಎಂ.ಡಿ ಸರ್. ಟೈಮ್ ತಿರುಗಿಸಿಕೊಂಡಂತಲ್ಲಾ ಗೊತ್ತಾ?" ಎಂದು ರೇಗಿಸುತ್ತಿದ್ದರು. ಅವರು ಮಾತಿನಲ್ಲಿ ಒರಟು ಆದರೆ ಸಹೃದಯಿ. ಇತ್ತೀಚೆಗೆ ಕೆಲವು ವರುಷಗಳ ಹಿಂದೆ ಅವರು ಗತಿಸಿದಾಗ ಅವರ ಸಂತಾಪ ಸಭೆಯಲ್ಲಿ ಅವರ ಕುರಿತು ಮಾತನಾಡುವಾಗ ಅವರ ಒರಟು ಮಾತಿನ ಹಿಂದಿದ್ದ ಒಳ್ಳೆಯ ಹೃದಯವಂತಿಕೆಯನ್ನು ಕೂಡ ಸ್ಮರಿಸಿದ್ದೆ.

ಮಾತಿನಲ್ಲಿ ಮಾತ್ರ ಒರಟುತನವಿದ್ದರೂ ತಮ್ಮ ಕೈಕೆಳಗಿನ ಉದ್ಯೋಗಿಗಳಿಗೆ ಒರಟಾಗಿ ಮಾತನಾಡಿದರೂ ಲಿಖಿತವಾಗಿ ಯಾರಿಗೂ ಒಂದು ನೋಟೀಸ್ ಕೂಡ ಕೊಡುವಂತಹ ಕೆಡುಕು ಮಾಡುತ್ತಿರಲಿಲ್ಲ ಅಂತಹ ಸಹೃದಯಿಗಳು ಅವರಾಗಿದ್ದರು. ■

# ಮದುವೆ ಮಾಡಿ ನೋಡು..!

ಅರವಿಂದ.ಜಿ.ಜೋಷಿ. ಮೈಸೂರು.

ತಾನು ಸರ್ವಿಸ್‌ನಲ್ಲಿ ಇರುವಾಗಲೇ ಒಂದು ಸ್ವಂತ ಮನೆ ಕಟ್ಟಿಸಿಕೊಳ್ಳಬೇಕೆಂಬ ಇರಾದೆಯಿಂದ ಶ್ರೀನಿವಾಸ್ ಅಲಿಯಾಸ್ ಶೀನ, ಸಾಲ ಸೋಲ ಮಾಡಿ ಪಟ್ಟಣದ ಹೊಸ ಬಡಾವಣೆಯಲ್ಲಿ ಮನೆ ಕಟ್ಟಿಸಿ ಅಲ್ಲಿ ವಾಸ ಇರಲು ಆರಂಭಿಸಿ ಎರಡು ವರ್ಷಗಳೇ ಆಗುತ್ತ ಬಂದಿತ್ತು. ಆದರೆ ಅದೇಕೋ ಆತ ಕುಟುಂಬ ಸಮೇತ ಅಲ್ಲಿ ವಾಸಿಯಾಗಲು ಶುರುಮಾಡಿದಾಗಿನಿಂದ ಒಂದಲ್ಲ ಒಂದು ತಾಪತ್ರಯಗಳು ತಲೆ ಎತ್ತಿ ನಿಂತು, ಶೀನಿಯ ತಲೆ ಚಿಟ್ಟು ಹಿಡಿಸಿದ್ದವು. ಈ ವಿಷಯಕ್ಕೆ ಆತ ಒಳ ಒಳಗೇ ಪೇಚಾಡುತ್ತಿದ್ದರೆ ಆತನ ಅರ್ಧಾಂಗಿ ಪಮ್ಮೀ, ಪಕ್ಕಾ ಮೂಢ ನಂಬಿಕಸ್ಥಳಾಗಿದ್ದರಿಂದ, ಸುಮ್ಮನಿರಲಾರದೇ ,ಬೆಳಗಾದರೆ ಸಾಕು, ಪಟ್ಟಣದಲ್ಲಿದ್ದ ಭೀಮಾ ಶಾಸ್ತ್ರೀ ಯವರ ಬಳಿ ಹೋಗಿ ವಿಚಾರಿಸಿ ಪರಿಹಾರ ಕೇಳಿಕೊಂಡು ಬನ್ನಿ ಎಂದು ದುಂಬಾಲು ಬೀಳಲಾರಂಭಿಸಿದಳು. ಆದರೆ ಈ ಶಾಸ್ತ್ರ, ಜ್ಯೋತಿಷ್ಯಗಳ ಮೇಲೆ ನಂಬಿಕೆ ಇರದ ಶೀನ, ಏನಾದರೊಂದು ನೆಪ ಹೇಳಿ ಅಲ್ಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳುತ್ತಿದ್ದ. ಯಾವಾಗ ಅರ್ಧಾಂಗಿ ಪಮ್ಮೀಯಿಂದ ಈ ಕುರಿತು ವರಾತ ಹೆಚ್ಚಾದಾಗ,ಶೀನ ಮರುಮಾತಾಡದೇ ರಜಾದ ಒಂದು ದಿನ ಮಡದಿ ಸೂಚಿಸಿದ ಶಾಸ್ತ್ರಿಗಳ ಮನೆಗೆ ಹೋದ.

ಅಂದು ಅಮಾವಾಸ್ಯೆ, ರಜಾ ದಿನ ಇದ್ದ ಪ್ರಯುಕ್ತ ಅಲ್ಲಿ ಬಂದವರ ಸಂಖ್ಯೆ ತುಸು ಹೆಚ್ಚಾಗಿತ್ತು.ಏನೂ ಮಾಡದ ಶೀನ ಅನಿವಾರ್ಯವಾಗಿ ಮನದಲ್ಲಿ ಗೊಣಗುತ್ತ ತನ್ನ ಸರದಿ ಬರುವವರೆಗೂ ಕಾಯತೊಡಗಿದ.ಅಂತೂ ಎರಡು ತಾಸಿನ ನಂತರ ಆತನ ಸರದಿ ಬಂದಾಗ, ಜೇಬಿನಿಂದ ಎರಡು ವಿಳ್ಳೆದೆಲೆ ಜೊತೆಗೆ ಇನ್ನೂರು ರೂಪಾಯಿ ಒಂದು ನೋಟು ಇಟ್ಟು, ಶಾಸ್ತ್ರಿಗಳಿಗೆ ನಮಸ್ಕರಿಸಿ, ತನ್ನ ಮನೆಯಲ್ಲಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕೆಂದು ಕೇಳಿಕೊಂಡ.ಆತ ಕೊಟ್ಟ ದುಡ್ಡು ಪಕ್ಕಕ್ಕೆ ಇಟ್ಟ ಶಾಸ್ತ್ರಿ ಗಳು ಸ್ಲೇಟು ತೆಗೆದುಕೊಂಡು ಅದರ ತುಂಬೆಲ್ಲ ಅಂಕಿಗಳನ್ನು ಬರೆಯುವುದು ಗುಣಿಸುವುದು, ಕೂಡುವುದು, ಭಾಗಿಸುವುದನ್ನು ಮಾಡುತ್ತ ಶೀನಿಯ ಕಡೆಗೆ ತಿರುಗಿ "ನಿನ್ನ ಸಮಸ್ಯೆ ಗಳು ಬೇಗ ಪರಿಹಾರ ಆಗಬೇಕೆಂದ್ರೆ, ಇಂದಿನಿಂದ ಎರಡು ವಾರದೊಳಗೆ ಮದುವೆ ಮಾಡಿಸಬೇಕಾಗುತ್ತದೆ,ಅದರ ಪುಣ್ಯ ದಿಂದ ನಿನಗೆ ಫಲ ದೊರೆಯುವುದು ಗ್ಯಾರಂಟಿ"ಎಂದು ಅವರದೇ ಶೈಲಿಯಲ್ಲಿ ಹೇಳಿ ಮುಗಿಸುತ್ತಿದ್ದಂತೆ ಶೀನ ತಡವರಿಸುತ್ತ"ಇದೇನು ಶಾಸ್ತ್ರಿಗಳೇ ನಾನು ಈಗ ಮದುವೆ ಮಾಡಿಸೋದಾ? ಅಷ್ಟೊಂದು ಹಣ ನನ್ನಲ್ಲೆಲ್ಲಿದೆ?ಇನ್ನೂ ಮನೆ ಕಟ್ಟೊಕೆ ಮಾಡಿದ ಸಾಲಾ ಮುಗ್ಧೆ ಇಲ್ಲ ಅಂಥಾದ್ರಲ್ಲಿ....."ಎಂದು ತನ್ನ ಪ್ರವರ ಊದಲು ಆರಂಭಿಸಿದಾಗ, ಆತನನ್ನು ಅರ್ಧಕ್ಕೆ ತಡೆದ ಶಾಸ್ತ್ರಿಗಳು "ನೋಡಯ್ಯಾ. ಶೀನಾ.. ಇದು ಖರ್ಚಿಲ್ಲದ ಮದುವೆ ಅದಕ್ಕೆ ನೀನು ಸ್ವಲ್ಪ ಬೆವರು ಸುರಿಸಬೇಕಾಗತ್ತದೆ ಅಷ್ಟೇ.."ಎಂದಾಗ ಶೀನನ ಮುಖ ಇಷ್ಟಗಲ ಅರಳಿತು.


ಕುತೂಹಲ ತಾಳದೇ ಆತ "ಅದ್ಹೇಗೆ.. ಸ್ವಾಮಿ?"ಎನ್ನುವ ಪ್ರಶ್ನೆ ಇಟ್ಟ. ಆಗ ಶಾಸ್ತ್ರಿಗಳು "ಸಿಂಪಲ್ ಕಣಯ್ಯಾ...ಮನುಷ್ಯರ ಮದುವೆ ಅಲ್ಲ, ಕತ್ತೆ ಮದುವೆ.!."ಎಂದಾಗ, ಶೀನ ಉಗುಳು ನುಂಗುತ್ತ" ಸ್ವಾಮಿ..ಅದು ನನ್ನಿಂದ ಸಾಧ್ಯವಾ? ನೋಡಿದ ಜನಾ ಏನಂತಾರೆ? ಮದುವೆಗೆ ಗಂಡು ಕತ್ತೆ ಹೆಣ್ಣು ಕತ್ತೆ ಎಲ್ಲಿಂದ ಹುಡುಕಿ ತರ್ಲಿ?"ಎಂದು ತನ್ನ ಮನದಲ್ಲಿ ಉದ್ಭವಿಸಿದ ಪ್ರಶ್ನೆಗಳನ್ನು ಹರಿಬಿಟ್ಟ. ಆಗ ಶಾಸ್ತ್ರಿಗಳು "ನೋಡಯ್ಯಾ ಶೀನಾ... ನಮ್ಮ ಕೆಲ್ಸಾ ಏನಿದ್ದರೂ ಸಮಸ್ಯೆ ಅಂತ ಕೇಳ್ಕೊಂಡು ಬಂದವರಿಗೆ ಪರಿಹಾರ

ಸೂಚಿಸುವುದು. ಅದನ್ನು ಕಷ್ಟಾನೋ ಸುಲಭಾನೋ ನೆರವೇರಿಸಬೇಕಾದ್ದು ನಿಮ್ಮ ಜವಾಬ್ದಾರಿ.. ಒಳ್ಳೇದಾಗಲಿ ಹೋಗಿ ಬಾ...."ಎಂದು ಹೇಳಿ ನೆಕ್ಸ್ಟ್ ಬನ್ನಿ... ಎಂದಾಗ ಶೀನ ದೂಸರಾ ಮಾತನಾಡದೇ ಅಲ್ಲಿಂದ ಎದ್ದು ಸೀದಾ ಮನೆಗೆ ಬಂದ.

ಮನೆಗೆ ಬಂದು, ಅಲ್ಲಿ ನಡೆದ ವಿಚಾರವನ್ನೆಲ್ಲ ಚಾಚೂ ತಪ್ಪದೇ ಅರ್ಧಾಂಗಿಗೆ ಹೇಳಿದಾಗ ಅವಳು ಖುಷಿ ವ್ಯಕ್ತಪಡಿಸಿಳು.ಅದನ್ನು ಕಂಡ ಶೀನಿ ಕಸಿವಿಸಿ ಗೊಳ್ಳುತ್ತ "ಅದಷ್ಟು ಸುಲಭನಾ..? ಗಂಡು ಕತ್ತೆ, ಹೆಣ್ಣು ಕತ್ತೆ ಎಲ್ಲಿ ಹುಡುಕಿ ತರೋದು?ಅದಕ್ಕೆಲ್ಲಾ ಯಾರಿಗೆ ಟೈಂ ಇದೆ?.."ಎಂದಾಗ ಆಕೆ "ಅಲ್ಲಾರೀ.. ಅಷ್ಟು ಕಷ್ಟ ಪಟ್ಟು ಈ ಮನೆ ಕಟ್ಸಿದ್ರೀ.. ಅಲ್ಲಿ ಸುಖಾ ಶಾಂತಿ ಸಿಗ್ಬೇಕಂದ್ರೆ ಇಷ್ಟು ಸುಲಭದ ಕೆಲ್ಸಾ ಮಾಡೊಕಾಗಲ್ಲಾ ಅಂದ್ರೆ ಹೇಗೆ?"ಎಂದು ಅವನಿಗೆ ಮರು ಪ್ರಶ್ನೆ ಮಾಡುತ್ತ, "ನೋಡಿ.. ಶಾಸ್ತ್ರಿಗಳು ಹೇಳಿದಂತೆ ಬೇಗ ಮದುವೆ ಮಾಡಿ ಮುಗ್ಸಿ, ಅದ್ಹೇಗೆ ಮಾಡ್ತಿರೋ ನಂಗೊತ್ತಿಲ್ಲ"ಎಂದು ಕಡ್ಡಿ ಮುರಿದಂತೆ ಹೇಳಿ ಅಲ್ಲಿಂದ ಎದ್ದು ಹೋದಳು.ಇತ್ತ ಶೀನಿ ಮನದಲ್ಲಿ "ಎಲ್ಲಪ್ಪಾ..ಈ ಕತ್ತೆಗಳನ್ನ ಹುಡುಕೋದು? ನನಗೆ ಭಾನುವಾರ ಬಿಟ್ರೆ ಬೇರೆ ದಿನ ಫ್ರೀ ಇರಲ್ಲ.. ಏನು ಮಾಡಲಿ?"ಎಂದು ಯೋಚಿಸುತ್ತ ಕುಳಿತಾಗ ಕೈಯಲ್ಲಿ ಕಾಫಿ ಬಟ್ಟಲಿನೊಂದಿಗೆ ಮತ್ತೆ ಹಾಜರಾದ ಆತನ ಪತ್ನಿ "ರೀ... ನಮಗೆ ಒಳ್ಳೆಯದಾಗ್ಬೇಕು ಅಂದ್ರೆ ಎರಡು ದಿನ ರಜಾ ಹಾಕಿ ಕತ್ತೆ ಹುಡ್ಕೊಂಡು ಬಂದು ಕೆಲ್ಸಾ ಮುಗ್ಸಿ..ಬರೀ ಅದನ್ನೇ ಯೋಚಸ್ತಾ ಕೂತ್ಕೋ ಬೇಡಿ ತಿಳೀತಾ.. ಎನ್ನುತ್ತ ಒಳಗೆ ಹೋದವಳು ಒಂದು ಬ್ಯಾಗ್ ಹಾಗೂ ಎರಡು ಹಗ್ಗ ತಂದು ಕೊಡುತ್ತ"ನೋಡಿ ಈ ಬ್ಯಾಗ್ ನಲ್ಲಿ ಸ್ವಲ್ಪ ಬೂಸಾ.. ಹುಲ್ಲು ಹಾಕ್ಕೊಂಡು ಹೋಗಿ ಅವುಗಳಿಗೆ ತೋರ್ಸಂದಗೆ ಮಾಡಿ ಎಳ್ಕೊಂಡು ಬನ್ನಿ" ಎಂದು ಅಮೂಲ್ಯ ಸಲಹೆ ನೀಡಿ ಬೇರೆ ಕೆಲಸದಲ್ಲಿ ನಿರತಳಾದಳು.

ಇನ್ನು ಈ ಕುರಿತು ಚರ್ಚೆ ಮಾಡುತ್ತ ಕುಳಿತರೆ ಸಮಸ್ಯೆ ಬಗೆ ಹರಿಯದು ಎಂದರಿತವ, ಆದದ್ದಾಗಲಿ ಎಂದು ಗಟ್ಟಿ ಮನಸ್ಸು ಮಾಡಿ ಆಕೆ ಕೊಟ್ಟ ಹಗ್ಗ, ಬ್ಯಾಗ್ ನೊಂದಿಗೆ ಕತ್ತೆ ಬೇಟೆಗೆಂದು ಬಿರು ಬಿಸಿಲನೂ ಲೆಕ್ಕಿಸದೇ ಹೊರಟು ನಿಂತ. ಮನೆಯಿಂದ ಸುಮಾರು ಎರಡು ಕಿಮೀ ನಡೆದು ಹೋದ ಬಳಿಕ ಅಲ್ಲಿ ಒಂದು ದೊಡ್ಡ ಚರಂಡಿ ಪಕ್ಕ ಐದಾರು ಕತ್ತೆಗಳು ತಮ್ಮ ಪಾಡಿಗೆ ತಲೆ ತಗ್ಗಿಸಿ ಹುಲ್ಲು ಮೇಯುತ್ತಿದ್ದವು.ಅದನ್ನು ಕಂಡ ಶೀನಿ ಖುಷಿ ಪಟ್ಟು ಮೆಲ್ಲಗೆ ಹೆಣ್ಣು ಕತ್ತೆಯ ಬಳಿ ಬಂದು ತಾನು ಬ್ಯಾಗ್ ನಲ್ಲಿ ತಂದಿದ್ದ ಬೂಸಾ+ಹುಲ್ಲು ಅದರ ಮೂತಿಯ ಮುಂದೆ ಹಿಡಿಯುತ್ತಿದ್ದಂತೆ ಆತನಿಗೆ ಗೊತ್ತಿಲ್ಲದೇ ಹಿಂದಿನಿಂದ ಬಂದ ಕತ್ತೆಯೊಂದು ಅದನ್ನು ಕಿತ್ತಿಕೊಳ್ಳುವ ರಭಸದಲ್ಲಿ ಶೀನನನ್ನು ಜೋರಾಗಿ ತಳ್ಳಿತು.ಸದ್ಯ ಅವನ ಪುಣ್ಯ ಚರಂಡಿಯೊಳಗೆ ಬೀಳದೇ ಪಕ್ಕದಲ್ಲಿದ್ದ ಕಲ್ಲಿನ ರಾಶಿ ಮೇಲೆ ಬಿದ್ದು ತಲೆಗೆ ಕಾಲಿಗೆ ಏಟು ಮಾಡಿಕೊಂಡ.ಆತ ಸುಧಾರಿಸಿಕೊಂಡು ಏಳುವಷ್ಟರಲ್ಲಿ ಅಲ್ಲಿದ್ದ ಎಲ್ಲ ಕತ್ತೆಗಳೂ ಮಾಯವಾಗಿದ್ದವು.ಒಂದು ಕಡೆ ಮೈಕೈ ನೋವು, ಮತ್ತೊಂದು ಕಡೆ ಕತ್ತೆಗಳು ಸಿಗದಿದ್ದರಿಂದ ಕೊಂಚ ಹತಾಶನಾದಂತಾದ ಶೀನ ಬರಿ ಕೈಯಲ್ಲಿ ಮನೆಗೆ ತಾನು ಹೋದರೆ... ಅರ್ಧಾಂಗಿಯಿಂದ ಪುಷ್ಪಾರ್ಚನೆ ಮಾಡಿಸಿಕೊಳ್ಳಬೇಕಲ್ಲ ಎಂಬ ಭಯಕ್ಕೆ ಆದದ್ದಾಗಲಿ ಪ್ರಯತ್ನ ಮುಂದುವರೆಸಿಕೊಂಡು ಶತಾಯ ಗತಾಯ ಇಂದು ಕತ್ತೆಗಳನ್ನು ಎಳೆದುಕೊಂಡು ಹೋಗಲೇಬೇಕು ಎಂದು ಶಪಥ ಮಾಡಿ ಮತ್ತೆ ಮುಂದೆ ಹೊರಟ. ಈ ಬಾರಿ ಹೋಗುವಾಗ ಒಂದು ದೊಡ್ಡ ಚೀಲದ ತುಂಬ ಹುಲ್ಲು ಹಾಗೂ ಬೂಸಾ ಮಿಕ್ಸ ಮಾಡಿ ತೆಗೆದು ಕೊಂಡು ಹೊರಟಿದ್ದ. ಬಿಸಿಲಿನ ಝಳದಿಂದ ಕೊಂಚ ವಿಶ್ರಾಂತಿ ಪಡೆಯಲು ರಸ್ತೆ ಬದಿಯ ದೊಡ್ಡ ಅಲದ ಮರದ ನೆರಳಿಗೆ ಬಂದು ಕುಳಿತ. ಆಶ್ಚರ್ಯ ಎಂಬಂತೆ ಈತ ಕುಳಿತ ಪಕ್ಕದಲ್ಲಿಯೇ ಒಂದು ಗಂಡು ಹಾಗೂ

ಒಂದು ಹೆಣ್ಣು ಕತ್ತೆಯ ಮೇಯುತ್ತಿರುವುದನ್ನು ಕಂಡವ ಮುಂಚೆ ಮಾಡಿದಂತೆ ಆತುರ ಮಾಡದೇ ನಿಧಾನವಾಗಿ ಅವುಗಳನ್ನು ಸೆರೆ ಹಿಡಿಯಬೇಕೆಂದು ನಿರ್ಣಯಿಸಿ ಬ್ಯಾಗ್ ನೊಳಗೆ ಇದ್ದ ಬೂಸಾ ಕಮ್ ಹುಲ್ಲನ್ನು ಎರಡು ಹಿಡಿಯಷ್ಟು ಹಾಕಿ ಕಾಯುತ್ತ ಕುಳಿತ. ಕೆಲವೇ ನಿಮಿಷಗಳಲ್ಲಿ ಅದರ ವಾಸನೆ ಜಾಡು ಹಿಡಿದ ಎರಡೂ ಕತ್ತೆಗಳು ಬಂದು ಮೈ ಮರೆತು ತಿನ್ನಲಾರಂಭಿಸಿದಿದಾಗ ಶೀನಿ ಮೊದಲೇ ಸಿದ್ದಪಡಿಸಿಕೊಂಡಿಟ್ಟಿದ್ದ ಕುಣಿಕೆ ಹಾಕಿದ ಹಗ್ಗವನ್ನು ಉಪಾಯವಾಗಿ ಎರಡೂ ಕತ್ತೆಗಳ ಕುತ್ತಿಗೆ ಕಟ್ಟಿದ. ಅವುಗಳ ಎದುರಿದ್ದ ಬೂಸಾ ಹುಲ್ಲು ಮುಗಿಯುತ್ತಿದ್ದಂತೆ ಅಷ್ಟಷ್ಟೇ ಉದರಿಸುತ್ತ ಅವು ಕತ್ತು ಎತ್ತದ ರೀತಿ ಕಾಳಜಿ ವಹಿಸಿ ಅಂತೂ ಮನೆ ವರೆಗೆ ತಂದು ಅಲ್ಲಿದ್ದ ಮಾವಿನ ಮರಕ್ಕೆ ಕಟ್ಟಿ ನಿಟ್ಟುಸಿರು ಬಿಟ್ಟ.ತನ್ನ ಪರಾಕ್ರಮ ಹೆಂಡತಿ ಗೆ ತಿಳಿಸಿ, ನಾಳೆ ಬೆಳಿಗ್ಗೆ ಇವುಗಳ ಮದುವೆ ಮಾಡೋಣ ಸ್ವಲ್ಪ ಹೆಚ್ಚಾಗಿಯೇ ಗೋಧಿ ಹುಗ್ಗಿ ಮಾಡು ಎಂದು ಹೇಳಿದನು. ದಂಪತಿಗಳಿಬ್ಬರೂ ಖುಷಿಯಿಂದ ಆ ರಾತ್ರಿ ಕಳೆದರು. ಮರುದಿನ ಮಾರ್ಕೆಟ್‌ಗೆ ಹೋಗಿ ಹೋಗಿ ಕರಿಮಣಿ, ಹೂವಿನ ಹಾರ ತಂದು ಶೀನ ಆ ಕತ್ತೆಗಳ ಮದುವೆ ಮಾಡಿ ಮುಗಿಸಿದ. ಆನಂತರ ಅವುಗಳ ಮದುವೆ ಪ್ರಯುಕ್ತ ಮಾಡಿದ್ದ ಗೋಧಿ ಹುಗ್ಗಿ ಎರಡು ಪುಟ್ಟ ಬಕೇಟ್‌ನಲ್ಲಿ ಹಾಕಿ ತಂದು ಅವುಗಳ ಎದುರು ಇಟ್ಟಾಗ ಅವೂ ಕೂಡ ಆನಂದದಿಂದ ತಿಂದು ತೃಪ್ತಿ ಯಿಂದ ತೇಗಿದವು. ಅಂತೂ. ಶಾಸ್ತ್ರಿಗಳ ಮಾತಿನಂತೆ ಮದುವೆ ಮಾಡಿ ಗೆದ್ದ ಇಬ್ಬರ ಮುಖದಲ್ಲೂ ಸಂತಸ ಕುಣಿದಾಡತೊಡಗಿತು. ಮರುದಿನ ಅವುಗಳ ಕ್ಷೇಮ ಸಮಾಚಾರ ವಿಚಾರಿಸಲು ಬಂದು ನೋಡಿದಾಗ, ರಾತ್ರಿ ಅದ್ಯಾವುದೋ ಹೊತ್ತಲ್ಲಿ ಅವೆರಡೂ ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದವು. ಈ ವಿಚಾರ ಶೀನಿ ಪಮ್ಮಿಗೆ ತಿಳಿಸಿದಾಗ ಆಕೆ "ಹೋಗ್ಲಿ  ಬಿಡಿ ನಾವಂತೂ ಕತ್ತೆ ಮದುವೆ ಮಾಡಿ ಆಯ್ತು.. ಇನ್ನು ಅದರ ಫಲಕ್ಕೆ ಕಾಯೋಣ.. ಚಿಂತೆ ಮಾಡಬೇಡಿ ಎಂದು ಸಮಾಧಾನ ಮಾತು ಹೇಳಿದಾಗ ಶೀನಿ ಮನದಲ್ಲೇ "ಅಬ್ಬಾ ಈಕೆ ಸಮಾಧಾನವಾದಳಲ್ಲ ಸಾಕು ಭಗವಂತ"ಎಂದು ಹೇಳಿಕೊಳ್ಳತೊಡಗಿದ. ■



# ಶ್ವಾನ ಪ್ರಸಂಗ

ಲತಾ ಹೆಗಡೆ.

ಭೌ... ಭೌ,,,!' ಕರ್ಕಶಅರಚುವಿಕೆ, 'ಗರ್ರ್...!' ಶ್ವಾನದ ಸಿಟ್ಟಿನ ಗುರುಗುಟ್ಟುವಿಕೆಯೊಟ್ಟಿಗೆ "ಹಚ... ಹಚಾ! ನಡಿಅತ್ಲಾಗ... ದರಿದ್ರದ್ದು! ಸೂಳೀ ಮಕ್ಳು ಮಂದಿ ಅಡ್ಡಾಡೂ ರಸ್ತೀಗ ಎದಕ್ ಬಿಡ್ತಾರೋ...ರಸ್ತೀ ಏನ ಇವ್ರಪ್ಪನ್ ಮನೀದಂದ್ಕೊಂಡಾರೇನ...ಸಾಕಿದ್ದನ್ನ ಮನ್ಯಾಗ್ಇಟ್ಕೋಬೇಕು...ಕಚ್ತೂ ಅಂತಂದ್ರ ಚಿಕಿತ್ಸೆಗೆ ರೊಕ್ಕಕೊಡ್ತಾರೇನು? ಸಿವಿಕ್ ಸೆನ್ಸಂಬೂದು ಒಂಚೂರೂ ಇಲ್ಲ..." ಏರುದನಿಯ ಸುಪ್ರಭಾತ, ಸಕ್ಕರೆ ನಿದ್ದೆಯಲ್ಲಿದ್ದ ನಮ್ ಕಲ್ಲೇಶಿಯನ್ನು ಬಡಿದೆಬ್ಬಿಸಿತ್ತು. ಕಣ್ಣುಡುತ್ತಿದ್ದಂತೇ ಗೋಡೆಯ ಗಡಿಯಾರ ಆರು ಗಂಟೆಯಾದದ್ದನ್ನು ಸೂಚಿಸಿತ್ತು ಮತ್ತದರ ಕೆಳಗೇ ನೇತುಹಾಕಿದ್ದ ಕ್ಯಾಲೆಂಡರಿನಡಿ ಸೆಂಬರ್ ಹಾಳೆ ವಾರ, ತಾರೀಖನ್ನೂ ನಿಚ್ಚಳಗೊಳಿಸಿತ್ತು. ಅರೇ! ಇವತ್ತು ಮೂವತ್ತೊಂದು... ಅಂದರೆ ಇವತ್ತಿನ ರಾತ್ರಿಯೇ ಹೊಸವರ್ಷದ ಪಾರ್ಟಿ ಇರೋದು, ಅದ್ರಲ್ಲೂ ವಿಶೇಷತೆ ಏನಪ್ಪಾ ಅಂದ್ರೆ ತಾನು ಹಿರಿಯ ನಾಗರಿಕ ಪಟ್ಟ ಅಲಂಕರಿಸ್ತಿರೋ ನೆಪ ಮಾಡಿಕೊಂಡು ಗೆಳೆಯರೆಲ್ಲಾ ಸೇರಿ ಪಾರ್ಟಿಅರೇಂಜ್ ಮಾಡ್ತಿರೋದು. ನಾನಂತೂ ಪಾರ್ಟೀಲಿ ಮಿಂಚಲೇಬೇಕು...

"ಮತ್ತ... ರಸ್ತೀ ಏನ್ ನಿಮ್ಮಪ್ಪನ್ ಮನೀದೇನು? ಎಲ್ಲಿಂದ್ಲೋ ಬರಾವ್ರೂ ನಮ್ರಸ್ತೀಗ ಎದಕ್ ಬರ್ತೀರಿ? ನಮ್ಮನೀ ಮುಂದ... ನಮ್ರಸ್ತೀದಾಗ ನಮ್‌ರೂಬೀನ ಬಿಟ್ಟೇವಿ... ನಿಮ್ರಸ್ತೀ ಜಗಾಕ್ಕೇನ್ ಬಂದಿಲ್ಲಲ್ಲ... ಅಷ್ಟಕ್ಕೂ ನಮ್ರೂಬೀ ಭಾಳ್ ಸಾಧೂ ಅದಾಳ... ನಿಮ್ಮಂಥಾ ಧಿಮಾಕ್ನವ್ರೀಗೆ ಮಾತ್ರ ಕಚ್ತಾಳ... ಸುಮ್ಸುಮ್ನೆ ಎಲ್ರೀಗೂ ಕಚ್ಚೂದಿಲ್ಲ ತಿಳ್ಕೋರೀ..." ಶ್ವಾನೇಶನ ವಾಗ್ಬಾಣವೂ ಬತ್ತಳಿಕೆಯಿಂದ ಬೂಮ್‌ರ್‍ಯಾಂಗಾಗಿತ್ತು.

"ನಾವೆಲ್ಲಾರ ಬರ್ತೇವಿ... ಕೇಳೋಕೆ ನೀವ್ಯಾರು? ಅಷ್ಟಕ್ಕೂ ನೀವ್ ಹೇಳಿದ್ದು ಬರೋಬ್ಬರದ... ನಾಯಿ ಸಾಕಿದ್ದಕ್ಕ ನಿಮ್ ವಿಚಾರಧಾರೇನೂ ಹಂಗ ಹೊಂಟದ... ಅದ್ಹ್ಯಂಗ ಆಗ್ಯದ. ಅಲ್ರೀ...! ಅವುಕ್ಕ ಏರಿಯಾ, ಬೌಂಡ್ರೀ ಇರೋಹಂಗ ಮಂದೀದೂ ಇರ್ತದ ಅಂದ್ಕೊಂಡ್ರೇನು? ವಾಕಿಂಗ್ ಎಲ್ಲಾರ ಮಾಡ್ಕೋತೇನಿ, ಕೇಳೂ ಹಕ್ಕು ನಿಮಗಿಲ್ಲ... ಕಚ್ತಂದ್ರರೊಕ್ಕಾಕೊಡ್ತೀರೇನು? ಮತ್ತ ನೋವು ಅನುಭವಿಸೋರು ಯಾರು? ಏನಂದ್ರೀ... ನಿಮ್‌ರೂಬೀ ಹೌದಲ್ಲೋ... ಅದನ್ನ ನಿಮ್ಮನೀ ಒಳಗ ಇಟ್ಕೊಂಡು ಮುದ್ದಾಡ್ತಾರೂಬೀ... ರೂಬೀಅಂತರುಬ್ಕೋರೀ... ಯಾರ್ ಬ್ಯಾಡಂದ್ರೂ? ಸಾರ್ವಜನಿಕ ರಸ್ತೇದಾಗ ಸರಪಳಿ ಹಾಕ್ಲಾದರ್ೇ ಬಿಡಬಾರ್ದು ಅಷ್ಟೇ...!" ವಾಗ್ಬಾಣಕ್ಕೆ ಪ್ರತಿಬಾಣ ಬಿಟ್ಟಾಗಿತ್ತು. ವಾಗ್ಬಾಣ, ಪ್ರತಿಬಾಣ, ತಿರುಗು ಬಾಣದ ಹಂತ ಮುಗಿದು ಅದರೊಟ್ಟಿಗೇ ಬಹುವಚನದ ಜಗಳ ಏಕವಚನಕ್ಕೆ ಬದಲಾಗಿ ಪಾಶುಪತಾಸ್ತ್ರ, ಸರ್ಪಾಸ್ತ್ರ, ಶ್ವಾನಾಸ್ತ್ರ ಇನ್ನೂ ಯಾವ್ಯಾವುದೋ ಅಸ್ತ್ರ ಪ್ರಯೋಗವಾಗಿ ನಾಯೀಜಗಳ ಕೈಕೈ ಮಿಲಾಯಿಸುವ ಹಂತತಲುಪಿ ತಾರಕಕ್ಕೇರಿದಾಗ ತನ್ನ ಸಂಭ್ರಮವನ್ನ ಪಕ್ಕಕ್ಕಿಟ್ಟ ಕಲ್ಲೇಶಿ ಕಣ್ಣುಜ್ಜಿಕೊಳ್ಳುತ್ತಾ ಹೊರಬಂದ. ಪಕ್ಕದ ಮನೆಯ ಶ್ವಾನೇಶನ ಶ್ವಾನಪ್ರೀತಿಗೆ ಇವನೂ ರೋಸಿಹೋಗಿದ್ದ. ಮೊದಲೇ ನಾಯಿಯೆಂದರೆ ಕೆಟ್ಟ ಭಯ, ರಸ್ತೆಯಲ್ಲಿ ಹೋಗುವಾಗ ದೂರದಲ್ಲಿ ಬೀದಿನಾಯಿ ತನ್ನ ಪಾಡಿಗೆ ಮಲಗಿದ್ದರೂ ಟ್ರ್ಯಾಕ್ ಬದಲಿಸೋ ಪುಕ್ಕಲಾಸಾಮಿ. ಪಕ್ಕದ ಮನೆಗೇ ನಾಯಿ ತಂದಾಗ ಮನೆಯೊಳಗೆ ಕುಳಿತು ಮನಸೋ ಇಚ್ಛೆ ಹಿಡಿಶಾಪ ಹಾಕಿದ್ದ. ಬೆಳ್ಬೆಳಗ್ಗೆ ಅದಕ್ಕೆ ಸರಪಳಿ ಕಟ್ಟದೇ ರಸ್ತೆಗೆ ಬಿಡುವುದು, ರಸ್ತೆಯಲ್ಲೆಲ್ಲಾ ಅದರ ಓಡಾಟ, ಅರಚುವಿಕೆ, ಅದಕ್ಕಿಂತಲೂ ದೊಡ್ಡದಾಗಿ 'ರೂಬೀ... ದೂರ ಹೋಗ್ಬೇಡ... ಸೂಸೂ ಅಲ್ಲೇ ಮಾಡು, ನೋಡಲ್ಲಿ... ಕಜ್ಜೀನಾಯಿ

ಕಚ್ಚಾವ... ಅತ್ಲಾಕಡೆ ಹೋಗ್ಬೇಡ...' ಅರಚುತ್ತಲೇ ನಿರಾತಂಕವಾಗಿ ಅಕ್ಕಪಕ್ಕದ ಮನೆಯ ಹೂ ಕದಿಯುತ್ತಾ ಬಾಗಿಲಿಗೆ ನೀರು ಹಾಕುವ ಶ್ವಾನೇಶಿಯ ತಾಯಿಯ ಧೋರಣೆಗೆ ಒಳಗೊಳಗೇ ಕುದಿಯುತ್ತಿದ್ದ. ಅವಳೋ ಧಾಡಶೀತನದಲ್ಲಿ ಮಗನಿಗಿಂತಲೂ ಒಂದು ತೂಕ ಹೆಚ್ಚು... ಅವಳ ಬಾಯಿಗೆ ಸಿಕ್ಕರೆ ಮುಖಾಮೂತಿ ನೋಡದೇ ಹುಟ್ಟಡಗಿಸುತ್ತಿದ್ದಳು. ಮತ್ತೊಬ್ಬರ ಮನೆಯ ಮುಂದೆ ನಿರ್ಭಿಡೆಯಿಂದ ಮೂತ್ರ, ಸಂಡಾಸು ಮಾಡಿಸುವುದಂತೂ ಕೆಟ್ಟ ಕೋಪ ತರಿಸುತ್ತಿತ್ತು. ಮತ್ತವ ಬೈಯಲೆಂದು ರೋಷದಿಂದಲೇ ಹೊರ ಬಂದರೂ ಅವರ ಧಾರ್ಷ್ಟಿಕತೆಗೆ ಹೆದರಿ ಮುದುರಿಕೊಂಡು ಹಲ್ಕಿರಿದು ಅಂಗಳದಲ್ಲಿ ಬಿದ್ದ ದಿನಪತ್ರಿಕೆ ಎತ್ತಿಕೊಂಡು ಹೆಡ್‌ಲೈನ್ಸ್ ಓದುವ ನಾಟಕಕ್ಕೆ ಎಂದಿನಂತೇ ಶರಣಾಗುತ್ತಿದ್ದ. ಅಂತೂ ಯಾರೋ ಒಬ್ಬರು ಶ್ವಾನೇಶನನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರಲ್ಲಾ ದೇವರು ಅವರನ್ನು ನೂರ್ಕಾಲ ಸುಖವಾಗಿಟ್ಟಿರಲಿ ಎಂದು ಮನಸಾರೆ ಹರಸುತ್ತಾ ಬಿಟ್ಟೀ ಶೋ ಕಣ್ಮನ ತುಂಬಿಕೊಳ್ಳುತ್ತಿರುವಾಗಲೇ ಮತ್ಯಾರೋ ದಾರಿಹೋಕರ ಮಧ್ಯಸ್ಥಿಕೆಯಲ್ಲಿ ಜಗಳಕ್ಕೆ ಇತಿಶ್ರೀಯಾಗಿ ತನ್ನ ಮನದಾಳದ ಮಾತನ್ನು ಶ್ವಾನದ್ವೇಷಿಯ ಮೂಲಕ ತಾನೇ ಹೊರಹಾಕಿದೆನೆಂಬ ಲಹರಿಯಲ್ಲಿ ಒಳಬಂದ ಕಲ್ಲೇಶಿಗೀಗ ಅಂದಿನ ವಿಶೇಷತೆಯ ನೆನಪಾಗಿ ಸೆಂಟರ್ ಆಫ್‌ಅಟ್ರಾಕ್ಷನ್ ಆಗಲಣಿಯಾಗತೊಡಗಿದ.

ಕಲ್ಲೇಶಿಯ ಅರ್ಧಾಂಗಿಕಲಾವತಿ ಉರ್ಫ್‌ಕಲ್ಲೀ 'ಕಿಟ್ಟೀ'ಗೆಳತಿಯರೊಡನೆ ಬಿಟ್ಟೀ ಭಾಗ್ಯದಲ್ಲೊಂದಾದ ಫ್ರೀಬಸ್ಸಿನ ಪಯಣವನ್ನಾ ಸ್ವಾದಿಸಲು ಕರ್ನಾಟಕ ದರ್ಶನಕ್ಕೆಂದು ಹೋದದ್ದಾಗಿತ್ತು. ಟೆಕ್ಕೀ ಮಗರಾಯನೋ ಮಹಾನಗರದಲ್ಲಿ ಅಂಕೆಶಂಕೆಯಿಲ್ಲದೇ ಹಾಯಾಗಿದ್ದು ಬೇಕೆನ್ನಿಸಿದಾಗಲೆಲ್ಲಾ ಪಿಜೀಯಲ್ಲಿ ಪಿಜ್ಜಾ ಆರ್ಡರಿಸಿ ಗೆಳೆಯರೊಡನೆ ಆಗಾಗ ಗುಂಡೇರಿಸಿ ಗುಂಡಾಗಿದ್ದ. ಮಗಳ ಮದುವೆ ಮುಗಿಸಿ ಜವಾಬ್ದಾರಿ ಮುಗಿಸಿದ್ದು ಸಾಧನೆಯೆಂಬಂತೆ ಸ್ವಯಂ ನಿವೃತ್ತಿ ಪಡೆದ ಕಲ್ಲೇಶಿ ಎಮ್ಮೆಯಂತೇ ಸದಾಕಾಲ ಮೇಯುತ್ತಾ ಕೂಳಿಗೆ ದಂಡ, ಭೂಮಿಗೆ ಭಾರವೆಂಬಂತೆ ಬೇಕಾಬಿಟ್ಟಿ ಮನೆಯಲ್ಲಿ ಇರತೊಡಗಿದಾಗ ಭಾರ್ಯಾಮಣಿ ಕಠಿಣಳಾಗಿ ವಾರ್ಡನ್‌ಳಂತೇ ವರ್ತಿಸತೊಡಗಿದ್ದು ಬಿಸಿತುಪ್ಪದಂತಾಗಿತ್ತು. 'ಲೇ... ಕಲಾವತೀ! ಅದ್ಯಾಕೆ ಹಂಗಾಡ್ತೀ? ಎಲ್ಲಾದಕ್ಕೂ ಹಂಗ್ಮಾಡ್ಬೇಡಿ, ಹಿಂಗ್ಮಾಡ್ಬೇಡಿ, ಅದನ್ನತಿನ್ಬೇಡಿ, ಇಷ್ಹೊತ್ತಲ್ಲಿ ಮಲಗ್ಬೇಡಿ, ಅಲ್ಹೋಗ್ಬೇಡಿ, ಇಲ್ಹೋಗ್ಬೇಡಿ ಅಂತ ಯಾವಾಗ್ಲೂ ಬೇಡಗಳ ಬೇಡಿಯಲ್ಲಿ ಬಂಧಿಸುತ್ತಿರಬೇಡ್ವೇ... ಕಲ್ಲಿ ಅನ್ನೋ ಹೆಸರಿಗೆತಕ್ಕಂಗೇಕಲ್ಲಾಗ್ಬೇಡ್ವೇ' ಅಂತ ಹೇಳ್ಬೇಕಂದ್ಕೊಂಡ್ರೂ ಅಂದ್ಕೊಂಡದ್ದು ಬಾಯೊಳಗೇ ಕರಗಿ ಹೊಟ್ಟೇ ಸೇರ್ತಿತ್ತು. ಆದರೀಗ ಅವಳಿರದ ಕೆಲವು ದಿನಗಳನ್ನು ಸದುಪಯೋಗಪಡಿಸಿಕೊಂಡು ಸ್ವಚ್ಛಂದ ಹಕ್ಕಿಯಾಗಿ ಎಲ್ಲೆಂದರಲ್ಲಿ ಹಾರಾಡಿಕೊಂಡಿರುವ ಸ್ಕೆಚ್ ಹಾಕಿದ್ದವ ಅಂದಿನ ರಾತ್ರಿಯ ಪಾರ್ಟಿಯಲ್ಲಿ ಮಿಂಚಲು ತಲೆಗೊಂದಷ್ಟು ಪೇಂಟಿಂಗ್ ಶಾಸ್ತ್ರ ಮಾಡಿದ, ಕಲಸಿದ್ದು ನೀರಾದದ್ದಕ್ಕೆ ಅದುಕೂದಲಿಂದ ಬುರುಡೆ, ಬುರುಡೆಯಿಂದ ಮುಖ, ಕುತ್ತಿಗೆ... ಎಲ್ಲೆಂದರಲ್ಲಿಕಡ್ಡೀ ಜಲಪಾತವಾಗಿ ಸೋರತೊಡಗಿತ್ತು. ಹಚ್ಚಿಕೊಂಡು ಸ್ವಲ್ಪಹೊತ್ತು ಬಿಡಬೇಕೆಂಬ ನಿಯಮ ಇದ್ದದ್ದಕ್ಕೆ ಸೋರುತ್ತಿದ್ದರೂ ಸುಮ್ಮನಿದ್ದ.

ಸ್ನಾನ ಮಾಡದೇ ಮೂರು ದಿನವಾಗಿತ್ತು, ಎಲ್ಲಾ ನಾರುವಿಕೆ ಮೂಗಿಗೆ ಬಡಿದು ಕೊನೆಗೂ ಬಚ್ಚಲು ಹೊಕ್ಕವ ಲಹರಿಯಲ್ಲಿಯೇ ಸೋಲಾರಿನ ಬಿಸಿನೀರನ್ನು ಖಾಲಿಯಾಗಿಸಿ ಕೆಂಪೇಶಿಯಾಗಿ ಹಬೆಯಾಡುತ್ತಲೇ ಹೊರಬಂದಿದ್ದ. ಗಳಸ್ಯ ಕಂಠಸ್ಯ ಹನುಮೇಶಿಗೆ ಫೋನಾಯಿಸಿ ದೋಸೆಯ ಆಮಿಷ ಒಡ್ಡಿ ಬರುವಂತೇ ತಿಳಿಸಿದ. ಅವನೋ 'ನೀ ಕರ್ಯೋದು ಹೆಚ್ಚೋ, ನಾ ಬರೋದ್ಹೆಚ್ಚೋ' ಗಿಂಜುತ್ತಲೇ ಕ್ಷಣಮಾತ್ರದಲ್ಲಿ ಪ್ರತ್ಯಕ್ಷನಾಗಿದ್ದ. ಗೆಳೆಯರಿಬ್ಬರೂ ತುಪ್ಪದಲ್ಲಿ ಮುಳುಗೆದ್ದ ಮುಳಬಾಗಿಲ್ ದೋಸೆ, ವಡೆಚಟ್ನಿತರಿಸ್ಕೊಂಡು

ನಿರಾತಂಕವಾಗಿ ಬ್ಯಾಟಿಂಗ್ ಮಾಡಿಡರ್ರೆಂದುತೇಗಿ ನೆಟ್‌ಫ್ಲಿಕ್ಸಲ್ಲಿಥ್ರಿಲ್ಲರ್ ಮೂವೀ ನೋಡೋಕಂತ ಮೈಚೆಲ್ಲಿಕೂತರು.

'ಭೌ... ಭೌ...!' ಆರ್ಭಟಕ್ಕೆ ಡೈಲಾಗುಗಳು ವಾಲ್ಯೂಮು ಹೆಚ್ಚಿಸಿದರೂ ಕೇಳದಾದಾಗ ಹನುಮೇಶಿ, 'ಹೋಗಿ ಹೇಳೋಕಾಗಲ್ವ...' ಆಕ್ಷೇಪಿಸುವಂತೆ ಕಲ್ಲೇಶಿಯ ಮುಖ ನೋಡಿದ. ಇಂಗಿತ ಅರ್ಥೈಸಿಕೊಂಡ ಕಲ್ಲೇಶಿ ಗೆಳೆಯನೂ ಜೊತೆಗಿದ್ದರಿಂದ ಆವೇಶದಿಂದಲೇ ಹೊರಬಂದು ಶ್ವಾನೇಶನ ಮನೆಯತ್ತ ನೋಡಲು ಅಂಗಳದಲ್ಲಿ ರೂಬಿಯ ಅಭ್ಯಂಗದದೃಶ್ಯ, ಪಕ್ಕದಲ್ಲಿ ಘನಕಾರ್ಯ ಮುಗಿಸಿಯೇ ತೀರುವೆನೆಂಬ ಛಲದಲ್ಲಿ ಗಸಗಸ ತಿಕ್ಕುತ್ತಿರುವ ಸಿಡುಕು ಮೂತಿಯ ಶ್ವಾನೇಶ... ಸಹಾಯಕರಾಗಿ ಹೆಂಡತಿ, ತಾಯಿ, ಮಕ್ಕಳು ಬ್ರಶ್ಶು, ಸೋಪು, ಟವಲ್ಲು, ಡ್ರೈಯ್ಯರ್ರು, ಪೌಡರ್ರು ಹಿಡಿದು ಸಾಲಾಗಿ ನಿಂತದ್ದುಕಂಡಿತು. ಮನೆಯ ಚಿಲ್ಪಾರಿಯೋ ಮೂಳೆ ತೋರಿಸುತ್ತಾ ಸ್ನಾನ ಮಾಡಿಸಿಕೊಂಡರೆ ಕೊಡುವೆನೆಂದು ರೂಬಿಗೆ ಆಮಿಷ ಒಡ್ಡುತ್ತಿದ್ದ. ಅದರದ್ದುಇನ್ನೊಂದು ನಖರಾ... ಸ್ನಾನ ಬೇಡ ಎಂತಲೋ, ಮೂಳೆ ಕೊಡುಎಂದೋ ಸೂರು ಹಾರಿ ಹೋಗುವಂತೇ ಅರಚುತ್ತಿತ್ತು. ಏತನ್ಮಧ್ಯೆ ಹೊರಬಂದ ಕಲ್ಲೇಶಿ, ಹನುಮೇಶಿಯನ್ನು ನೋಡಿದ್ದೇ ಶ್ವಾನ ಮತ್ತು ಶ್ವಾನೇಶಕೊಟ್ಟ ಅದೊಂದು ಲುಕ್ಕಿಗೆ ಬೈಯ್ಯುವುದು, ಮಾತಾಡುವುದಿರಲಿ ದೃಷ್ಟಿಸಿ ನೋಡಲೂಆಗದೇ ನಮ್ ಕಲ್ಲೇಶಿ ಹನುಮೇಶಿಯ ಕೈಹಿಡಿದೆಳೆದು ಒಳಬಂದುಬಿಟ್ಟ. ಇಬ್ಬರೂ ಮೌನೇಶಿಗಳಾಗಿ ಪಕ್ಕದ ಆರ್ಭಟ ತಗ್ಗುವುದನ್ನೇ ಕಾಯುತ್ತಾಧ್ಯಾನಸ್ಥರಾದರು. ■




**" ಚಾಟ್ ಜಿಪಿಟಿ ಬರೆದದ್ದು ಮೇಡಮ್.**
**ನಾನು ಸ್ಪೆಲ್ಲಿಂಗ್ ಮಿಸ್ಟೇಕ್‌ಗಳನ್ನ ಸೇರಿಸ್ದೆ ಅಷ್ಟೇ "**

# ಅಂಡರ್–ಗ್ರೌಂಡ್ ವೈರಿಂಗ್

ಇ.ಆರ್. ರಾಮಚಂದ್ರನ್

ಮೈಸೂರಿನ ವೊಂಟಿಕೊಪ್ಪಲಲ್ಲಿ ಕಾಗೆಗಳು ಬಿಎಸೆನೆಲ್, ಕೆಇಬಿ ತಂತಿಗಳ ಮೇಲೆ ಸಾಲಾಗಿ ಕೂತಿದ್ದವು.

ಮಿಕ್ಕ ಏರಿಯಾಗಿಂತ ಇಲ್ಲಿನ ಕಾಗೆಗಳಿಗೆ ಹೆಚ್ಚು ಬಿಗುಮಾನ, ಜಂಭ. ಅಲ್ಲಿ ಮೂರು ದೇವಸ್ಥಾನದಲ್ಲಿ ದಿನಾ ಒಂದಲ್ಲ ಒಂದು ಸಂತರ್ಪಣೆ ನಡೆಯುತ್ತೆ. ಚಂದ್ರಮೌಳೀಶ್ವರ ದೇವಸ್ಥಾನದಲ್ಲಿ ಶಿವರಾತ್ರಿಯ ಜಾಗರಣೆ ಉಪವಾಸವಾದ ಮೇಲೆ ಒಳ್ಳೆ ತಿಂಡಿ ತೀರ್ಥ ಸಿಗುತ್ತೆ. ಭಕ್ತಾದಿಗಳು ತಿಂದ ಮೇಲೆ ಮಿಕ್ಕಿದ್ದ ಊಟವೆಲ್ಲಾ ಕಾರ್ಪೋರೇಷನ್ ಮಾಡಿಟ್ಟ ಗುಂಡಿಯಲ್ಲಿ ಎಸೆದ ಮೇಲೆ ಕಾಗೆಗಳಿಗೆ ಸುಗ್ಗಿಯೋ ಸುಗ್ಗಿ. ಕೆಲವು ಕಾಗೆಗಳು ಗೆಸ್ಟ್‌ಗಳನ್ನು ಕರಯುವುದೂ ವಾಡಿಕೆ. ವಿಜಯನಗರದಿಂದ ದೊಡ್ಡಪ್ಪ ಮತ್ತು ಅವರ ಫ್ಯಾಮಿಲಿ, ಲಶ್ಕರ್ ಮೊಹಲ್ಲಾದಿಂದ ಲೋಕಲ್ ಮುಲ್ಲಾ ಕಾಗೆಗಳು ವೆಜಿಟೇರಿಯನ್ ಮೀಲ್ಸ್‌ಗೆ ಬರುವುದು ವಾಡಿಕೆ.

ಹಾಗೆಯೇ ಬಾಲಾಜಿ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಡೆಯುವ ವೈಕುಂಠ ಏಕಾದಶಿ ದಿವಸ ದೇವರ ದರ್ಶನವಾದ ಮೇಲೆ ಭಕ್ತರು ಊಟಮಾಡಿ ಕಾರ್ಪೋರೇಷನ್ ತೊಟ್ಟಿಗೆ ಹಾಕಿದ ಎಲೆಗಳನ್ನು ಧಾಳಿ ಮಾಡಲು ಬಹಳ ಕಾಗೆಗಳು ಹಾಜರ್, ಲೋಕಲ್ ಮತ್ತು ಗೆಸ್ಟ್‌ಗಳು. ಹನುಮಂತನ ದೇವಸ್ಥಾನವು ಹನುಮಾನ್ ಚಾಳಿಸ ಜೊತೆಗೆ ಅಲ್ಲಿ ಕೊಡುವ ಚರ್ರೂಪ ಪ್ರಸಿದ್ಧಿ. ವಿಜಯನಗರದ ಯೋಗಾನರಸಿಂಹ ದೇವಸ್ಥಾನದಲ್ಲಿ ಪ್ರತಿ ವರ್ಷ ಜನವರಿ ಮೊದಲನೇ ತಾರೀಕು ಲಕ್ಷಕ್ಕೆ ಮೇಲೆ ಲಾಡು ಹಂಚುತ್ತಾರೆ. ಮಿಕ್ಕಿ ಹೋದ ಲಾಡೂಗೆ ಅಲ್ಲಿನ ಕಾಗೆಗಳು ಹೊಂಚು ಹಾಕುತ್ತವೆ. ಇದೆಲ್ಲಾ ಹಬ್ಬ ಹರಿದಿನದ ವಾಡಿಕೆ. ದಿನ ನಿತ್ಯ ಊಟ ಹೇಗೆ ಸಾಗುತ್ತೆ?

ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ದಿನಾ ಮದುವೆ, ಮುಂಜಿ ನಡೆಯುತ್ತೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಅಡುಗೆ ವ್ಯವಸ್ಥೆ ಇದೆ. ಅಲ್ಲಿ ವಾಡಿಕೆ ಕಾಗೆಗಳು ಬಂದು ಊಟಮಾಡಿ ವಧು, ವರನನ್ನು , ಮುಂಜಿಯ ವಟುವನ್ನು ಹರೆಸಿ ಹೋಗುತ್ತವೆ. ಈ ತರಹ ಮದುವೆ ಮುಂಜಿ ಸಂತರ್ಪಣೆ ಬಹಳ ಏರಿಯಾಗಳಲ್ಲಿದೆ. ಕೋವಿಡ್–19 ಟೈಮ್ನಲ್ಲೂ ಇದು ನಡೆಯುತ್ತಿತ್ತು. ಆಗ ಮನುಷ್ಯರ ಹಾಗೆ ಅವುಗಳೂ ನಂಬರ್ ಲಿಮಿಟ್ ಮಾಡಿಕೊಂಡಿದ್ದು.

ಇವತ್ತಿನ ಮೀಟಿಂಗ್ಗೆ ಅರಮನೆ ಸುತ್ತಲೂ ಇರುವ ಕಾಗೆಗಳು ಬರಬೇಕಿತ್ತು. ಆ ಕಾಗೆಗಳಿಗೆ ಜಂಭ. ಅರಮನೆಯ ಹತ್ತಿರ ವಾಸ ಮಾಡುವ ಚಮ್ಮಾರ, ಕಸ ಗುಡಿಸುವವರಿಗೂ ಜಂಭ ಜಾಸ್ತಿ ಇರುತ್ತೆ ಬೇರೆ ಸಾಮಾನ್ಯ ಜನರನ್ನು ನೋಡಿ. ದಸರಾ ಟೈಮ್ನಲ್ಲಿ ಅಲ್ಲಿದ್ದ 8 ದೇವಸ್ಥಾನದಲ್ಲೂ ಒಂಬತ್ತು ರಾತ್ರಿಯೂ ಸ್ಪೆಷಲ್ ಊಟಗಳು, ಎಲ್ಲತರಹ ಸ್ವೀಟ್ಗಳು ಪ್ರತಿದಿನ ಮಾಡುತ್ತಾರೆ. ಇಲ್ಲಿನ ಕಾಗೆಗಳಿಂದ ಇನ್ವಿಟೇಷನ್‌ಗೆ ಬೇರೆ ಏರಿಯಾದ ಕಾಗೆಗಳು ಕಾಯುತ್ತಿರುವುತ್ತವೆ.

ಇವೆಲ್ಲವೂ ಆ ಎರಿಯಾದ ಕೆಇಬಿ, ಅಥವ ಬಿಎಸೆನೆಲ್ ವೈರ್ಗಳ ಮೇಲೆ ಕೂತು ಮೀಟಿಂಗ್ ಮಾಡುವುದು ಇಲ್ಲ ಅವರವರ ಊಟಕ್ಕೆ ಕಾಯುವುದು ಸರ್ವೇ ಸಾಮಾನ್ಯ.

ಇಂದು ಎರಡು ಗ್ರೂಪುಗಳು ಸೇರಿ ತಮ್ಮ ಪರಸ್ಪರ ಅಜೆಂಡಾದ ಮೀಟಿಂಗ್ ನಡೆಸುತ್ತಿದ್ದವು. ಕೆಇಬಿ ವೈರ್ಗಳ ಮೇಲೆ ಕೂತಿದ್ದರೆ ಅದಕ್ಕೆ ಬೇಕಾಗಿದ್ದ ತಕ್ಕ ಮಾಹಿತಿ,

ಎಲೆಕಟ್ರೀಷಿಯನ್ ಮನೆಯ ಹತ್ತಿರವಿದ್ದು ಕರೆಂಟ್ ಬಗ್ಗೆ ಸ್ವಲ್ಪ ಮಟ್ಟಿಗೆ ಕಲಿತಿದ್ದ ಕಾಗೆ ಯಾವ ಕಾಗೆಯೂ ಲೈವ್ ವೈರ್ ಮುಟ್ಟದ ಹಾಗೆ ಟ್ರೈನಿಂಗ್ ಕೊಟ್ಟಿತ್ತು. ಅರ್ತಿಂಗ್ ಬಗ್ಗೆ ಕ್ಲಾಸ್ ತೆಗೆದುಕೊಂಡಿತ್ತು.

ಇನ್ನೇನು ಮೀಟಿಂಗಗ್ ಶುರುವಾಗಬೇಕು ಆ ಸಮಯದಲ್ಲಿ ಎರಡು ಕಾಗೆಗಳು ಓಡೋಡಿಬಂದವು.

'ಲಾರೆಲ್ ಮತ್ತು ಹಾರ್ಡಿ ಉಸಿರಿಕಟ್ಟುವ ಹಾಗೆ ಹಾರಿಬಂದಿದ್ದಾರೆ ಯಾಕೊ.... ಅವರಿಗೆ ಮೀಟಿಂಗ್ಗೆ ಅಟೆಂಡ್ ಮಾಡಲು ಅರ್ಹತೆ ಇಲ್ಲ ಅಲ್ವಾ?' ಸ್ನಾಬ್ ಕಾಗೆ.

ಗಣೇಶ ಟಾಕಿಸ್ನಲ್ಲಿ ಬಿರುಗಾಳಿ ಮಳೆಗೆ ಹೆಂಚು ಒಡೆದುಹೋಗಿ ಹೋಗಿ ಅದನ್ನು ರಿಪೇರಿ ಮಾಡಲು ಒಂದೆರೆಡು ತಿಂಗಳುಗಳಾಗಿತ್ತು. ಗಣೇಶ ಟಾಕಿಸಿನ ಹತ್ತಿರವಿದ್ದ ಎರಡು ಕಾಗೆಗಳೂ ಲಾರೆಲ್ ಹಾರ್ಡಿಯ ಪಿಕ್ಚರ್ ದಿನಾ ನೋಡಿ ಅವರ ತರಹ ಹಾಡಿ ಡ್ಯಾನ್ಸ್ ಮಾಡುತ್ತಿದ್ದವು. ಆವಾಗಿನಿಂದ ಅವಕ್ಕೆ ಲಾರೆಲ್ ಮತ್ತು ಹಾರ್ಡಿಯವರ ಹೆಸರಿಟ್ಟಿದ್ದರು.

'ಅವರನ್ನು ಯಾವ ಮೀಟಿಂಗ್ ಕರೆದಿಲ್ಲ. ಅವರಿಬ್ಬರೂ ಒಂದೇ ಸಮನೆ ಅರುಳು ಹುರಿದ ಹಾಗೆ ಕಾಕರಿಸುತ್ತಿದ್ದಾರೆ... ಸೆಕ್ರೆಟರಿ ಮುಖ ಇಳಿದಿದೆ. ನೋಡೋಣ ಎನೆಂದು ಗೊತ್ತಾಗುತ್ತೆ.'

ಮೀಟಿಂಗ್ ಶುರುವಾದ ತಕ್ಷಣ ಸೆಕ್ರೆಟರಿ ಪ್ರೆಸಿಡೆಂಟ್ರ ಅಪ್ಪಣೆ ಕೋರಿ ಶುರು ಮಾಡಿದ.

'ನಮಗೆ ಈಗ ಬಂದ ಸುದ್ದಿಯೇನೆಂದರೆ ಮೈಸೂರು ಕಾರ್ಪೊರೇಷನ್ ಎಲ್ಲಾ ವೈರ್ಗಳನ್ನು – ಬಿಎಸೆನೆಲ್ ಮತ್ತು ಕೆಇಬಿ ವೈರ್ಗಳನ್ನು – ಅಂಡರ್ ಗ್ರೌಂಡ್ ಮಾಡಲು ನಿರ್ಧರಿಸಿದೆ. ಈ ದಸರಾಗೆ ಮುಂಚೆ ಇದನ್ನು ಸಂಪೂರ್ಣವಾಗಿ ಅಂಡರ್ ಗ್ರೌಂಡ್ ಮಾಡ್ತಾರಂತೆ. ಇದು ಜಾರಿಗೆ ಬಂದರೆ ನಮ್ಮ ಕೈಕಾಲು ಮುರಿದ ಹಾಗೆ. ಹಾರಿ ಹಾರಿ, ನಮಗೆ ಕೂರಕ್ಕೂ ಆಗಲ್ಲ. ಇದೇ ನಮ್ಮ ಕೊನೆಯ ಮೀಟಿಂಗ್ ಆಗಬಹುದು. ಇದನ್ನು ನಮ್ಮ ಲಾರೆಲ್ ಹಾರ್ಡಿ ಕಾರ್ಪೊರೇಷನ್ನ ನಿರ್ಧಾರವನ್ನು ಸ್ವತಹ ಕೇಳಿ ತಿಳಿಸಲು ಹಾರಿ ಬಂದಿದ್ದಾರೆ. ಅವರಿಗೆ ವಂದನೆಗಳು. ಅವರು ಇನ್ನು ಹೋಗಬಹುದು.'

ಮೀಟಿಂಗ್ಗೆ ಬಂದ ಮೆಂಬರ್ಗಳು ಈ ತರಹ ಎಮರ್ಜೆಂಸಿಗೆ ಅದರ ಹಾಗೆಯೇ ನಾವೂ ಎಮರ್ಜೆಂಸಿ ಕ್ರಮ ತೆಗೆದುಕೊಳ್ಳ ಬೇಕು ಎಂದರು.


ಆಗ ಚೇರ್ಮನ್ ಹೇಳಿದರು. 'ನಿಮ್ಮ ಮಾತಿಗೆ ನಾನು ಒಪ್ಪುತ್ತೇನೆ. ಇದು ನಮಗೆ ಬಂದ ಎಮರ್ಜೆಂಸಿ. ಲಾರೆಲ್ ಹಾರ್ಡಿ ನಮಗೆ ಉಪಕಾರ ಮಾಡಿದ್ದಾರೆ. ಅವರಿಗೆ ತಕ್ಕ ಬಹುಮಾನ ಕೊಡುವಂತೆ ನಾನು ಸೆಕ್ರೆಟರಿಗೆ ಹೇಳುತ್ತೇನೆ.... ಬಹಳ ವರ್ಷಗಳ ಹಿಂದೆ ನಾನು ಚಿಕ್ಕವನಾಗಿದ್ದಾಗ, ಹಾರುತ್ತಿರುವಾಗ ಮಳೆ ಬಂತು. ನಾನು ನೆನೆಯಬಾರದೆಂದು ಛಾವಣಿ ಹುಡುಕುತ್ತಿದ್ದಾಗ ಗಣೇಶ ಟಾಕೀಸಿಗೆ ಬಂದೆ. ಅಲ್ಲಿ ಒಂದು ಕಿಟಕಿ ತೆಗೆದಿತ್ತು. ಅಲ್ಲಿ ನಾನು ವಿಶ್ರಾಮ ಮಾಡುತ್ತಿದ್ದಾಗ ಅಲ್ಲಿ ನಡೆಯುತ್ತಿದ್ದ ಆಲ್ಫರೆಡ್ ಹಿಚ್ಕಾಕ್ನ 'ದಿ ಬರ್ಡ್ಸ್' ಚಿತ್ರ ನೋಡಿದೆ. ಅದ್ಭುತ ಚಿತ್ರ.....ಅದರಲ್ಲಿ ............. ಹೀಗೆಲ್ಲಾ ಆಯಿತು.'

ನಾಳೆ ಬೆಳಿಗ್ಗೆಯೇ ಇದನ್ನು ಪ್ರಾರಂಭ ಮಾಡುವುದು ಎಂದು ಕಮಿಟಿ ನಿರ್ಧಾರ ತೆಗೆದುಕೊಂಡಿತು. ಎಲ್ಲಾ ಏರಿಯಾಗೆ ಎಲ್ಲಾರೂ ಮುಂಜಾಗ್ರತೆ ವಹಿಸುವಂತೆ ಫ್ಲೈಯಿಂಗ್ ಆಡಿಯೋ ಕೊರಿಯರ್ಗಳಿಗೆ ಹೇಳಿದ್ದಾಯಿತು.

ಮುಂದಿನ 48 ಘಂಟೆಗಳಲ್ಲಿ ಮೈಸೂರಿನ ಮೇಯರ್, ಕೆಇಬಿ ಚೇರ್ಮನ್ ಮತ್ತು ಬಿಎಸೆನ್ಎಲ್ ಎಮ್ಡಿ ಮನೆಯಿಂದ ಬಂದಾಗ ಅವರ ತಲೆಯಮೇಲೆ, ಸೂಟ್ ಮೇಲೆ, ಶರ್ಟ್ ಮೇಲೆ ಇದ್ದಕ್ಕಿದ್ದಂತೆ ಧಾರಾಳವಾಗಿ ಇಶ್ಶಿ ಧಾಳಿ ನಡೆಯಿತು. ಅವರ ಮನೆಯ ಹುಡುಗ ಹುಡುಗಿಯರು ಹೋಗುತ್ತಿದ್ದರೆ ಅವರ ಸ್ಮಾರ್ಟ ಫೋನ್ ಮೇಲೆ ಮತ್ತೆ ಮಂಗಳಾರತಿ ಆಯಿತು. ದೇವಸ್ತಾನಕ್ಕೆ ಪೂಜೆಗೆ ಅವರ ಮನೆ ಹೆಂಗಸರು ದೇವಸ್ತಾನಕ್ಕೆ ಪೂಜೆಗೆ ಹೂವು, ಹಣ್ಣು, ಕುಂಕುಮ ತೆಗೆದುಕೊಂಡು ಹೋಗುತ್ತಿದ್ದರೆ, ಆ ತಟ್ಟೆಗಳನ್ನು ಕುಕ್ಕಿ ನೆಲಕ್ಕೆ ಉರುಳಿಸಿತು. ಬಲಿಷ್ಟವಾದ ಕಾಗೆಗಳು ವೈರ್ಗಳನ್ನು ಕಚ್ಚಿಹಾಕಿತು. ಜನಗಳು ಎಲ್ಲಾ ಕಡೆ ಬೊಬ್ಬೆ ಹೊಡೆಯುವುದಕ್ಕೆ ಶುರುಮಾಡಿದರು.

ಪ್ರಾಣಿಗಳ ಸೈಕಾಲಜಿಸ್ಟ್ ಮೇಯರ್ಗೆ ನಿಮ್ಮ ನಿರ್ಧಾರವನ್ನು ವಾಪಸ್ಸು ತೆಗೆದುಕೊಳ್ಳಿ. ಇಲ್ಲದಿದ್ದರೆ ನಿಮಗೆ ಮತ್ತೆ ನಮಗಾರಿಗೂ ಉಳಗಾಲವಿಲ್ಲ ಎಂದರು.

24 ಘಂಟೆಯಲ್ಲಿ ವೈರ್ಗಳ ವಿಚಾರ ವಾಪಸ್ಸು ತೆಗೆದುಕೊಂಡರು. ಮತ್ತೆ ಕಾಗೆಗಳ ಮೀಟಿಂಗ್ ಈಗ ವೈರ್ಗಳ ಮೇಲೆ ಶಾಂತಿಯಿಂದ ನಡೆಯುತ್ತಿದೆ. ಊಟೋಪಚಾರ ಯಥಾಪ್ರಕಾರ ಶುರುವಾಗಿದೆ. ■



**ಈ ವರುಷ**
**ಸಿಂಪಲ್ಲಾಗಾಗಲಿ ಯುಗಾದಿ**
**ಬೇಡ ಹೆಚ್ಚಿನ ಬೇಗುದಿ**
**ನನಗೊಂದು ಸೀರೆ ಸರ**
**ಮಗಳಿರುವುದು ಒಬ್ಬಳೇ**
**ತನ್ನಿ ಅವಳ ಕೈಗೊಂದೆರಡು ಜೊತೆ ಬಳೆ**
**ಬರ್ತಾ ಬಾಯಿ ರುಚಿಗೆ**
**ತನ್ನಿ ನಿಮಗೊಂದೆರಡು**
**ಕೋಡುಬಳೆ**



**–ಸುಕೇಶವ**

# ಸೂತಕದ ಮನೆಯಲ್ಲೂ ಹಾಸ್ಯ ರಸ ???

ಜಯಲಕ್ಷ್ಮಿ ಭಟ್

ತಾಯಿಯನ್ನು ನೆನಪಿಸಿಕೊಂಡು, ಕಣ್ಣು ಮೂಗು ಒರೆಸಿಕೊಳ್ಳುತ್ತಾ ನಾದಿನಿಯರು ಪುರೋಹಿತರು ಹೇಳಿದಂತೆ ಮಾಡುತ್ತಿದ್ದರು . ಕರ್ತೃವಿನ ಪತ್ನಿಯಾಗಿ ನಾನೂ ಮಾಡಬೇಕಾದ ಕರ್ತವ್ಯಗಳು ಕೆಲವಿದ್ದವು. ನನ್ನ ಕಣ್ಣಂಚುಗಳೂ ತೇವವಾಗುತ್ತಿದ್ದವು.

ಇದ್ದಕ್ಕಿದ್ದಂತೆ ಪುರೋಹಿತರು "ಅಕ್ಕಾ ನೀವು ನಾಳೆ ಬೇರೆ ಬಣ್ಣದ ಸೀರೆ ಉಡ್ಬೇಕು"

ಎಂದಾಗ ನಾನು ತಬ್ಬಿಬ್ಬು. ನಾನುಟ್ಟಿದ್ದ ನೀಲಿ ಬಣ್ಣದ ಸೀರೆಗೇನಾಗಿದೆ ಎಂದು ನೋಡಿಕೊಂಡೆ. ಅಪರಕ್ರಿಯೆಯಾದ್ದರಿಂದ ಕೆಂಪು, ಹಳದಿಯಂತಹ ಶುಭಕರ ಬಣ್ಣಗಳು ಬೇಡವೆಂದು ನೀಲಿ, ಕಂದು, ಕಪ್ಪು ಬಣ್ಣದ ಸೀರೆಗಳನ್ನೇ ಚೀಲಕ್ಕೆ ತುರುಕಿಕೊಂಡಿದ್ದೆ ಹೊರಡುವ ಮೊದಲು. ಈಗ ಬೇರೆ ಬಣ್ಣದ ಸೀರೆ ಎಲ್ಲಿಂದ ತರಲಿ ಎಂದುಕೊಂಡೆ.

ಅಷ್ಟರಲ್ಲಿ ಪುರೋಹಿತರ ಮಾತು ಮುಂದುವರಿಯಿತು."ಎಲ್ಲರೂ ಒಂದೇ ಬಣ್ಣದ ಸೀರೆ ಉಟ್ರೆ ಯಾರು ಅಂತ ಗೊತ್ತಾಗುವುದಿಲ್ಲ–" ನಾದಿನಿಯೊಬ್ಬಳು ನೀಲಿ ಸೀರೆಯುಟ್ಟಿದ್ದಳು.

"ನೀಲಿ ಸೀರೆಯ ಅಕ್ಕ ಬನ್ನಿ ಅಂದ್ರೆ ಎಲ್ಲರೂ ಬರುವ ಹಾಗಾಗ್ತದೆ. ಅದಕ್ಕೆ ಕೆಂಪಕ್ಕ, (ಕೆಂಪು ಸೀರೆ ಉಟ್ಟ ಅಕ್ಕ ) ಹಸಿರಕ್ಕ, ನೀಲಿ ಅಕ್ಕ ಅಂತ ಕರೀಬಹುದು."

ಈಗ ಎಲ್ಲರ ಮುಖದಲ್ಲೂ ಮಂದಹಾಸ. ಅದು ಬಲವಂತದ, ತೋರಿಕೆಯ ನಗುವಾಗಿರಲಿಲ್ಲ. ಸಹಜವಾಗಿ ಬಂದಿತ್ತು.

ಇವರೋ ಎಷ್ಟೇ ವ್ಯವಹಾರ ಕುಶಲಿಯಾಗಿದ್ದರೂ ಆಚಾರ, ವಿಚಾರ, ಸಂಪ್ರದಾಯಗಳ ವಿಷಯದಲ್ಲಿ ಬರೀ ಸೊನ್ನೆ. ಹಿಂದೊಮ್ಮೆ ಪೂಜೆ ಮಾಡುವಾಗ ಪುರೋಹಿತರು ದರ್ಭೆಯಿಂದ 'ಪವಿತ್ರ' ಮಾಡಿಕೊಟ್ಟು ಹಾಕಿಕೊಳ್ಳಲು ಹೇಳಿದ್ದರು. ಇವರು ಬಲಗೈಯ ಉಂಗುರ ಬೆರಳಿಗೆ ಹಾಕುತ್ತಾ 'ಸರಿ ತಾನೇ? ' ಎನ್ನುವಂತೆ ನನ್ನ ಮುಖ ನೋಡಿದ್ದರು. ಅದನ್ನು ನನ್ನ ತಂಗಿ ನೋಡಿಬಿಟ್ಟು ಆಮೇಲೆ ಆಡಿಕೊಂಡು ನಕ್ಕಿದ್ದಳು.

ಜನಿವಾರವನ್ನು ಎಡಭುಜಕ್ಕೂ ಬಲಭುಜಕ್ಕೂ ವರ್ಗಾಯಿಸುವುದರಲ್ಲೇ ಸುಸ್ತಾಗಿದ್ದರು. ಹೇಳಿದ್ದು ಬೇಗ ಬೇಗ ಅರ್ಥವಾಗುತ್ತಿರಲಿಲ್ಲ.

"ಮೂರು ಸಲ ಗಾಯತ್ರಿ ( ಮಂತ್ರ) ಹೇಳಿ" ಎಂದರು ಪುರೋಹಿತರು. ಅವರಿಗೆ ಮಂತ್ರಗಳನ್ನೂ ಹೇಳಬೇಕು, ಜೊತೆ ಜೊತೆಗೆ ಏನು ಮಾಡಬೇಕು ಎಂಬುದನ್ನೂ ವಿವರಿಸಬೇಕು. ಅದಕ್ಕೆ ಸಾಧ್ಯವಾದಷ್ಟು ಕಡಿಮೆ ಪದಗಳನ್ನು ಬಳಸುತ್ತಿದ್ದರು.

"ಗಾಯತ್ರಿ ಗಾಯತ್ರಿ ಗಾಯತ್ರಿ " ಎಂದು ಸುಮ್ಮನಾದರು. ಅಲ್ಲೊಂದು ನಗೆ ಬಾಂಬ್ ಸ್ಫೋಟಿಸಿತ್ತು.

ಇವರ ಕೈಯಲ್ಲಿ ಕ್ರಿಯೆ ಮಾಡಿಸುವ ಕಷ್ಟ ಅರ್ಥವಾದ ಪುರೋಹಿತರು ಬಾಯಲ್ಲಿ ಮಂತ್ರಗಳನ್ನು ಹೇಳುತ್ತಾ, ಪಕ್ಕದಲ್ಲಿ ಕುಳಿತ ಇವರ ಎಡಗೈಯನ್ನು ಎಳೆದುಕೊಂಡು, ಅಂಗೈಯಲ್ಲಿ ಹೂವು, ಗಂಧ,

ಅಕ್ಷತೆಗಳನ್ನಿಟ್ಟು ,ಇವರ ಬಲಗೈಯನ್ನೆಳೆದು ಅದಕ್ಕೆ ಮುಚ್ಚಿ, ಇವರ ಬಲ ಮಂಡಿಯ ಮೇಲೆ ಕೈಗಳನ್ನಿರಿಸಿದಾಗ ನನಗೆ ನಗುವುದೋ ಅಳುವುದೋ ತಿಳಿಯದಂತಾಯ್ತು.

ಉತ್ತರ ಕ್ರಿಯೆ ಮಾಡುವಾಗ ಬೆಳಿಗ್ಗೆ ಒಮ್ಮೆ ಸ್ನಾನ ಮಾಡಿದರೆ ಸಾಲುವುದಿಲ್ಲ. ಮಧ್ಯೆ ಮಧ್ಯೆ ಮತ್ತೂ ಒಂದೆರಡು ಸಲ ಸ್ನಾನ ಮಾಡಬೇಕಾಗುತ್ತದೆ.

ಹೆಂಗಸರು ಬೇಗ ಸ್ನಾನ ಮುಗಿಸಿ ಬಂದರೂ ಈ ಅಣ್ಣ ತಮ್ಮಂದಿರದೇ ಸಮಸ್ಯೆ. ಪ್ರತಿಬಾರಿ ಸ್ನಾನ ಮಾಡುವಾಗಲೂ ಸಾಬೂನು ಹಾಕಿ ಕ್ರಮದಂತೆ ಸ್ನಾನ ಮಾಡುತ್ತಿದ್ದುದರಿಂದ ಕಾರ್ಯ ಮುಂದುವರಿಸಲು ಕಾಯಬೇಕಾಗುತ್ತಿತ್ತು.

"ಅಕ್ಕಾ ಬೆಳಿಗ್ಗೆ ಒಮ್ಮೆ ಎಲ್ಲರ ಸ್ನಾನ ಆದ ಕೂಡ್ಲೇ ಆ ಸಾಬೂನು ಅಲ್ಲಿಂದ ತೆಗ್ದು ಇಟ್ಟುಬಿಡಿ. ಇಲ್ಲದಿದ್ರೆ ಈ ಅಣ್ಣನೂ ತಮ್ಮನೂ ಬೇಗ ಬೇಗ ಬರೂದಿಲ್ಲ. ಇಲ್ಲಿ ನಮ್ಗೆ ತಡವಾಗ್ತದೆ" ಎಂದು ಪುರೋಹಿತರೆಂದಾಗ ನಗದಿರಲು ಸಾಧ್ಯವೆ?

ಹೋಮಕ್ಕೆ ಆಹುತಿ ನೀಡುತ್ತಾ ಪುರೋಹಿತರು"ನನ್ನನ್ನು ಮುಟ್ಟಿಕೊಳ್ಳಿ" ಎಂದರು.

ಪುರೋಹಿತರ ಬಲಬದಿಗೆ ಕುಳಿತ ಇವರು ಎಡಗೈಯಿಂದ ಅವರ ಭುಜವನ್ನು ಮುಟ್ಟಿಕೊಂಡಾಗ ಸಿಟ್ಟು ಉಕ್ಕಿ ಬಂತು. ಭುಜದ ಮೇಲೆ ತಟ್ಟಿ "ಬಲಗೈಯಲ್ಲಿ " ಎಂದೆ.

ಅದೇ ವೇಳೆಗೆ ಪುರೋಹಿತರೂ "ಎಡಗೈಯಲ್ಲಲ್ಲ " ಎಂದರು. ಅಣ್ಣನ ಅಜ್ಞಾನಕ್ಕೆ ನಾದಿನಿಯರಿಗೆ ಸಿಟ್ಟು ಮತ್ತು ನಗು.

ಪಿಂಡ ಸ್ಥಾಪನೆ ಮಾಡುವಾಗ, ದರ್ಭೆಯ ಮೇಲಿಂದ ಪಿಂಡ ಉರುಳುತ್ತಾ ಹೋದಾಗ ಪುರೋಹಿತರಿಗೆ ತಲೆ ಚಚ್ಚಿಕೊಳ್ಳುವ ಹಾಗಾಯ್ತು."ಬೌಲಿಂಗ್ ಮಾಡ್ಬೇಡಿ" ಎಂದಾಗ ಮತ್ತೆ ನಗೆ ಬುಗ್ಗೆ.

ಹತ್ತನೇ ದಿನದ ಕಾರ್ಯಕ್ರಮ ಮುಗಿದು, ಊಟ ಮಾಡಿ, ಎಲ್ಲರೂ ವಿಶ್ರಮಿಸುತ್ತಿದ್ದಾಗ ನನ್ನ ಫೋನ್ ರಿಂಗಣಿಸಿತು. ಅತ್ತೆಯ ತಂಗಿಯ ಕರೆ. ಅವರು ನನಗೆ ಸೋದರತ್ತೆ ಕೂಡಾ. ಕುಶಲ ವಿಚಾರಿಸಿದರು. ಮರುದಿನ ಬರುತ್ತೇವೆಂದರು.

ಮೆಲ್ಲನೆ ಕೇಳಿದರು–"ಹೆಣ್ಮಕ್ಳು ಏನ್ಮಾಡ್ತಿದ್ದಾರೆ? ತುಂಬಾ ಕಂಗಾಲಾಗಿದ್ದಾರಾ? ಅಳ್ತಾ ಇದ್ದಾರಾ?"

"ಅತ್ತುಕೊಂಡು ಕ್ರಿಯಾಕರ್ಮ ಮಾಡಲು ನಮ್ಮ ಪುರೋಹಿತರು ಬಿಡಲ್ಲ. ಎಲ್ಲರನ್ನೂ ನಗಿಸ್ತಾರೆ. ದುಃಖವಿದ್ದರೂ ನಗು ನಗುತ್ತಲೇ ಎಲ್ಲರೂ ಭಾಗವಹಿಸ್ತಿದ್ದಾರೆ" ಎಂದೆ.

■

**"ಉಪ್ಪಿನಹಣ್ಣು....!"**

ಪುಟ್ಟು ಕೃಷ್ಣ : ತಾತ, ನಂಗೆ ನಿಂಬೆಕಾಯಿ, ನಿಂಬೆಹಣ್ಣು ಗೊತ್ತು, ಮಾವಿನಕಾಯಿ, ಮಾವಿನ ಹಣ್ಣು ಗೊತ್ತು, ಸೀಬೆಕಾಯಿ, ಸೀಬೆಹಣ್ಣು ಗೊತ್ತು. ಆದರೆ... ಉಪ್ಪಿನಕಾಯಿ ಗೊತ್ತು, ಉಪ್ಪಿನಹಣ್ಣು ಗೊತ್ತೇ ಇಲ್ಲ ನಿಂಗೇನಾದರೂ ಗೊತ್ತಾ....?

ತಾತ :ನಿರುತ್ತರ.....!

**–ವಿ. ವಿಜಯೇಂದ್ರ ರಾವ್**

**ದಂನಆ**

- ✓ ಅತ್ಯುತ್ತಮ ಅಭ್ಯರ್ಥಿಗೆ ವೋಟ್ ಹಾಕಲು ನಮಗೆ ಆಸೆ. ಆದರೆ ಅವನು ಸ್ಪರ್ಧಿಸಿಯೇ ಇರುವುದಿಲ್ಲ.
- ✓ ಪಕ್ಷಾಂತರ ವಿರೋಧಿ ಕಾಯಿದೆ ಚಿಲ್ಲರೆ ವ್ಯವಹಾರವನ್ನು ನಿಷೇಧಿಸುತ್ತದೆ ಆದರೆ ಸಗಟು ವ್ಯವಹಾರಕ್ಕೆ ಅನುಮತಿ ಕೊಡುತ್ತದೆ.
- ✓ ಹೌ ಲಾಂಗ್ ಶುಡ್ ವಿ ಲಿವ್ ಟು ಲರ್ನ್ ಹೌ ಟು ಸರ್‌ವೈವ್.
- ✓ ಟ್ರಾಫಿಕ್ ಪೊಲೀಸರ ಸಲಹೆ: ಬಿ ಮಿಸ್ಟರ್ ಲೇಟ್ ದ್ಯಾನ್ ಲೇಟ್ ಮಿಸ್ಟರ್.
- ✓ ಮನಿ ಈಸ್ ನೆವರ್ ಆಕ್ಚುಯಲಿ ಯುವರ್ಸ್. ಈಟ್ ಈಸ್ ಜಸ್ಟ ಯುವರ್ ಟರ್ನ್ ಟು ಯೂಸ್ ಇಟ್.
- ✓ ನಿಮ್ಮ ಕೈ ನಿನ್ನೆಯ ವೈಫಲ್ಯಗಳಿಂದ ತುಂಬಿದ್ದರೆ ಹೊಸತೇನನ್ನು ಹಿಡಿದುಕೊಳ್ಳಲು ನಿಮಗೆ ಸಾಧ್ಯವಾಗದು.
- ✓ ಯು ಮೆ ನಾಟ್ ಬಿ ಸೂಪರ್‌ಸ್ಟಿಷಸ್ ಬಟ್ ಬಿಲೀವ್ ಇನ್ ಟ್ರಾಫಿಕ್ ಸೈನ್ಸ್.
- ✓ ಯಶಸ್ಸು ನಿಮ್ಮನ್ನು ಹುಡುಕಿಕೊಂಡು ಬರದು. ನೀವು ಅದನ್ನು ಹುಡುಕಿಕೊಂಡು ಹೋಗಬೇಕು.
- ✓ ಗುಲಾಬಿ ಗಿಡದಲ್ಲಿ ಮುಳ್ಳಿದೆ ಎಂದು ದೂರಬಹುದು. ಅಥವಾ ಮುಳ್ಳಿನ ಗಿಡದಲ್ಲಿ ಗುಲಾಬಿ ಹೂ ಇದೆ ಎಂದು ಖುಷಿಪಡಬಹುದು.
- ✓ ವಿದ್ಯೆ ನಮ್ಮನ್ನು ಎ.ಹೆ.ಗುರುತಿನಿಂದ ಸಹಿಗೆ ಕೊಂಡೊಯ್ಯಿತು. ತಂತ್ರಜ್ಞಾನ ಸಹಿಯಿಂದ ಹೆಬ್ಬೆಟ್ಟು ಗುರುತಿಗೆ ಕೊಂಡೊಯ್ಯಿತು.
- ✓ ಚೇಂಜ್ ಈಸ್ ನೆವರ್ ಪೈನ್‌ಫುಲ್. ಓನ್ಲಿ ರಿಲಕ್ಟನ್ಸ್ ಟು ಚೇಂಜ್ ದಟ್ ಈಸ್ ಪೈನ್‌ಫುಲ್.
- ✓ ನಿಮ್ಮ ಕೈಲಾಗುತ್ತದೆ ಎಂದು ನೀವು ಭಾವಿಸಿದರೆ ಅಥವಾ ಆಗದು ಎಂದು ಭಾವಿಸಿದರೆ ಎರಡೂ ಸರಿ.
- ✓ ನಿಮ್ಮನ್ನು ಯಾರಾದರು ನಿರಾಶೆಗೊಳಿಸಿದರೆ ಅವರನ್ನು ತೆಗಳಬೇಡಿ. ಅವರಿಂದ ಹೆಚ್ಚು ನಿರೀಕ್ಷಿಸಿದ್ದಕ್ಕೆ ನಿಮ್ಮನ್ನು ನೀವೇ ದೂಷಿಸಿಕೊಳ್ಳಿ.
- ✓ ಅಡ್ವರ್ಟೈಸಿಂಗ್ ಈಸ್ ಇನ್‌ಸ್ಟಿಟ್ಯೂಷನಲೈಸ್ಡ್ ಲೈಯಿಂಗ್.
- ✓ ಇನ್ ಇಂಡಿಯ ವಿ ಕ್ಲಾಸಿಫೈ ಮ್ಯಾರೇಜ್ ಅಸ್ ಲವ್ ಅಂಡ್ ಅರೇಂಜ್ಡ್, ಈವನ್ ದೊ ಲವ್ ಮ್ಯಾರೇಜಸ್ ಎವೆಂಚುಯಲಿ ನೀಡ್ ಟು ಬಿ ಅರೇಂಜ್ಡ್ ಅಂಡ್ ಅರೇಂಜ್ಡ್ ಮ್ಯಾರೇಜಸ್ ನೀಡ್ ಟು ಹ್ಯಾವ್ ಲವ್.
- ✓ ನಾವು ಬರೆಯುತ್ತೇವೆ ಏಕೆಂದರೆ ನಾವು ಓದುಗರು.

■

# ಕುಮಾರನ ಕಿಡ್ನ್ಯಾಪ್

**ಪಾಲಹಳ್ಳಿ ವಿಶ್ವನಾಥ್**

ನಾವು ಅಂಥ ದೊಡ್ಡ ಕಳ್ಳರೇನೂ ಅಲ್ಲ. ಇತಿಹಾಸದ ಮಹಾ ಕಳ್ಳರ ಪಟ್ಟಿಯಲ್ಲಿ ನಮ್ಮ ಹೆಸರೇನೂ ಬರುವುದಿಲ್ಲ. ಸಣ್ಣ ಪುಟ್ಟ ಕಳ್ಳರ ಪಟ್ಟಿ ಮಾಡುವರೂ ಕೂಡ ನಮ್ಮನ್ನು ಗಣನೆಗೆ ತೆಗೆದುಕೊಳ್ಳುವುದು ಅನುಮಾನವೇ. ಬಿಡಿ, ನಮಗೇ ಆ ಪಟ್ಟಿಗಳಲ್ಲಿ ಇರುವ ಆಸೆಯೂ ಇಲ್ಲ... ಆದರೂ ಈಗ ನಾನು ಮತ್ತು ವಿನೋದ ಪೊಲೀಸರ ಲಾಕಪ್‌ನಲ್ಲಿ ಕುಳಿತಿದ್ದೇವೆ.

ನಾವಿಬ್ಬರೂ ಒಟ್ಟಿಗೆ ಬೆಳೆದವರು. ಅಷ್ಟೇನೂ ಓದಲಿಲ್ಲ. ಅದು ಇದು ಉದ್ಯೋಗ ಸಿಕ್ಕಾಗ ಸ್ವಲ್ಪ ದುಡ್ಡು ಮಾಡಿದೆವು. ಈಗ ಇಬ್ಬರ ಹತ್ತಿರ ಸೇರಿ 40000 ರೂಪಾಯಿ ಇದೆ. ಇನ್ನೂ ಹತ್ತೇ ಸಾವಿರ ಬೇಕು. ಏತಕ್ಕೆ ಎಂದಿರ? ನಮ್ಮ ಹಳ್ಳಿ ಹತ್ತಿರ ಎರಡು ಎಕರೆ ಜಮೀನಿದೆ, ಅದನ್ನು ತೆಗದುಕೊಂಡು ಏನಾದರೂ ಮಾಡೋಣ ಅಂತ ನಮ್ಮ ಆಸೆ. ಆದರೆ ಈಗ ಯಾವ ಕೆಲಸಗಳೂ ಸಿಕ್ತಾಇಲ್ಲ. ಇನ್ನೂ 10000 ರೂಪಾಯಿಗಳು ಬೇಕು. ಏನು ಮಾಡೋಣ? ಆ ಘಳಿಗೆಯಲ್ಲಿ ವಿನೋದನಿಗೆ ಒಂದು ಕೆಟ್ಟ ಯೋಚನೆ ಬಂತು. ಯಾರಾದರೂ ಶ್ರೀಮಂತ ಮಕ್ಕಳನ್ನು ಕಿಡ್ನ್ಯಾಪ್ ಮಾಡಿದರೆ ಹಣ ಸಿಕ್ಕ ಬಹುದಲ್ವಾ ಅಂತ ಹೇಳಿದ. ನಾನೂ ಒಪ್ಪಿಕೊಂಡೆ .

ಕಿಡ್ನ್ಯಾಪ್ ಮಾಡಿದರೆ ಸಣ್ಣ ಊರುಗಳಲ್ಲಿ ಮಾಡಬೇಕು ಎಂದು ನಿರ್ಧರಿಸಿದೆವು. ದೊಡ್ಡ ಊರುಗಳಲ್ಲಾ ದರೆ ಪೊಲೀಸು, ಪತ್ತೇದಾರಿ ಕೆಲಸದವರು, ಸುದ್ದಿಯವರು ಇವರೆಲ್ಲಾ ಇರುತ್ತಾರೆ. ಸಿಕ್ಕಿ ಹಾಕಿ ಕೊಳ್ಳದಿರುವುದು ಕಷ್ಟ. ಚಿಕ್ಕ ಊರಿನಲ್ಲಿ ಸಂಪನ್ಮೂಲಗಳು ಕಡಿಮೆ. ಪೊಲೀಸರೂ ಹೆಚ್ಚು ಇರುವುದಿಲ್ಲ. ಹೌದು, ಪುಟ್ಟ ಊರುಗಳಲ್ಲಿ ನಿಜ ಶ್ರೀಮಂತರೂ ಬಹಳ ಕಡಿಮೆ ಇರುತ್ತಾರೆ., ಅವರ ಹತ್ತಿರ ಹೆಚ್ಚು ಹಣವೂ ಇರುವುದಲ್ಲ, ಆದರೆ ನಮಗೇನೂ ಬಹಳ ಹೆಚ್ಚು ಹಣದ ಆಗತ್ಯವಿರಲಿಲ್ಲ. ಬರೇ ಹತ್ತು ಸಾವಿರ ರೂಪಾಯಿ.

ಶಿಖರಪುರ ನಮ್ಮ ಪಕ್ಕದ ಊರು. ಅಲ್ಲಿಗೆ ಹೋಗಿ ಸ್ವಲ್ಪ ವಿಚಾರಣೆಗಳನ್ನು ನಡೆಸಿದೆವು. ಶ್ರೀನಿವಾಸಯ್ಯ ಎಂಬ ಶ್ರೀಮಂತರೊಬ್ಬರು ನಮ್ಮ ಗಮನಕ್ಕೆ ಬಂದರು. ಅವರಿಗೆ ಸುಮಾರು ಹೊಲಗದ್ದೆಗಳು ಇದ್ದವು, ಎರಡು ಅಂಗಡಿಗಳೂ ಇದ್ದವು. ಆದರೂ ಅವರೇನೂ ಟಾಟಾ ಬಿರ್ಲಾ ಅಲ್ಲ, ನಮ್ಮ ಅವಶ್ಯಕತೆಗೆ ಸಾಕಾಗಿತ್ತು . ಅವರ ಮನೆ ರಸ್ತೆಯಲ್ಲಿ ಹಲವಾರು ಬಾರಿ ಓಡಾಡಿದೆವು. ಅವರಿಗೆ ಒಬ್ಬ ಮಗ. ಹುಡುಗನ ಹೆಸರು ರಾಜಕುಮಾರ, ಪುಟ್ಟದಾಗಿ ಕುಮಾರ ಎಂದು ಕರೆಯುತ್ತಿದ್ದರು. ಸ್ವಲ್ಪ ತುಂಟನ ತರಹ ಇದ್ದ. ಒಂದು ಮಧ್ಯಾಹ್ನ ಹಿಡಿಯಲು ಹೋದೆವು. ರಸ್ತೆಯಲ್ಲಿ ನಿಂತು ಬೆಕ್ಕಿಗೆ ಕಲ್ಲು ಹೊಡೆಯುತ್ತಿದ್ದ. ಸುತ್ತಮುತ್ತ ಯಾರೂ ಇರಲಿಲ್ಲ. ಹೇಗೋ ಅವನನ್ನು ಕಾರಿನಲ್ಲಿ ಕೂರಿಸಿಕೊಂಡೆವು. ಅವನೂ ಹೊಡೆದಾಡುತ್ತ ನಮ್ಮ ಮುಖ್ಯ ಕೈ ಎಲ್ಲ ಪರಚಿ ಹಾಕಿಬಿಟ್ಟ. ಶಿಖರಪುರದಿಂದ ನಮ್ಮ ಊರಿಗೆ ವಾಪಸ್ಸು ಬಂದು ನಮ್ಮ ಮನೆಯ ಕೋಣೆಯಲ್ಲಿ ಕೂಡಿಹಾಕಿದೆವು.

ಹುಡುಗ ಕುಮಾರ್ ಸುಸ್ತಾಗಿದ್ದ ಅಂತ ಕಾಣುತ್ತೆ. ಮಲಗಿನಿಟ್ಟ. ಎದ್ದ ನಂತರ ಹಸಿವು ಎಂದ., ಮನೆಯಲ್ಲಿದ್ದ ಚಕ್ಕಲಿ ಕೊಟ್ಟೆವು. ಅದನ್ನು ತಿಂದ ಮತ್ತೆ ಹಸಿವುಎಂದ. ಪಕ್ಕದ ಹೊಟೇಲಿನಿಂದ ದೋಸೆ ತಂದು ಕೊಟ್ಟೆವು. ತಿಂದ ನಂತರ ಮತ್ತೆ ಹಸಿವು ಎಂದ. ಮನೆಯಲ್ಲಿದ್ದ ಅದು ಇದು ತಿಂಡಿ ಕೊಟ್ಟೆವು. ಎಲ್ಲ ತಿಂದ ನಂತರ ಮತ್ತೆ

ಹಸಿವು ಎಂದ. ನನಗೆ ಪಿಜ್ಜಾ ಬೇಕು ಎಂದ. ಆಗಲಿ ತರಿಸೋಣ ಎಂದೆವು. ಇಲ್ಲ ಈಗಲೇ ಬೇಕು, ಇಲ್ಲದಿದ್ದರೆ ಕಿರಚುಕೋತೀನಿ ಎಂದ. ನನಗೆ ಡಾಮಿನೋ ಪಿಜ್ಜಾನೇ ಬೇಕು.ಎಂದ. ಅದು ಬಹಳ ದೂರವಾಯಿತಲ್ಲ ಎಂದೆವು. ಅದೆಲ್ಲ ನನಗೆ ಗೊತ್ತಿಲ್ಲ. ಆದಿಲ್ಲದಿದ್ದರೆ ನಾನು. ಕಿರಚಿಕೋತೀನಿ ಎಂದ. ಶ್ರೀ, ವಿನೋದನನ್ನ ನೋಡಿಕೊ ಎಂದು ನಾನು ಆಟೋ ಮಾಡಿಕೊಂಡು ಪಿಜ್ಜಾ ಅಂಗಡಿಗೆ ಹೋಗಿ ತಂದುಕೊಟ್ಟೆ. ಸದ್ಯ ಮತ್ತೆ ಹಸಿವು ಎಂದು ಹೇಳಲಿಲ್ಲ. ಟಿವಿ ನೋಡಬೇಕು ಎಂದ. ನಮ್ಮ ಮನೆಯ ಟಿವಿ ಮುಂದೆ ಕೂರಿಸಿದೆವು. ಬಹಳ ಚಿಕ್ಕದು ಎಂದ. ಅದಲ್ಲದೆ ಕಲರ್ ಕೂಡ ಇಲ್ಲ ಎಂದು ಸೇರಿಸಿದ. ಈವತ್ತು ಆಯಿತು, ಆದರೆ ನಾಳೆ ದೊಡ್ಡ ಕಲರ್ ಟಿವಿ ತಂದಿಡಿ ಎಂದ. ನಮ್ಮ ಹತ್ತಿರ ಅಷ್ಟೆಲ್ಲಾ ದುಡ್ಡು ಇಲ್ಲ ಎಂದೆವು. ಬಾಡಿಗೆಗೆ ಸಿಗುತ್ತೆ ಎಂದು ಸೂಚನೆ ಕೊಟ್ಟ. ಮುಂದಿನ ದಿನವೂ ಅವನು ಒಂದಲ್ಲ ಒಂದು ತೊಂದರೆಗಳನ್ನು ಕೊಡುತ್ತಲೇ ಹೋದ. ಅವನಿಗೆ ಸರಿ ಬರದಿದ್ದರೆ ಕಿರಚಿಕೋತೀನಿ ಎನ್ನುವ ಮಂತ್ರ! ಬೆಳಿಗ್ಗೆ ತಿಂಡಿ ಇಷ್ಟವಾಗಲಿಲ್ಲವಂತೆ. ಮಧ್ಯಾಹ್ನ ಹನ್ನೆರಡಕ್ಕೆ ಕ್ರಿಕೆಟ್ ಆಡಬೇಕು ಎಂದು ಗಲಾಟೆಮಾಡಿದ. ನಾವು ಅಂಗಡಿಗೆ ಹೋಗಿ ಬಾಲು, ಬ್ಯಾಟು ತಂದೆವು. ನಾನು ಬ್ಯಾಟ್ ಮಾಡ್ತೀನಿ, ನೀವು ಬೋಲ್ ಮಾಡಿ ಎಂದು ನಮ್ಮಿಂದ ಬೋಲ್ ಮಾಡಿಸಿಕೊಂಡ. ದೂರಕ್ಕೆ ಚೆಂಡನ್ನು ಹೊಡೆದು ನಮ್ಮನ್ನು ಓಡಿಸಿ ಸುಸ್ತು ಮಾಡಿಹಾಕಿಬಿಟ್ಟ. ಆಮೇಲೆ ಟಿವಿ ಬಾಡಿಗೆ ತರಲು ಜ್ಞಾಪಿಸಿದ. ಒಂದು ದಿನಕ್ಕೇ ಸಾಕಾಗಿ ಹೋಯಿತು. ತಪ್ಪು ಮಾಡಿದೆವು ಎಂದು ಅನಿಸಿತು.

ಅವನ ಮನೆಯಿಂದ ಏನಾದರೂ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಿದ್ದೆವು. ಶ್ರೀನಿವಾಸಯಯ್ಯನವರ ಕಡೇಯವರೋ, ಶಿಖರಪುರ ದ ಕುತೂಹಲಿ ಯುವಕರೋ ಯಾರೂ ಈ ಕಡೆ ಬರಲಿಲ್ಲ. ಪೊಲೀಸೂ ಕಾಣಿಸಕೊಳ್ಳಲೇ ಇಲ್ಲ ! ಅವರ ಮನೆಯ ಕಡೆ ಹೋಗಿನೋಡಿದೆವು; ಯಾರೂ ಅಳುತ್ತಿದ್ದು ಕಾಣಿಸಲಿಲ್ಲ. ಈ ನಿರ್ಲಕ್ಷ್ಯವೇತಕ್ಕೆ ? ಅಥವಾ ಈ ಘಟನೆಯಿಂದ ಆ ಪುಟ್ಟ ಊರು ತಲ್ಲಣಗೊಂಡು ಏನೂಮಾಡಲಾಗದ ಸ್ತಬ್ಧತೆ ಆವರಿಸಿಕೊಂಡಿದೆಯೋ? ಬಾಲಕ ಕಳೆದುಹೋಗಿದ್ದಾನೆ ಎನ್ನುವ ತರಹ ಸುದ್ದಿಯೋ ಅಥವಾ ಜಾಹೀರಾತು ಏನಾದರೂ ಇದೆಯೇ ಎಂದು ದಿನ ಪತ್ರಿಕೆಗಳಲ್ಲಿ ಹುಡುಕಿದೆವು, ಏನೂ ಕಾಣಿಸಲಿಲ್ಲ. ಇಲ್ಲೋ, ಕುಮಾರ ಮೂರು ದಿನಗಳಲ್ಲಿ ನಮ್ಮನ್ನು ಸಾಕುಮಾಡಿ ಬಿಟ್ಟಿದ್ದಾನೆ. ಹಣವೂ ಸುಮಾರು ಖರ್ಚಾಗಿದೆ.

ಇನ್ನು ಕಾಯಲಾರದೆ ನಾವು ಶ್ರೀನಿವಾಸಯ್ಯನವರಿಗೆ ಒಂದು ಪತ್ರ ಕಳಿಸಿದೆವು. "ನಿಮ್ಮ ಹುಡುಗನನ್ನು ನಾವು ಶಿಖರಪುರದಿಂದ ದೂರದ ಒಂದು ಸ್ಥಳದಲ್ಲಿ ಮರೆಮಾಡಿಟ್ಟುಕೊಂಡಿದ್ದೇವೆ. ಅದು ಎಲ್ಲಿ ಎಂದೆಲ್ಲಾ ಹುಡುಕಲು ಹೋಗಬೇಡಿ, ಕುಮಾರನಿಗೆ ಒಳ್ಳೆಯ ದಾಗುವುದಿಲ್ಲ. ನಿಮ್ಮ ಮಗ ಕುಮಾರನನ್ನು ನಿಮಗೆ ವಾಪಸ್ಸು ಕೊಡಬೇಕೆಂದು ನಿರ್ಧರಿಸಿದ್ದೇವೆ. ಅದಕ್ಕಾಗಿ ನಿಮಗೆ ಬೀಳುವ ಖರ್ಚು 15000 ರೂಪಾಯಿಗಳು (ನಾವು ಮೊದಲು 10000 ಸಾವಿರ ಸಾಕೆಂದು ಲೆಕ್ಕ ಹಾಕಿದ್ದೆವು. ಆದರೆ ನಿಮ್ಮ ಮಗನಿಂದಾಗಿ ನಮಗೆ ಆಗಲೇ 5000 ರೂಪಾಯಿಗಳು ವ್ಯಥಾ ಖರ್ಚಾಗಿದೆ. ನಾವು ಈ ವಿಷಯದಲ್ಲಿ ತಲೆ ಹಾಕ ಬಾರದು. ಆದರೂ ಹೇಳಲೇ ಬೇಕಾಗುತ್ತದೆ. ನಿಮ್ಮ ಮಗನಿಗೆ ಸ್ವಲ್ಪ ಸಾಧಾರಣ ಜೀವನ ಕಲಿಸಿ. ಅಷ್ಟು ಪಿಜ್ಜಾ ತಿನ್ನುವುದು ಒಳ್ಳೆಯದಲ್ಲ. ಏನೇನೋ ರಾಸಾಯನಿಕ ವಸ್ತುಗಳನ್ನು ಸೇರಿಸಿರುತ್ತಾರೆ. ದೇಶಕ್ಕೂ ಒಳ್ಳೇದಾಗುತ್ತದೆ. ಈ ಅಭ್ಯಾಸಗಳು ಪರ ದೇಶಗಳ ವ್ಯಾಮೋಹವನ್ನು ಮೊದಲಿಂದಲೇ ಕಲಿಸಿಬಿಡುತ್ತವೆ) ಬರೇ 10 ರೂಪಾಯಿ ನೋಟುಗಳ ಈ ಹಣವನ್ನು ಇಂದು ರಾತ್ರಿಯೇ ನಮಗೆ ತಲುಪಿಸ ಬೇಕು. ಇಂದು ರಾತ್ರಿ ಹತ್ತು ಗಂಟೆಗೆ ಊರ ಹೊರಗಿನ ಮಾರುತಿಯ ಗುಡಿಯಲ್ಲಿ ಚಪ್ಪಲಿ ಬಿಡುವ ಜಾಗದ ಎದಿರು




ಇರುವ ಕಟ್ಟೆಯ ಮೇಲೆ ಹಣವನ್ನು ಒಂದು ತೆಳು ಬಿಳಿ ಬಟ್ಟೆಯಲ್ಲಿ ಕಟ್ಟಿ ಇಡಿ. ಅದು ಹಾರಿಹೋಗದಂತೆ ಅದರ ಮೇಲೆ ಒಂದುಕಲ್ಲು ಇಡಿ. ನೀವು ಪೋಲೀಸರನ್ನು ಸಂಪರ್ಕಿಸುವುದು ಅಥವಾ ಇನ್ನೂ ಯಾವುದೇ ವಿಶ್ವಾಸ ಘಾತುಕತನವನ್ನು ಪ್ರಯತ್ನಿಸಿದರೆ ನಿಮ್ಮ ಹುಡುಗನನ್ನು ಮತ್ತೆ ನೋಡುವುದಿಲ್ಲ, ನೀವು ತಿಳಿದವರು ಮತ್ತು ನಿಮಗೆ ಹೆಚ್ಚು ಹೇಳಬೇಕಿಲ ಎಂದು ಕೊಂಡಿದ್ದೇವೆ "ಈ ಕಾಗದವನ್ನು ಹೇಗೋ ಶ್ರೀನಿವಾಸಯ್ಯನವರಿಗೆ ತಲುಪಿಸಿದೆವು. ಶ್ರೀನಿವಾಸಯ್ಯನವರ ಉತ್ತರ ತಕ್ಷಣವೇ ಬಂದಿತ್ತು: ನಮ್ಮ ಮಗ ನಿಮ್ಮ ಜೊತೆ ಆರೋಗ್ಯದಿಂದ ಇದ್ದಾನೆ ಎಂದು ತಿಳಿದು ಸಮಾಧಾನವಾಯಿತು. ಅವರ ಅಮ್ಮನೂ ಹಲವಾರು ದೇವರಿಗೆ ಬೇಡಿಕೊಂಡಿದ್ದು ಅವಳಿಗೂ ಸ್ವಲ್ಪ ಹಾಯೆನಿಸಿದೆ. ಈಗ ನೀವು ಬರೆದಿರುವ ವಿಷಯಕ್ಕೆ ಬರೋಣ. ನಿಮಗೆ ಎರಡು ಆಯ್ಕೆಗಳನ್ನು ಕೊಡುತ್ತೇವೆ. (1) ನಮ್ಮ ಕುಮಾರ ಹಣದ ವಾತಾವರಣದಲ್ಲಿ ಬೆಳೆದು ಬಿಟ್ಟಿದ್ದಾನೆ. ಹೊರ ಪ್ರಪಂಚದ ಅರಿವು ಬಹಳ ಕಡಿಮೆ. ಆದ್ದರಿಂದ ನಿಮ್ಮ ಜೊತೆಯೇ ಇದ್ದರೆ ಪ್ರಪಂಚ ಜ್ಞಾನ ಬರಬಹುದು. ಪಿಜ್ಜಾ ಅಭ್ಯಾಸವನ್ನು ನೀವೇ ಬಿಡಿಸಬಹುದು. ನೀವು ಶಿಸ್ತಿ ನಿಂದ ಇರಬಹುದು, ಮನೆಯಲ್ಲಿ ಅದು ಕಷ್ಟ ಆದ್ದರಿಂದ ನೀವೇ ಅವನನ್ನು ಇನ್ನೂ 5 ವರ್ಷ ಇಟ್ಟುಕೊಂಡು ಬೆಳೆಸಿ. ಆಗ ಈಗ ಅಲ್ಪ ಸ್ವಲ್ಪ ಧನ ಸಹಾಯ ಮಾಡುತ್ತೇವೆ. ಇಲ್ಲ ಅಂದರೆ (2) ಈ ಸಂಜೆಯೇ ಅವನನ್ನು ನಮ್ಮ ಮನೆಗೆ ತಂದುಬಿಡಿ. ಜೊತೆಗೆ ಅವನ ಜೇಬಿನಲ್ಲಿ 5000 ರೂಪಾಯಿ ಇಟ್ಟು ಕಳಿಸಿಬಿಡಿ. ಹಾಗೇ ಇಲ್ಲಿ ಬರುವಾಗ ಹುಷಾರು. ಅವನನ್ನು ವಾಪಸ್ಸು ತಂದವರು ಯಾರು ಎಂದು ಬೀದಿಯ ಜನ ನಿಮ್ಮನ್ನು ಗುರುತಿಸಿದರೆ ನಿಮಗೆ ಪೆಟ್ಟಾಗಬಹುದು.

ನಮಗೆ ಬೇರೆ ಯಾವ ದಾರಿಯೂ ಇರಲಿಲ್ಲ. ಕುಮಾರನ ಜೊತೆ ಇನ್ನೂ ಒಂದು ದಿನ ಕಳೆಯುವುದು ಕೂಡ ಸಾಧ್ಯವಿರಲಿಲ್ಲ.ನಿಮ್ಮ ಮನೇಗೆ ಹೋಗೋಣ ಬಾ ಎಂದೆವು. ಇಲ್ಲ ಎಂದು ಅಲ್ಲಿ ಇಲ್ಲಿ ಓಡಲು ಶುರುಮಾಡಿದ. ಅವನನ್ನು ಹಿಡಿಯಲು ಕಷ್ಟವಾಯಿತು. ಕಡೆಗೆ ಹೇಗೋ ಶ್ರೀನಿವಾಸಯ್ಯನವರ ಮನೆಗೆ ಕರೆದುಕೊಂಡು ಹೋದೆವು. ಆದರೆ ಕುಮಾರ ಅವನ ಮನೆಯ ಒಳಗೆ ಹೋಗಲು ಸಿದ್ಧನಾಗಿರಲಿಲ್ಲ. ರೂಢಿಯಂತೆ ನಮ್ಮ ಮುಖ, ಕೈ ಎಲ್ಲಾ ಪರಚಿ ಹಾಕಿ ಬಿಟ್ಟ... ಕಡೆಗೂ ಮನೆಯ ಆಳುಕಾಳು ಗಳು ಅವನನ್ನು ಹಿಡಿದುಕೊಂಡು ಒಳಗೆ ಹೋದರು. ಇದರ ಮಧ್ಯೆ ಪೊಲೀಸರೂ ಬಂದರು. ಶ್ರೀನಿವಾಸಯಯ್ಯನವರಿಗೆ ನಮ್ಮ ಕಥೆ ಹೇಳಿಕೊಂಡೆವು. 'ಒಂದು ವರ್ಷ ಜೈಲಿನಲ್ಲಿ ಕಳೆದುಬನ್ನಿ. ಹೊರಬಂದಮೇಲೆ ನಾನು ಏನಾದರೂ ಕೆಲಸ ಕೊಡಿಸುತ್ತೀನಿ' ಎಂದು ಅವರು ಹೇಳಿದರು. (ಖ್ಯಾತ ಕಥೆಗಾರ ಓ ಹೆನ್ರಿ ಅವರ 'ದಿ ರಾನ್ಸಮ್ ಆಫ್ ರೆಡ್ ಚೀಫ್' (1910) ಕಥೆಯನ್ನು ಆಧರಿಸಿ) ■

# ಚಪ್ಪರಿಸಿ ತಿನ್ನಬಹುದಾದ ಐಸ್ ಹಲ್ವಾ

**ಕೆ.ಎಸ್.ಸೋಮೇಶ್ವರ**

ಇದೊಂದು ವಿಶಿಷ್ಟ ರೀತಿಯ ಸಿಹಿ ತಿನಿಸಾಗಿದೆ. ಇದು ನನಗೆ ಬಹಳ ಚಿಕ್ಕ ವಯಸ್ಸಿನಿಂದಲೇ ನಾಲಿಗೆಯನ್ನು ತಣಿಸುತ್ತಿದೆ. ಹಾಗೆಂದು ನಾನೇ ಆಗಲಿ ನನ್ನ ಮನೆಯವರಾಗಲೀ ಯಾರೂ ಈ ಸಿಹಿ ತಿಂಡಿಯನ್ನು ತಯಾರಿಸುವುದಿಲ್ಲ. ನನ್ನ ಬಗ್ಗೆ ಹೇಳಬೇಕೆಂದರೆ ಈ ಸಿಹಿ ತಿಂಡಿಗಳ ಚಪ್ಪರಿಕೆಗೆ ಒಂದು ಉದ್ದನೆಯ ಇತಿಹಾಸವೇ ಇದೆ. ಕಾಂತಿ ಸ್ವೀಟ್ಸ್, ಆರ್ಯ ಭವನ ಸಿಹಿ, ಕರಾಚಿ ಸ್ವೀಟ್ಸ್ ಕೆ.ಸಿ ದಾಸ್ ರವರ ಸೋಹನ್ ಪಪ್ಪಡಿ ಇವೆಲ್ಲದರೆ ಜೊತೆಗೆ ಮನೆಯಲ್ಲೇ ರೆಡಿಯಾಗುವ ಗಸಗಸೆ ಪಾಯಸ, ಸಜ್ಜಿಗೆ ಯಾವುದೇ ಇರಲಿ ಎಲ್ಲವೂ ನನಗೆ ಸಿಹಿ ಸಿಹಿಯೇ.

ಈ ಐಸ್ ಹಲ್ವಾದ ಚರಿತ್ರೆಯನ್ನು ನನ್ನ ಜೀವನಕ್ಕೆ ತಳುಕು ಹಾಕಿಕೊಂಡರೆ ಅದು ದೀಪಾವಳಿ ಸಮಯದಲ್ಲಿ ಮಾತ್ರ ತಣ್ಣಗೆ ನಮ್ಮ ಮನೆಗೆ ಬಂದಿರುತ್ತಿತ್ತು. ಇದಕ್ಕೆ ಕಾರಣ ನಮ್ಮ ತಂದೆಯವರು ಬಸವನಗುಡಿ ಸಹಕಾರ ಸಂಘದಲ್ಲಿ ಒಬ್ಬ ಹಿರಿಯ ಅಧಿಕಾರಿಯಾಗಿ ಕೆಲಸಮಾಡುತ್ತಿದ್ದರು. ಆ ಸೊಸೈಟಿಗೆ ಹಲವು ರೀತಿಯ ಸಾಮಾನು ಸರಂಜಾಮುಗಳನ್ನು ವಿತರಿಸುವ ಸಗಟು ಮಾರಾಟಗಾರರು ಸಿಟಿ ಮಾರ್ಕೆಟ್ ಸುತ್ತಲೂ ಇದ್ದರು. ಅವರೆಲ್ಲ ಮಾರವಾಡಿ ಗುಂಪಿನವರು. ಅವರಿಗೆ ದೀಪಾವಳಿ ಒಂದು ವಿಶೇಷ ಹಬ್ಬವಾಗಿದ್ದು ಆ ಸಮಯದಲ್ಲಿ ಅವರು ಮಾಡುವ ದೀಪಾವಳಿ ಅಮಾವಾಸ್ಯೆ ದಿನದ ಲಕ್ಷ್ಮಿ ಪೂಜೆಗೆ ನಮ್ಮ ತಂದೆ ಆಹ್ವಾನಿತರು. ಆ ದಿನ ಸಂಜೆಯ ವೇಳೆ ಅವರು ನನ್ನನ್ನೂ ಬಹಳ ವರ್ಷಗಳ ಕಾಲ ಕರೆದೊಯ್ಯುತ್ತಿದ್ದರು. ಚಿಕ್ಕಪೇಟೆ ಸುತ್ತಮುತ್ತಲಿನ ಸುಮಾರು ಐದಾರು ಅಂಗಡಿಗಳಿಗೆ ನಮ್ಮ ಭೇಟಿ ಇರುತ್ತಿತ್ತು. ಪೂಜಾ ಕಾರ್ಯ ಮುಗಿದ ನಂತರದಲ್ಲಿ ನಾವುಗಳೇ ಅಲ್ಲದೇ ಆ ವ್ಯಾಪಾರಸ್ಥರ ಇನ್ನೂ ಅನೇಕ ಸ್ನೇಹಿತರಿಗೆ ವಿಧ ವಿಧವಾದ ಸಿಹಿ ತಿಂಡಿಗಳ ಡಬ್ಬಗಳು ದೊರೆಯುತ್ತಿದ್ದವು. ಸಾಮಾನ್ಯ ಲಡ್ಡುವಿನಿಂದ ಮೊದಲಾಗಿ ವಿವಿಧ ಬಗೆಯ ಸಿಹಿ ತಿಂಡಿಗಳು ನಮಗೆ ಮನೆಯಲ್ಲಿ ಸಿಹಿ ದೀಪಾವಳಿ ತರುತ್ತಿದ್ದವು.

ಇಷ್ಟೆಲ್ಲ ಸಿಹಿ ಮೊಗ್ಗೆಯ ನಡುವೆ ನಾವುಗಳು ಹುಡುಕುತ್ತಿದ್ದದು ಒಂದು ವಿಶೇಷ ರೀತಿಯ ಸಿಹಿ ತಿಂಡಿಯ ಪೆಟ್ಟಿಗೆಗಾಗಿ. ಅದೇ ಐಸ್ ಹಲ್ವಾ. ಅದಕ್ಕೆ ಆ ಹೆಸರು ಯಾಕೆ ಇಟ್ಟಿದ್ದಾರೆ ಎಂಬುದು ಈಗಲೂ ಸಸ್ಪೆನ್ಸ್. ನನಗೆ ತಿಳಿದಿರುವಂತೆ ಅದರ ತಯಾರಕರು ಇಡೀ ದೇಶದಲ್ಲಿ ಒಬ್ಬರೇ ಅವರ ಸಂಸ್ಥೆಯ ಹೆಸರು ಮೋಹನಲಾಲ್ ಎಸ್. ಮಿಠಾಯಿವಾಲ, ಮುಂಬೈ. ಆಗ ಅದು ಹೇಗೆ ತಯಾರಾಗುತ್ತಿತ್ತು ಎಂಬ ವಿಷಯ ನಮಗೆ ಬೇಕಿರಲಿಲ್ಲ. ಅದೊಂದು ರೀತಿ ಅತಿ ತೆಳುವಾದ ಚಚ್ಚೌಕದ ಚಪಾತಿಯಂತಿರುತ್ತಿತ್ತು. ಅದರ ಅಳತೆ ಸುಮಾರು 6X6 ಅಂಗುಲ ಇರುತ್ತಿತ್ತು. ಒಂದು ಸಣ್ಣ ಪೆಟ್ಟಿಗೆಯಲ್ಲಿ ಸುಮಾರು ಹತ್ತು ಅಂತಹ ತೆಳು ಐಸ್ ಹಲ್ವಾಗಳು ಒಂದರ ಮೇಲೊಂದು ಜೋಡಿಸಿರುತ್ತಿದ್ದವು. ಅವು ಒಂದಕ್ಕೊಂದು ಅಂಟದಂತೆ ಅವುಗಳ ಮಧ್ಯೆ ತೆಳುವಾದ ತುಪ್ಪದ ಹಾಳೆ (ಬಟರ್ ಪೇಪರ್) ಹಾಕಿರುತ್ತಿದ್ದರು. ಇದು ಘಮ ಘಮಿಸುವ ತುಪ್ಪದ ವಾಸನೆಯ ಸಾದಾ ಐಸ್ ಹಲ್ವಾದಿಂದ ಮೊದಲಾಗಿ, ಕೇಸರಿ ಎಳೆ ಹಾಕಿದ ಮತ್ತು ಕೆಲಬಗೆಯ ಒಣ ಹಣ್ಣುಗಳನ್ನು ಹಾಕಿದವೂ ದೊರೆಯುತ್ತಿದ್ದವು. ಆ ತಯಾರಕರ ಹೆಸರಿನಲ್ಲೇ ಇರುವ ಮಿಠಾಯಿ ನಮ್ಮಗಳ ರಸನಕ್ಕೆ ಹೆಚ್ಚಿನ ಸಿಹಿಯ ಲೇಪನ ಮಾಡುತ್ತಿದ್ದವು. ನಾನು ತಿಳಿದಂತೆ ಇದು ಸಾಮಾನ್ಯವಾಗಿ ತಯಾರಾಗುವುದು ಶುದ್ಧ ತುಪ್ಪ, ಸಕ್ಕರೆ ಮತ್ತು ಜೋಳದ ಪಿಷ್ಟ (ಸ್ಟಾರ್ಚ್) ಮತ್ತಿತರ ವ್ಯಂಜನಗಳನ್ನು ಬಳಸಿ ಹದವಾಗಿ ತಯಾರಾಗುತ್ತದೆ.

ಇದರ ರುಚಿ ಹೊರತಾಗಿ ಇದರ ತೆಳುವಾದ ಹಾಳೆ ನಮಗೆ ಹೆಚ್ಚಿನ ಆನಂದ ನೀಡುತ್ತಿದ್ದವು. ನನಗೆ ಇದು ಸುಮಾರು ಅರುವತ್ತರ ದಶಕದ ಮೊದಲಲ್ಲೇ ಜೊತೆಯಾಗಿ ಸರಿ ಸುಮಾರು ಎಪ್ಪತ್ತರ ದಶಕದ ಕೊನೆಯವರೆಗೂ ನಿನಗೆ ನಾನಾ ನನಗೆ ನೀನಾ ಎಂಬಂತಿರುತ್ತಿತ್ತು. ನಂತರದ ದಿನಗಳಲ್ಲಿ ಇದು ನಮ್ಮ ಬೆಂಗಳೂರಿನಲ್ಲೇ ಸಿಗಬಹುದೇ ಎಂದುಕೊಂಡಾಗ ನನ್ನ ಸಹೋದ್ಯೋಗಿ ಜನಕರಾಜ್ ಎಂಬುವರು ಗಾಂಧಿ ನಗರದಲ್ಲಿದ್ದ ಸಂಗಂ ಸ್ವೀಟ್ಸ್ ಹೆಸರು ಹೇಳಿದರು. ಅಲ್ಲಿ ಮೂಲ ಐಸ್ ಹಲ್ವಾದ ಹತ್ತಿರದ ರುಚಿಯ ಸಿಹಿ ದೊರೆಯುತ್ತಿತ್ತು.

ಇತ್ತೀಚೆಗೆ ಕೆಲವು ತಿಂಗಳ ಹಿಂದೆ ಮುಂಬೈನ ಮೋಹನಲಾಲ ಎಸ್. ಮಿಠಾಯಿವಾಲ ರವರ ಸಂಸ್ಥೆಗೇ ಸಂಪರ್ಕಿಸಿ ಒಂದೆರಡು ವಿಧದ ಐಸ್ ಹಲ್ವಾ ತರಿಸಿ ನನ್ನ ಪ್ರೀತಿ ಪಾತ್ರರಿಗೆ ಹಂಚಿದೆ. ಅದರ ಜೊತೆಯಲ್ಲಿ ಒಂದೆರಡು ಬಾರಿ ಸಂಗಂ ಸ್ವೀಟ್ಸ್‌ನಿಂದಲೂ ದೊರೆಯಿತು. ಆದರೆ. ಇವರು ಇತ್ತೀಚೆಗೆ ಅದರ ತಯಾರಿಕೆಯನ್ನು ನಿಲ್ಲಿಸಿದ್ದಾರೆ.

ಹೀಗೆ ನನ್ನ ಅಭಿಪ್ರಾಯದಲ್ಲಿ ಐಸ್ ಹಲ್ವಾ ಒಂದು ರೀತಿಯಲ್ಲಿ ತಣ್ಣಗೆ ನಮಗಳ ರಸನವನ್ನು ತಣಿಸುತ್ತದೆ. ಆದ್ದರಿಂದ ಇದನ್ನು ಸಿಹಿ ತಿಂಡಿಗಳ ರಾಜ ಅಲ್ಲ ಚಕ್ರವರ್ತಿ ಎನ್ನುತ್ತೇನೆ. ■

**"ಗ್ರಾಮ – ನಗರದ ಜುಗಲ್ಬಂದಿ....! "**

ವಿಳ್ಳೇದೆಲೆ, ಅಡಕೆ, ಸುಣ್ಣ ಹಾಕಿಕೊಂಡ್ರೆ.... ಅದು ಗ್ರಾಮ
ಪಾನ್ ಬೀಡಾ ಹಾಕಿಕೊಂಡ್ರೆ...... ಅದು ನಗರ

ಅರಿಶಿನದ ನೀರನ್ನು ಎರಚಿ ಆಟವಾಡಿದ್ರೆ.... ಅದು ಗ್ರಾಮ
ರಾಸಾಯನಿಕ ಬಣ್ಣದ ನೀರು ಎರಚಾಡಿದ್ರೆ.... ಅದು ನಗರ

ಕೈಯಲ್ಲಿ ಬಟ್ಟೆ ಚೀಲ ಇಟ್ಟುಕೊಂಡಿದ್ರೆ..... ಅದು ಗ್ರಾಮ
ಪ್ಲಾಸ್ಟಿಕ್ ಚೀಲ ಇಟ್ಟುಕೊಂಡು ತಿರುಗಾಡಿದ್ರೆ..... ಅದು ನಗರ

ಗಂಡ, ಹೆಂಡತಿಯನ್ನು ತನ್ನ ಸ್ನೇಹಿತರಿಗೆ ಪರಿಚಯಿಸಿದ್ರೆ... ಅದು ಗ್ರಾಮ
ಹೆಂಡತಿ, ತನ್ನ ಗಂಡನನ್ನು ತನ್ನ ಸ್ನೇಹಿತರಿಗೆ ಪರಿಚಯಿಸಿದ್ರೆ... ಅದು ನಗರ

ಹರಿದು ಹೋಗಿದ್ರೂ, ಶುಭ್ರವಾದ ಬಟ್ಟೆ ಹಾಕ್ಕೊಂಡ್ರೆ.... ಅದು ಗ್ರಾಮ
ಹರಿದ ಬಟ್ಟೆಯನ್ನೇ ಕೊಂಡ್ಕೊಂಡು ಹಾಕ್ಕೊಂಡ್ರೆ....... ಅದು ನಗರ

ಪ್ರಯಾಣಕ್ಕಾಗಿ ಸೈಕಲ್ ಬಳಸಿದ್ರೆ .......ಅದು ಗ್ರಾಮ
ದೇಹ ದಂಡಿಸಕ್ಕೆ ಸೈಕಲ್ ಬಳಸಿದರೆ..... ಅದು ನಗರ

ಪಟ್ಟಾಪಟ್ಟಿ ನಿಕ್ಕರ್ ಹಾಕಿಕೊಂಡಿದ್ದರೆ .....ಅದು ಗ್ರಾಮ
ಮುಕ್ಕಾಲು ಪ್ಯಾಂಟ್, ಬರ್ಮುಡಾ ಹಾಕ್ಕೊಂಡ್ರೆ.... ಅದು ನಗರ

**– ವಿ. ವಿಜಯೇಂದ್ರ ರಾವ್**

# ಈಗಿನ್ನೂ ನೆನ್ನೆ

ಕುಮುದಾ ಪುರುಷೋತ್ತಮ್

ಗಾಢವಾದ ನಿದ್ರೆಯಿಂದ ಹೊರಬರುತ್ತಾ ಕಣ್ತೆರೆದೆ. ಎಲ್ಲವೂ ಅಯೋಮಯವಾಗಿತ್ತು. ಮಹಾನ್ ಮಹಾನ್ ಸಂತರನ್ನೂ ಕಾಡಿದ ಪ್ರಶ್ನೆ ಎದುರಾಯ್ತು. ನಾನ್ಯಾರು? ಎಲ್ಲಿದ್ದೇನೆ? ಎಲ್ಲಾ ಒಂದರೆಕ್ಷಣವಷ್ಟೆ. ಗುಂಗಿನಿಂದ ಹೊರಬರುತ್ತಿದ್ದಂತೆ ಎಲ್ಲಾ ನಿಚ್ಚಳವಾಗಿಬಿಡ್ತು .ಕೋಣೆಯಲ್ಲಿ ಕತ್ತಲು ಕವಿದಿತ್ತು. ವಾಟ್ಸಾಪ್, ಫೇಸ್ಬುಕ್ ಯೂನಿವರ್ಸಿಟಿಯ ಪದವೀಧರೆ ನಾನು. ಅಲ್ಲಿ ನಾನು ಕಲಿತದ್ದೆಲ್ಲಾ ಚಾಚೂತಪ್ಪದೆ ಪಾಲಿಸುವ ದೀಕ್ಷೆ ತೆಗೆದುಕೊಂಡವಳು. ಸುಖನಿದ್ರೆಗೆ ಏಕಮೇವ ಸೂತ್ರ ಮಲಗುವ ಕೋಣೆಯನ್ನು ಕತ್ತಲ ಕೂಪವನ್ನಾಗಿರಿಸುವುದು ಎಂದು ಕಲಿತಿದ್ದವಳು ಎಲ್ಲಾ ಕಿಟಕಿಗಳಿಗೆ ಧಪ್ಪ ಪರದೆಯನ್ನು ಎಳೆದು ಕತ್ತಲನ್ನಾಗಿಸಿದ್ದೆ. ದಿಂಬಿನಡಿ ವಿಶ್ರಮಿಸುತ್ತಿದ್ದ ಟಾರ್ಚಿನ ಬೆಳಕು ಗೋಡೆಗಡಿಯಾರದ ಮೇಲೆ ನಾಟ್ಯವಾಡಿ ಐದು ಗಂಟೆ ಎಂದು ಸೂಚಿಸಿತು. ಇಷ್ಟು ಬೇಗೆದ್ದು ಏನು ಮಾಡಲಿ? ಯಜಮಾನರು ಉದ್ಯೋಗ ನಿಮಿತ್ತ ಮುಂಬೈಗೆ ಹಾರಿದ್ದು ನೆನಪಿಗೆ ಬಂತು. ಮತ್ತೆ ಮುಸುಕು ಬೀರಿದೆ.

ಮತ್ತೆ ಕಣ್ತೆರೆದಾಗ ಗಡಿಯಾರದ ಸಣ್ಣ ಮುಳ್ಳು ಸಂಖ್ಯೆ ಏಳರಮೇಲೆ ಪಟ್ಟಾಭಿಷಿಕ್ತವಾಗಿತ್ತು. ಕೋಣೆಮಾತ್ರ ಇನ್ನೂ ಕತ್ತಲಲ್ಲೇ ಮುಳುಗಿದೆ! ಮೇಲೆದ್ದು ಘರದೆ ಸರಿಸಿ ಹೊರಗಿಣಿಕಿದೆ. ಎಲ್ಲೆಲ್ಲೂ ಕತ್ತಲೆ.ಇಂದು ಸೂರ್ಯನಾರಾಯಣನಿಗೇನಾಗಿದೆ? ಗ್ರಹಣವೇ? ಅಥವಾ ಏಳುಗಂಟೆಯಾದರೂ ಡ್ಯೂಟಿಗೆ ರಜಾಹಾಕಿ ಮಲಗಿಬಿಟ್ಟಿದ್ದಾನಾ? ಸೂರ್ಯ ರಜಾಹಾಕುವ ಸಂದರ್ಭಯಾವ ಪುರಾಣೇತಿಹಾಸದಲ್ಲೂ ಇದುವರೆಗೂ ದಾಖಲಾಗಿಲ್ಲ. ಸೂರ್ಯನ ಶಾಖ ಬೆಳಕುಗಳಿಲ್ಲದಿದ್ದರೆ ಭೂಮಾತೆಯ ಜೀವಜಂತುಗಳ ಗತಿ? ಮಳೆಬೆಳೆ ಎಲ್ಲಾ ಬಂದಾಗಿ ಜೀವಕೋಟಿಯ ಅಂತ್ಯದ ಕ್ಷಣಗಣನೆಯಷ್ಟೆ. ಇಂತಹ ಆಲೋಚನೆಯೇ ಮೈನಡುಗಿಸುವಂತಿತ್ತು. ಮಾನವನ ದುರಾಸೆ, ಬೇಜವಾಬ್ದಾರಿಗಳಿಂದ ಜಾಗತಿಕ ಹವಾಮಾನದ ಮೇಲಾದ ವಿಪರೀತದ ಪರಿಣಮದ ಬಗ್ಗೆ ಓದಿದ್ದೆ ಕೇಳಿದ್ದೆ. ಆದರೆ ಸೂರ್ಯ ಮೇಲೇಳದ ಮುಷ್ಕರದಬಗ್ಗೆ ಯಾವ ಖಗೋಳ ವಿಜ್ಞಾನಿಯೂ ತಿಳಿಸಿರಲಿಲ್ಲ. ಹೀಗಿರುವಾಗ ಇಂದು ಸೂರ್ಯನಿಗೇನಾಗಿದೆ? ಇಂದಿನ ಪೇಪರ್ನಲ್ಲಿ ಈ ಬಗ್ಗೆ ಏನಾದರೂ ಮಾಹಿತಿ ಇರುತ್ತದೆಯೇ?ಮುಂದಿನ ಬಾಗಿಲು ತೆರೆದು ವರಾಂಡಾದ ಮೂಲೆಮೂಲೆಯಲ್ಲಿ ಹಾಕಿರಬಹುದಾದ ಪೇಪರ್‌ಗಾಗಿ ಹುಡುಕಾಡಿದೆ. ರಸ್ತೆ ನಿರ್ಜನವಾಗಿತ್ತು. ಜನರೆಲ್ಲಾ ಸೂರ್ಯನನ್ನು ಕಾಣದೆ ಬೆದರಿ ಮನೆಯೊಳಗೇ ಅವಿತು ಕೊಂಡಿದ್ದಾರೆಯೇ?

ಪೃಥ್ವಿಯ ಮೇಲಿನ ಎಲ್ಲಾ ಭೂಭಾಗವೂ ಒಂದಕ್ಕೊಂದು ಅಂಟಿಕೊಂಡಿದ್ದು ಯಾವುದೋ ಒಂದು ಕಾಲಘಟ್ಟದಲ್ಲಿ ಅವೆಲ್ಲಾ ಸಿಡಿದು  ಬೇರೆ ಬೇರೆ ಖಂಡಗಳಾದುವೆಂದು ಹಿಂದೆಂದೋ ಓದಿದ್ದೆ. ಇಂದು ಅಂತಹುದೇ ಮತ್ತೊಂದು ಸಿಡಿತವಾಗಿ ನಮ್ಮ ಭರತಖಂಡ ಪ್ರತ್ಯೇಕ ಹೋಳಾಗಿ ತೇಲುತ್ತಾ ದಕ್ಷಿಣ ಧೃವದತ್ತ ಬಂದುಬಿಟ್ಟಿದೆಯೇ? ಅಲ್ಲೆಲ್ಲಾ ಆರುತಿಂಗಳು ಬೆಳಕಿದ್ದರೆ ಆರುತಿಂಗಳು ರಾತ್ರಿಯಂತೆ! ಹಾಗೇನಾದರೂ ಅದರೆ ಇಂದಿನಿಂದ ಆರುತಿಂಗಳು ನಿರಂತರ ರಾತ್ರಿಯೇ, ಈ ಬಗ್ಗೆ ಯಾರನ್ನು ಕೇಳಿದೃಢ ಪಡಿಸಿಕೊಳ್ಳುವುದು? ಕಿಟಕಿ ಪರದೆ ಸರಿಸಿ ಪೆಂಗ್ವಿನ್ ಪಕ್ಷಿಗಳು ಕಣ್ಣಿಗೇನಾದರೂ ಬೀಳುತ್ತವೇನೋ ಎಂದು ನೋಡಿದೆ. ನಮ್ಮ ರಸ್ತೆ ಕಳ್ಳಬೆಕ್ಕು ಹೆಗ್ಗಣವನ್ನಟ್ಟಿಸಿಕೊಂಡು ಕಣ್ಮರೆಯಾಯಿತು.

ಯಾವುದು ಸ್ಥಗಿತಗೊಂಡರೂ ನಮ್ಮ ಟಿ.ವಿ ಸುದ್ದಿವಾಹಿನಿಗಳು ಮಾತ್ರ ನಿರಂತರ ತಾನೇ? ಟಿವಿ ಆನ್ ಮಾಡಿ ಮುಂದೆ ಕುಳಿತೆ. ಎಲ್ಲಾ ಯಥಾಪ್ರಕಾರ ನಡೆಯುತಿತ್ತು. ರಾಜ್ಯದ ರಾಜಕಾರಣದ ವಾದವಿವಾದಗಳನ್ನೆಲ್ಲಾ ಎಳೆಎಳೆಯಾಗಿ ಬಿಡಿಸಿ ಅವಕ್ಕೆ ಉಪ್ಪು

ಖಾರ ಮಸಾಲೆ ಬೆರೆಸಿ ಕೊಟ್ಟು ನಮ್ಮ ತಲೆತಿನ್ನುವ ಕಾರ್ಯ ಮುಂದುವರೆಸಿದ್ದರು. ಅಯ್ಯೊ ದೇವರೇ, ಇವರ ಅಪರಾಧ ಕ್ಷಮಿಸಿಬಿಡು. ತಾವೆಂತಹ ಭಯಾನಕ ಭವಿಷ್ಯದ ಹೊಸ್ತಿನಲ್ಲಿ ನಿಂತಿದ್ದೇವೆಂಬ ಅರಿವೇ ಅವರಿಗಿಲ್ಲ. ಬ್ರಹ್ಮಾಂಡವೇ ಕತ್ತಲ ಕೂಪದಲ್ಲಿದ್ದಾಗಲೂ ಅದರ ಅರಿವೇ ಇಲ್ಲದೆಕ್ಷುಲ್ಲಕ ವಿಚಾರಗಳನ್ನೇ ಚರ್ಚೆಮಾಡುತ್ತಿರುವರಲ್ಲಾ ಎಂಬ ಕೋಪ ವಿಷಾದವೆರಡೂ ಆಯಿತು.

ಅಲ್ಲಾ, ಮುಂಬೈನಲ್ಲೂ ಹೀಗೆಯೇ ಆಗಿರಬೇಕಲ್ಲಾ. ಆತಂಕದಿಂದ ಯಜಮಾನರಿಗೆ ಫೋನಾಯಿಸಿದೆ. ಮರಾಠಿಯಲ್ಲಿ ಮಹಿಳಾವಾಣಿ ಏನನ್ನೋ ವದರಿತು. ಅರ್ಥವಾಗದೆ ಮಾಡುತ್ತಲೇ ಹೋದೆ. ಪ್ರಯೋಜನವಾಗದೆ ಅಡುಗೆ ಮನೆಗೆ ಹೋಗಿ ಮಿಕ್ಕಿದ್ದ ಡಿಕಾಕ್ಷನ್ಗೆ ಧಾರಾಳವಾಗಿ ಹಾಲುಸುರಿದು ಎರಡು ಚಮಚ ಸಕ್ಕರೆ ಬೆರೆಸಿ ಬಿಸಿಯಾಗಿಸಿ ಚಪ್ಪರಿಸಿದೆ. ಆವರಿಸಿದ ಮಬ್ಬು ಸ್ವಲ್ಪ ಸ್ವಲ್ಪವೇ ತಿಳಿಯಾಯಿತು.

ಇನ್ನೂ ಪೇಪರ್ ಹಾಕದ ಹುಡುಗನ್ನು ತರಾಟೆಗೆ ತೆಗೆದುಕೊಳ್ಳೋಣ ಎಂದುಕೊಂಡು ಡಯಲ್ ಮಾಡಿದೆ. ಒಮ್ಮೆ ಸೋತರೂ ಛಲಬಿಡದ ತ್ರಿವಿಕ್ರಮನಂತೆ ಮತ್ತೆ ಮತ್ತೆ ಮಾಡುತ್ತಲೇ ಹೋದೆ. ಎಂಟನೇ ಬಾರಿ ಬೇಸರದಿಂದ ಬಾಯ್ಬಿಟ್ಟ. ' ಅಲೋ "ಎಂದಿತು ಬೇಜಾರಿನಿಂದ ಪೇಪರ್ ಹುಡುಗನ ಧ್ವನಿ." ಏನಪ್ಪ ಆಗ್ಲೆ ಗಂಟೆ ಎಂಟಾಯ್ತು. ಪೇಪರ್ ಹಾಕೊಲ್ವಾ? "ಹಾಕೊಲ್ಲಾ ಮೇಡಂ. ಇನ್ನೇನಿದ್ರೂ ನಾಳೆನೇ." "ಯಾಕೆ ಇವತ್ತು ಹಾಕೊಲ್ಲಾ? ಇವತ್ತು ಪೇಪರಿಗೆ ರಜಾನಾ?" "ಈಗಿನ್ನೂ ನೆನ್ನೆ. ಪೇಪರ್ ನಾಳೆ ಬರತ್ತೆ."

"ಏನಯ್ಯ ನೀ ಹೇಳೋದು? ಇವತ್ತು ನೆನ್ನೆನಾ? ಹಾಗಾದ್ರೆ ನಾಳೆ ಇವತ್ತಾ?" ರೇಗಿದೆ.

"ಅಯ್ಯೋ ದೇವ್ರೇ. ನಿಮ್ಮಹತ್ರ ಮಾತಾಡಿದ್ರೆ ನನ್ ತಲೆ ಕೆಟ್ಟುಹೋಗ್ತೈತೆ. ಪೇಪರ್ ಬೆಳ್ಗಿಂಜಾವ ಅಲ್ವಾ ಬರೋದು? ರಾತ್ರೆ ಎಲ್ಲಾದ್ರೂ ಬರ್ತದಾ? ಇಡ್ರಮ್ಮ ಫೊನ್ನ ಕೆಳ್ಗೆ" ಎಂದು ಗದರಿಸುತ್ತಾ ಫೋನ್ ಕಟ್ ಮಾಡ್ದ ಮಹಾನುಭಾವ. ತಲೆಯಲ್ಲಿ ಮಿಂಚು ಸುಳಿದಂತಾಯ್ತು. ಹಾಗಾದ್ರೆ ಈಗ ಮುಂಜಾನೆಯಲ್ಲಾ ರಾತ್ರೆ. ಮಧ್ಯಾಹ್ನದ ನಿದ್ದೆ ಬಲು ಆಳಕ್ಕೆ ಕೊಂಡೊಯ್ದು ಒಮ್ಮೆಲೇ ಎಚ್ಚರವಾಗಿ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಯ್ತು. ಪೇಪರ್ ಹುಡುಗನಿಂದ ಜ್ಞಾನೋದಯ ವಾಯ್ತಲ್ಲ. ಸಧ್ಯ ಸೂರ್ಯ ಮುಷ್ಕರ ಹೂಡಿಲ್ಲ ಎಂದು ಮನಸ್ಸು ನಿರಾತಂಕವಾಯ್ತು. ಕುಡಿದ ಕಾಫೀ ಲೋಟತೊಳೆಯಲು ಅಡುಗೆಮನೆಯ ಸಿಂಕನ್ನು ಸಮೀಪಿಸಿದೆ. ಗಸಗಸೆ ಪಾಯಸದ ಖಾಲಿ ಪಾತ್ರೆ ನನ್ನತ್ತಾ ನೋಡುತ್ತಾ ಗೇಲಿ ಮಾಡಿದಂತಾಯ್ತು.

ಫೊನ್ ರಿಂಗಣಿಸಿತು. ಅತ್ತಲಿಂದ ಯಜಮಾನರ ಧ್ವನಿ. " ನಾನು ಕೆಲಸದ ಮೇಲಿದ್ದಾಗ ಫೋನ್ ಮಾಡ್ಬೇಡ ಅಂತ ಎಷ್ಟು ಬಾರಿ ಹೇಳ್ಬೇಕು ನಿಂಗೆ? ಡಿನ್ನರ್ ಮೀಟಿಂಗ್ ಮಧ್ಯೆ ನಿನ್ನ ಕಾಲ್. ಏನ್ಸಮಾಚಾರ? ಎಲ್ಲಾ ಓಕೆನಾ?"

ಇದಕ್ಕೆ ನಾನೇನು ಉತ್ತರಿಸಲಿ? ಅತಿಯಾಗಿ ಕುಡಿದ ಗಸಗಸೆ ಪಾಯಸದಿಂದ ಉಂಟಾದ ಅನಾಹುತದ ವಿಷಯ ಹೇಳಲೆ? ಈಗ ಅವರಿರುವ ಮೂಡಿನಲ್ಲಿ ಹೇಳುವುದು ತರವಲ್ಲ ಎನ್ನಿಸಿತು. ಹಾಗೆಂದು ಸುಮ್ಮನಿರಲೂ ಆಗದು. " ಐ ಮಿಸ್ಸ್ ಯು" ಎಂದುಬಿಟ್ಟೆ! "ಯೂ...ಯೂ...ಐ ಡೋಂಟ್ ಮಿಸ್ ಯು" ಎಂದು ವದರಿ ಫೋನ್ ಆಫ್ ಮಾಡಿಬಿಟ್ಟರು.!

■

# ದೀಡ ಶ್ಯಾಣ್ಯಾ

ವಿಲಾಸ ನಾ. ಹುದ್ದಾರ

ನನ್ನ ಚಡ್ಡಿದೋಸ್ತ ಗುಂಡ್ಯಾ ಕೆಲಸ ಇದ್ದದ್ದಕ್ಕ ಮನ್ಯಾಗ ಇದ್ದಾ. ಹೀಂಗಾಗಿ ನಿರ್ವಾಹ ಇಲ್ಲದ ನಾ ಒಬ್ನ ಮಾರ್ಕೆಟಗೆ ಬಂದಿದ್ದೆ. ಸಾಮಾನೆಲ್ಲಾತೊಗೊಂಡು ಚೀಲಾ ಹೊರಲಾರದ ಹೊತ್ಕೊಂಡ 'ಉಶ್ಯಪಾ' ಅನ್ಕೋತಕಾರ ಪಾರ್ಕಿಂಗೆ ಬಂದೆ. ನಾನು ಯಾವಾಗಲೂ ಪಾರ್ಕಿಂಗ ಜಾಗಾದ ಕಡೀಕ ಅಂದ್ರ ಸ್ಕೂಟರ್‌ಗಳ ಪಾರ್ಕಿಂಗ ಬಾಜೂಕಕಾರ ನಿಂದ್ರಸೋದು. ತಗೀಲಿಕ್ಕೆ ಸರಳ ಆಗ್ತದ ಅಂತ. ಅಲ್ಲೆ ಬಂದ ನೋಡ್ತೇನಿ ನನ್ನ ಕಾರಗಾಯಬ್. ಎಲ್ಲಿ ಹೋತಪಾ ಇದು ಅನ್ಕೋತ ಆ ಕಡೆ ಈ ಕಡೆ ನೋಡಿದೆ. ಮೊದ್ಲೇಕ ಚೀಲದ ಭಾರ ಬ್ಯಾರೆ. ಅಷ್ಟರೊಳಗ ಅಲ್ಲೇ ಸ್ಕೂಟರ್ ಪಾರ್ಕಿಂಗದೊಳಗ ನಿಂತ ನನ್ನ ಸ್ಕೂಟರ್ ಕಣ್ಣಿಗೆ ಬಿತ್ತ. ಅದರ ಚಾವೀನೂ ಅದಕ್ಕ ಇತ್ತ. ಕೈಯಾಗಿನ ಚೀಲಾ ಸ್ಕೂಟರ್‌ನ ಹುಕ್ಕಿಗೆ ಸಿಗಸಿ ಅದನ್ನ ತೊಗೊಂಡಕಾರ ಹುಡಕಲಿಕ್ಕೆ ಹೊರಟೆ. ಪಾರ್ಕಿಂಗ ಜಾಗ ಮೂರ–ನಾಲ್ಕ ಕಡೆ ಅದ. ಎಲ್ಲಾಕಡೆ ಎರಡ ಸರೆಚಕ್ಕರ ಹಾಗಿದೆ, ನನ್ನ ಕಾರಕಾಣಿಸಲೇ ಇಲ್ಲಾ. ಇದೇನಪಾ ಅಂತ ಎದೀನೂ ಹೊಡ್ಕೊಳ್ಳಿಕ್ಕೆ ಸುರು ಮಾಡ್ತು. ಹೇಣ್ತಿ ಮಾರೀನೂ ಕಣ್ಣ ಮುಂದ ಬಂತು. ಕಂಗಾಲಾಗಿ ಗುಂಡ್ಯಾಗ ಫೋನ ಹಚ್ಚಿದೆ.

ಅವನು ಎಂದಿನ ಧಾಟಿಯೊಳಗ, "ಏನಾತ್ಲೇ?".

"ನನ್ನ ಕಾರಕಾಣಸವಾಲ್ತಲೇ?"

"ಎಲ್ಲಿದ್ದೀ?"

"ಮಾರ್ಕೆಟ್ ಪಾರ್ಕಿಂಗ ಹತ್ರ.."

"ಬರೋಬರಿ ಹುಡಕೀದೋ ಇಲ್ಲೋ?"

"ಹೂಂನ್ಲೇ, ಒಂದತಾಸ ಆತ್ಲೇ.."

"ಅಲ್ಲಲೇ, ಮೊದ್ಲೇಕಕೆಟ್ಟ ಬಿಸಲ ಅದ...ಒಂದತಾಸ...ಹೆಂಗ ಹುಡಕೀದಿ?"

"ಸ್ಕೂಟರ್ ಮ್ಯಾಲೆ...".

"ಯಾರ ಸ್ಕೂಟರ್?."

"ನಂದ..ಮತ್ಯಾರದ.."

ಒಂದ ಮಿನಿಟ್ ಸ್ಮಶಾನ ಮೌನ....ಏನೋ ಬೋಂಬ್ ಹಾಕ್ತಾನ ಇಂವಾ... ಹಾಕೇ ಬಿಟ್ಟಾ...

"ದೀಡ ಸ್ಯಾಣ್ಯಾ ಇದ್ದೀ ನೋಡ್ಲೇ...ನೀ ಏನ ಮಗನ, ಕಾರ ಮ್ಯಾಲೆ ಸ್ಕೂಟರ್ ಇಟ್ಕೊಂಡ ಹೋಗಿದ್ದೇನ ಮಗನ ಮಾರ್ಕೆಟ್ಟಿಗೆ....."

ನನಗ ಒಮ್ಮಿಲೆ ಹೊಳೀಲಿಲ್ಲಾ..." ಅಂದ್ರ..."

"ಅಂದ್ರ ನಿನ್ನತಲಿ..." ಇಷ್ಟ ಹೇಳಿ ಫೋನ್ ಕುಕ್ಕಿದಾ...ಅದಕುಕ್ಕಿದ ಸಪ್ಪಳಕ್ಕ, ನನ್ನ ತಲೀಗೆ ಹೊಳೀತು. ಸಪ್ಪಗ ಮಾರಿ ಮಾಡ್ಕೊಂಡ ಮನೀಗೆ ಬಂದೆ.

ನನ್ನ ಸಪ್ಪಗ ಆಗಿದ್ದ ಮಾರಿ ನೋಡಿ ನನ್ನ ಅರ್ಧಾಂಗಿ ತನ್ನ ಪ್ರಶ್ನಾರ್ಥಕ ನೋಟವನ್ನು ನನ್ನಡೆಗೆ ಒಗೆದಳು. ಇನ್ನ ನಡದದ್ದ ಹೇಳದ ಇರಲಿಕ್ಕೆ ಆಗೂದಿಲ್ಲಾ. ವರದಿ ಒಪ್ಪಿಸಿದೆ. ಮನೆ ಮುಂದೆ ನಿಂತಕಾರಮ್ಯಾಲೆ ಒಮ್ಮೆ ಕಣ್ಣಾಡಿಸಿ ಸುರು ಮಾಡಿದ ಮುಸು ಮುಸು ನಗೋದು ಇನ್ನೂ ನಿಂತಿಲ್ಲಾ. "ನನ್ನಗಂಡ ದೀಡ ಶ್ಯಾಣ್ಯಾ" ಅಂತ ಅನ್ಕೋತ ಮುಸು ಮುಸು ನಕ್ಕದ್ದ ನಕ್ಕದ್ದು.

■

# ನಮ್ಮಪ್ಪನ ಉದ್ಯೋಗ ಪರ್ವ

**"ಕಳೆದ ಶತಮಾನದ ಗ್ರಾಮೀಣ ಕುಟುಂಬವೊಂದರ ಯಜಮಾನನೊಬ್ಬನ ಜೀವನಗಾಥೆ"**

**ಶ್ರೀಧರ ಬಾಣಾವರ**

ನನ್ನಜ್ಜ ಬ್ರಿಟಿಷರ ಆಳ್ವಿಕೆಯಲ್ಲಿ ಪೌರಾಡಳಿತ ಇಲಾಖೆಯಲ್ಲಿ ಕೆಳದರ್ಜೆಯ ನೌಕರಿ ಗಳಿಸಿ ನಿವೃತ್ತಿಯ ಹೊತ್ತಿಗೆ ಅರಸೀಕೆರೆಯ ಪುರಸಭೆಯಲ್ಲಿ ಆಕ್ಟಾಯ್ ಮುತ್ಸದ್ದಿ ಎಂಬ ಗೌರವಯುತ ಹುದ್ದೆ ಹೊಂದಿ ಎರಡಂಕಿಯ ಕನಿಷ್ಠಮಟ್ಟದ ಪಿಂಚಣಿಯನ್ನು ಸಾಯುವವರೆಗೂ ಪಡೆದುಕೊಂಡರು. ಕೆಲಕಾಲ ಅವರು ನಮ್ಮೂರ ಪುರಸಭೆಯ ತಾತ್ಕಾಲಿಕ ಆಡಳಿತಾಧಿಕಾರಿಯೂ ಆಗಿದ್ದರು. ಅವರ ನಾಲ್ವರು ಗಂಡು, ಇಬ್ಬರು ಹೆಣ್ಣು ಮಕ್ಕಳಲ್ಲಿ ನಮ್ಮಪ್ಪ ಎರಡನೆಯವರು. ಅಜ್ಜನಿಗೆ ಸರ್ಕಾರಿ ನೌಕರಿಯಲ್ಲದೆ ತಾಯಿಯ ಕಡೆಯಿಂದ ಬಂದ ಸ್ವಲ್ಪ ಜಮೀನು ಇತ್ತು. ಅವರ ನೌಕರಿ ಕಾರಣ ಹಾಗೂ ಉಳಿದ ಮೂರು ಗಂಡುಮಕ್ಕಳ ಅಲಭ್ಯತೆಯ ಕಾರಣಗಳಿಂದ ನಮ್ಮಪ್ಪನಿಗೆ ಒಟ್ಟು ಆಸ್ತಿಯ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿ ಬಿತ್ತು. ಇದು ಅವರ ಉದ್ಯೋಗಪರ್ವದ ಮೊದಲ ಅಧ್ಯಾಯ. ಅಜ್ಜಿ ಚಿಕ್ಕವಯಸ್ಸಿಗೆ ತೀರಿಹೋಗಿದ್ದರು. ಮದುವೆಗೆ ಮುಂಚೆ ಹಾಗೂ ಮದುವೆಯ ನಂತರ ಹಲವಾರು ವರ್ಷ ಹಳ್ಳಿಯಲ್ಲಿಯೇ ವಾಸ.

ಹೆಚ್ಚಿನ ಜಮೀನು ತೆಂಗಿನ ತೋಟ. ಕಾಲಕ್ರಮೇಣ ಹೊಲವಾಗಿದ್ದ ಒಂದು ಭಾಗದಲ್ಲಿ ನನ್ನಪ್ಪನೇ ತೆಂಗಿನ ಮರಗಳನ್ನು ಬೆಳೆಸಿ ತೋಟ ಮಾಡಿದ್ದು ಈ ಉದ್ಯೋಗ ಪರ್ವದ ಮುಖ್ಯಭಾಗ. ಒಟ್ಟು ಕುಟುಂಬದ ಜಮೀನನ್ನು ಅಣ್ಣತಮ್ಮಂದಿರಲ್ಲಿ ಪಾಲಾಗುವ ತನಕ ಉಸ್ತುವಾರಿ ನೋಡಿಕೊಂಡದ್ದು ನನ್ನಪ್ಪ. ಅದೇ ಹಳ್ಳಿಯಲ್ಲಿ ಸ್ವಂತ ಪರಿಶ್ರಮದಿಂದ ಒಂದು ಮನೆಯನ್ನು ಕಟ್ಟಿದ್ದು ಸಹ ಇವರ ಸಾಧನೆ. ಈ ಮನೆ ಪಾಲಾಗುವಾಗ ಕೊನೆಯ ತಮ್ಮನ ಭಾಗಕ್ಕೆ ಹೋಗಿತ್ತು. ಹತ್ತಿರದ ಹೋಬಳಿ ಕೇಂದ್ರದಲ್ಲಿದ್ದ ಪಿತ್ರಾರ್ಜಿತ ಮನೆಯ ಮುಖ್ಯಭಾಗ ಇವರ ಪಾಲಿಗೆ ಬಂದಿತ್ತು. ಹಳ್ಳಿಯ ವಾಸದಲ್ಲಿ ಇವರು ಸ್ನೇಹಿತೊಬ್ಬರು ಜೊತೆಯಲ್ಲಿ ವ್ಯಾಪಾರವೊಂದನ್ನು ಸಹ ಇವರು ಆರಂಭಿಸಿದ್ದುಂಟು. ನಮ್ಮದು ತೆಂಗಿನ ಸೀಮೆ. ಇಲ್ಲಿಂದ ತೆಂಗಿನ ಕಾಯಿ ಉತ್ತರ ಭಾರತದವರೆಗೂ ರಫ್ತಾಗುತ್ತಿತ್ತು.

ತೋಟಕ್ಕೆ ಒಂದೇ ಮೈಲಿ ದೂರದಲ್ಲಿ ಬೆಂಗಳೂರು – ಹುಬ್ಬಳ್ಳಿ – ಬೊಂಬಾಯಿ ರೈಲುಮಾರ್ಗ, ಪ್ರಯಾಣಿಕರ ರೈಲುಗಳು ಒಂದೋ ಎರಡೋ ನಿಲ್ಲುತ್ತಿದ್ದವಾದರೂ ಗೂಡ್ಸ್ ವ್ಯಾಗನ್‌ಗಳ ಸೌಲಭ್ಯ ಈ ನಿಲ್ದಾಣದಲ್ಲಿತ್ತು. ಇಲ್ಲಿ ತೆಂಗಿನಕಾಯಿ ವ್ಯಾಪಾರ ನಡೆಸಿದ್ದು ನಮ್ಮಪ್ಪನ ಉದ್ಯೋಗಪರ್ವದಲ್ಲೊಂದು ತಿರುವು. ಇದರ ಲೆಕ್ಕಪತ್ರಗಳೇನೂ ಲಭ್ಯವಾಗದ್ದರಿಂದ ಹಾಗೂ ಹೆಚ್ಚು ಕಾಲ ನಡೆಯಲಿಲ್ಲವೆಂಬ ಮಾಹಿತಿ ನಮ್ಮಮ್ಮನಿಂದ ದೊರೆತಿದ್ದರಿಂದ ಇಂದು ದೊಡ್ಡಮಟ್ಟದ ತೆಂಗಿನಕಾಯಿ ರಫ್ತುಮಾಡುವ ವ್ಯಾಪಾರಿಯ ಮಕ್ಕಳೆಂದು ಕರೆದುಕೊಳ್ಳುವ ಅವಕಾಶ ತಪ್ಪಿಹೋಯಿತೆಂಬ ಕೊರಗು ನಮಗಿಲ್ಲ. ಆದರೆ ವ್ಯವಸಾಯದ ಪ್ರಗತಿ ಒಳ್ಳೆಯ ರೀತಿಯಲ್ಲಿ

ಸಾಗಿತ್ತು. ಹೊಸದಾಗಿ ಮಾಡಿದ್ದ ತೆಂಗಿನ ತೋಟದ ಭಾಗದಲ್ಲಿ ನಮ್ಮಪ್ಪನ ಶ್ರಮ ಫಲಕೊಟ್ಟಿತ್ತು. ಈ ಸಂದರ್ಭದಲ್ಲಿ ಸ್ವಂತಕ್ಕೆ, ಗೆಳೆಯರಿಗೆ ಎತ್ತು ಕೊಳ್ಳಲು, ಕೊಂಡದ್ದು ಹೊಂದದಿದ್ದಾಗ ಮಾರಲು ಹತ್ತಿರದ ಜಾತ್ರೆಗಳಿಗೆ ಹೋಗಿದ್ದು, ಅಲ್ಲಿಯ ವಾಸ್ತವ್ಯದಲ್ಲಿ ದನಗಳಿಗೆ ಬೇಯಿಸಿದ ಹುರುಳಿಕಾಳಿನ ಕುದಿ ಎಸರಿಗೆ ಉಪ್ಪುಕಿವುಚಿದ ಹಸಿಮೆಣಸಿನಕಾಯಿ ಕಾರ, ಹುಣಸೆಕಾಯಿ ಜಜ್ಜಿ ತೆಗೆದ ಹುಳಿ, ಬಳಸಿ ಮಾಡಿದ ಅಂಬ್ರದ ವರ್ಣನೆ ನಮ್ಮಪ್ಪನ ಬಾಯಿಂದ ಅನೇಕ ಬಾರಿ ಕೇಳಿದ್ದೆವು. ಹಳೆಯ ತೆಂಗಿನ ಮರಗಳಿಂದ ಹೇಳಿಕೊಳ್ಳುವ

ಆದಾಯವೇನೂ ಇರಲಿಲ್ಲ. ತೆಂಗಿನ ಕಾಯಿಯ ವ್ಯಾಪಾರವೂ ಕಾಲಹರಣದ ಮಾರ್ಗವಾಗಿದ್ದು. ಆಗಿದ್ದ ಮೂರ್ನಾಲ್ಕು ಮಕ್ಕಳ ಕುಟುಂಬ ನಿರ್ವಹಣೆಗೆ ಸರಿಹೂಗುತ್ತಿತ್ತು. ಹಳ್ಳಿಯಲ್ಲಿ ಶಾಲೆ ಇರಲಿಲ್ಲ. ಅಕ್ಕ ದೊಡ್ಡಪ್ಪನ ಮನೆಯಲ್ಲಿ, ಇಬ್ಬರು ಅಣ್ಣಂದಿರು ಹತ್ತಿರದ ಹಳ್ಳಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ್ದರು. ತೆಂಗಿನ ತೋಟದಲ್ಲಿ ಎಕರೆಗೆ ನಲವತ್ತು ತೆಂಗಿನ ಮರಗಳು ಇರುತ್ತಿದ್ದವಾಗಿ ನಡುವಿನ ಖಾಲಿ ಜಾಗದಲ್ಲಿ ಏನಾದರೂ ಅಲ್ಪಕಾಲಿಕ ಬೆಳೆ ತೆಗೆಯುವ ಸಾಧ್ಯತೆಗಳಿರುತ್ತಿದ್ದವು.

ಆ ಕ್ಷೇತ್ರದಲ್ಲಿ ಮಳೆಯಾಧಾರಿತ ಸಣ್ಣ ಸಣ್ಣ ಕೆರೆಗಳನ್ನು ಬಿಟ್ಟರೆ ಬೇರೆ ನೀರಿನ ಸೌಕರ್ಯವಿರಲಿಲ್ಲ ಮಲೆನಾಡಿನ ಹಾಸನ, ಚಿಕ್ಕಮಗಳೂರು ಜಿಲ್ಲೆಗಳಿಗೆ ಅಂಟಿಕೊಂಡಿದ್ದರೂ ನಮ್ಮ ತಾಲ್ಲೂಕಿನಲ್ಲಿ ಮಳೆಗೆ ಕೊರತೆಯೇ. ಎರಡೂ ಮಳೆಗಾಲದಲ್ಲಿ ಮೊದಲ ಮಳೆಗೆ ಉತ್ತಿ, ಬಿತ್ತಿ ಮಾಡಿದರೆ ಫಸಲು ಕೈಸೇರುವವರೆಗೂ ಕಾಲಕಾಲಕ್ಕೆ ಮಳೆಯಾದರೆ ತೆಂಗಲ್ಲದ ಬೇರೆ ಬೆಳೆಗಳು ಕೈಗೆ ಸಿಗುತ್ತಿದ್ದವು. ದನಗಳ ಮೇವಿಗೂ ಇದೇ ಗತಿ. ಒಣ ನೆಲದ ಬೆಳೆಗಳಾದ ಎಳ್ಳು, ಕಡಲೆಕಾಯಿ, ರಾಗಿ, ಜೋಳ, ಅವರೆ ಮುಂತಾದ ಕಾಳುಗಳು ಅಲ್ಪ ಪ್ರಮಾಣದಲ್ಲಿ ಮನೆ ಸೇರುತ್ತಿದ್ದವು.

ಇವರ ಮಧ್ಯೆ ನಮ್ಮ ತಾತನ ವಶೀಲಿಯೋ ಏನೋ ನಮ್ಮ ಜಮೀನಿದ್ದ ಗ್ರಾಮದ ಪಟೇಲಿಕೆ ನಮ್ಮಪ್ಪನ ಪಾಲಿಗೆ ಬಂತು. ನಮ್ಮ ಹಳ್ಳಿ ನಲವತ್ತೈವತ್ತು ಮನೆಗಳಿದ್ದ ಒಂದು ಸಣ್ಣ ಗ್ರಾಮ. ಈ ಗ್ರಾಮವಾಸಿಗಳ ಒಡೆತನದಲ್ಲಿದ್ದ ಜಮೀನುಗಳಿಗೆ ಸರ್ಕಾರ ನಿಗದಿಪಡಿಸಿದ ಭೂ ಕಂದಾಯವನ್ನು ವಸೂಲಿಮಾಡಿ ವರ್ಷಕ್ಕೊಮ್ಮೆ ತಾಲ್ಲೂಕಿನ ಟ್ರೆಜರಿಗೆ ಜಮಾ ಮಾಡುವ ಜವಾಬ್ದಾರಿ ಪಟೇಲರದ್ದಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮಪ್ಪ ಈ ಹುದ್ದೆ ಪಡೆಯಲು ಹಾಕಿದ ಅರ್ಜಿಯ ಪ್ರತಿ ಹಾಗೂ ಜಿಲ್ಲಾ ಕಲೆಕ್ಟರ್ ನೀಡಿದ ಅನುಜ್ಞಾ ಪತ್ರ ನನ್ನ ಸಂಗ್ರಹದಲ್ಲಿದೆ. ಎರಡು ಪುಟಗಳ ಕನ್ನಡದಲ್ಲಿರುವ ಆ ಅನುಜ್ಞಾಪತ್ರದ ಒಕ್ಕಣೆ ಕೂಡಾ ವಿಶೇಷವಾಗಿದೆ. ಏಕ ವಚನದಲ್ಲಿ ಸಂಬೋಧಿತವಾಗಿರುವ ಪತ್ರದಲ್ಲಿ ಹುದ್ದೆಯ ಹಕ್ಕು (ಕಡಿಮೆ)ಹಾಗೂ ಜವಾಬ್ದಾರಿ (ಹೆಚ್ಚು) ಗಳನ್ನು ಪಟ್ಟಿಮಾಡಲಾಗಿದೆ ಹುದ್ದೆ ಕಂದಾಯ ವಸೂಲಿಗಷ್ಟೇ ಸೀಮಿತವಾಗದೆ ಗ್ರಾಮದ ಶಿಸ್ತುಪಾಲನೆಯ ಅಂದರೆ ಪೋಲೀಸ್ ಜವಾಬ್ದಾರಿಗಳನ್ನೂ ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಗ್ರಾಮದ ಶಿಸ್ತು ಕಾಪಾಡುವುದು, ಕಳ್ಳತನ, ಹೊಡೆದಾಟ, ಅಪಘಾತಗಳು ಮುಂತಾದ ಘಟನೆಗಳನ್ನು ಕೂಡಲೇ ಸಮೀಪದ ಪೊಲೀಸ್ ಠಾಣೆಗೆ ವರದಿ ಮಾಡುವುದು ಮುಂತಾದ ಜವಾಬ್ದಾರಿಗಳು ಉಲ್ಲೇಖವಾಗಿವೆ.

ಹೀಗಾಗಿ ನಮ್ಮಪ್ಪನಿಗೆ ದೊರೆತ ಉದ್ಯೋಗ ಪೋಲೀಸ್ ಪಟೇಲರದ್ದು, ಪೋಲೀಸ್ ಸಮವಸ್ತ್ರ ಮಾತ್ರಾ ಇಲ್ಲ. ಈ ಜವಾಬ್ದಾರಿಗೆ ಸರ್ಕಾರ ಕೊಡುತ್ತಿದ್ದ ಸಂಭಾವನೆಗೆ ಪೋಟಿಗೆ ಎಂದು ಕರೆಯುತ್ತಿದ್ದರು. ಗ್ರಾಮದಿಂದ ಉತ್ಪತ್ತಿಯಾಗುವ ಒಟ್ಟು ಕಂದಾಯದ ಮೊತ್ತದ ಮೇಲೆ ಒಂದು ಸ್ಥಿರಾಂಶವನ್ನು ಪೋಟಿಗೆ ಮೂಲಕ ಜಮಾಬಂದಿಯ ಸಮಯದಲ್ಲಿ ಪಡೆದುಕೊಳ್ಳಲು ಅವಕಾಶವಿತ್ತು. ನಮ್ಮಪ್ಪನಿಗೆ ಬರುತ್ತಿದ್ದ ವಾರ್ಷಿಕ ಪೋಟಿಗೆ ಹಣ ಇಪ್ಪತ್ತರಿಂದ ಮುವ್ವತ್ತು ರೂಪಾಯಿ ಅಷ್ಟೇ. ಅದು ಅವರು ಅವರ ಜಮೀನಿಗೆ ಕೊಡಬೇಕಾದ ಕಂದಾಯಕ್ಕೂ ಸಾಲುತ್ತಿರಲಿಲ್ಲ. ಜಮಾಬಂದಿಯ ದಿನಕ್ಕೆ ಸ್ವಲ್ಪ ಮುಂಚೆ ಅಥವಾ ರೈತರಿಗೆ ಯಾವುದಾದರೂ ಫಸಲಿನ ಹಣ ಬರುವ ಸಮಯಕ್ಕೆ ಕಾದು ಅವರಿಂದ ಕಂದಾಯದ ಹಣ ವಸೂಲಿ ಮಾಡಿಕೊಂಡು ಪಾಸ್ ಬುಕ್ ಮಾದರಿಯ ರಸೀದಿ ಪಟ್ಟಿ ಪುಸ್ತಕದಲ್ಲಿ ಅದನ್ನು ನಮೂದಿಸಿ ಕೊಡಬೇಕಿತ್ತು. ಆ ಹಣವನ್ನು ಸ್ವಂತಕ್ಕೆ ಬಳಸದೆ ಜಮಾಬಂದಿಯವರೆಗೂ ಕಾಪಾಡಿಕೊಂಡು ಟ್ರೆಜರಿಗೆ

ಜಮಾ ಮಾಡಿ ರೆವಿನ್ಯೂ ಅಧಿಕಾರಿಯಿಂದ ಷರಾ ಬರೆಸಿಕೊಂಡು ಬರುವುದರಲ್ಲಿ ನಮ್ಮಪ್ಪ ಬಲು ಶಿಸ್ತಿನ ಪಟೇಲ. ಹೆಚ್ಚಿನ ವೈಯುಕ್ತಿಕ ಆಸೆ ಇಲ್ಲದ ನಮ್ಮಪ್ಪ ಒಂದು ವರ್ಷ ಪೋಟಿಗೆ ಹಣದಲ್ಲಿ ಒಂದು ಫ್ಲಾನಲ್ ತುಂಬುತೋಳಿನ ಅಂಗಿ ಹೊಲಿಸಿಕೊಂಡದ್ದು ನನಗಿನ್ನೂ ನೆನಪಿದೆ. ಅದು ಅವರಿಗಾಗಲ್ಲ ಅವರ ಜೀವನಸಾಥಿಯಾಗಿದ್ದ ಅಸ್ತಮಾ ಖಾಯಿಲೆಗೆ. ರಾಜರಾಳ್ವಿಕೆಯ ಆಡಳಿತ ಕೊಡಮಾಡಿದ್ದ ಪಟೇಲಿಕೆ ಪಟ್ಟವನ್ನು ಸ್ವತಂತ್ರ ಭಾರತದ ಮೈಸೂರು ಸರ್ಕಾರ ಮುಂದೊಂದು ದಿನ ಶ್ಯಾನುಭೋಗರಿಗೆ ಕಾನೂನು ಹೋರಾಟದ ಮೂಲಕ ಅಲ್ಪ ಪರಿಹಾರ ದೊರಕಿತಾದರೂ ಪಟೇಲರಿಗೆ ಏನೂ ಸಿಗಲಿಲ್ಲ.

ಕೃಷಿಯಿಂದ ಹೇಳಿಕೊಳ್ಳುವ ಆದಾಯ ಏನೂ ಇರಲಿಲ್ಲ. ಅಕ್ಕಿ ಬೇಳೆ ಕೊಳ್ಳಬೇಕಿತ್ತು. ಅವತ್ತಿಗೆ ನಾಲ್ಕೈದು ಮಕ್ಕಳ ಸಂಸಾರ, ತಾಯಿಯ ಸರಳ ಜೀವನದ ಸೂತ್ರದಿಂದ ಅಂತೂ ಇಂತೂ ಕಷ್ಟವಿಲ್ಲದೇ ಸಾಗಿತ್ತು. ಮನೆಯಲ್ಲಿ ಹಸು ಕರುಗಳು ತಾಯಿಯ ಉಸ್ತುವಾರಿಯಲ್ಲಿ ಇದ್ದುದರಿಂದ ಹಾಲು ಮೊಸರಿಗೆ ಕೊರತೆಯಿರಲಿಲ್ಲ. ಕಾಲಾಂತರದಲ್ಲಿ ಅಪ್ಪನ ಅಣ್ಣ ತಮ್ಮಂದಿರಲ್ಲಿ ಆಸ್ತಿ ವಿಭಾಗವಾಗಿ ಅಲ್ಲಿಯವರೆಗೂ ವಾಸವಿದ್ದ ಹಳ್ಳಿಯ ಮನೆ ತಮ್ಮನಿಗೆ ಸೇರಿತು. ನಮ್ಮ ಕುಟುಂಬ ಪಕ್ಕದಲ್ಲೇ ಇದ್ದ ಮನೆಯೊಂದನ್ನು ಬಾಡಿಗೆಗೆ ಹಿಡಿದು ಅಲ್ಲಿಗೆ ವಲಸೆಹೋಗಬೇಕಾಯಿತು. ಏರುತ್ತಿದ್ದ ಕುಟುಂಬದ ನಿರ್ವಹಣಾ ವೆಚ್ಚ ಸರಿತೂಗಿಸಲು ಕೃಷಿಯಿಂದ ಬರುತ್ತಿದ್ದ ವರಮಾನ ಸಾಲುತ್ತಿರಲಿಲ್ಲ.

ಆಗ ನಮ್ಮ ಹೋಬಳಿ ಕೇಂದ್ರದ ಮೂಲಕ ನಾಲ್ಕೂ ದಿಕ್ಕಿಗೆ ಖಾಸಗಿ ಬಸ್‌ಗಳ ಸೇವೆ ಕ್ರಮೇಣ ಹೆಚ್ಚುತ್ತಿತ್ತು. ಬಸ್ ನಿಲ್ದಾಣದಲ್ಲಿ ಬಸ್ ಬರುವುದಕ್ಕೆ ಮುಂಚೆ ಆಯಾ ಬಸ್ ಮೂಲಕ ಅಲ್ಲಿಂದ ಪ್ರಯಾಣ ಮಾಡಲಿಚ್ಛಿಸುವ ಪ್ರಯಾಣಿಕರನ್ನು ಗುರುತಿಸಿ ಅವರಿಂದ ಪ್ರಯಾಣದರ ವಸೂಲುಮಾಡಿ ಟಿಕೆಟ್ ಬರೆದುಕೊಟ್ಟು, ಬಸ್ ಬಂದ ನಂತರ ಅವರನ್ನು ಬಸ್‌ಗೆ ಹತ್ತಿಸುವ ವ್ಯವಸ್ಥೆ ಮಾಡುವುದಕ್ಕೆ ಬಸ್ ಕಂಪನಿಗಳು ಸ್ಥಳೀಯರನ್ನು ಏಜೆಂಟರಾಗಿ ನೇಮಿಸುತ್ತಿದ್ದವು. ಬಸ್ ನಿಲ್ದಾಣದಿಂದ ಹೊರಡುವಾಗ ಈ ಏಜೆಂಟರೂ ಅದೇ ಬಸ್ಸಿನಲ್ಲಿ ಸ್ವಲ್ಪ ದೂರ ಪ್ರಯಾಣಿಸಬೇಕಾಗುತ್ತಿತ್ತು. ಮುಂಚಿತವಾಗಿ ಟಿಕೆಟ್ ಪಡೆಯದವರಿಗೆ ಟಿಕೆಟ್ ಕೊಡುವುದು, ಕೊನೆಗೆ ವಸೂಲಾದ ಹಣದ ಲೆಕ್ಕವನ್ನು ಬಸ್ಸಿನಲ್ಲಿರುತ್ತಿದ್ದ ಮಾಲೀಕರ ಕಡೆಯ ಏಜೆಂಟರಿಗೆ ಒಪ್ಪಿಸಿ, ನಿಗದಿಪಡಿಸಿದ ದರದ ಕಮೀಷನ್ ಮುರಿದುಕೊಂಡು ಬಾಕೀ ಹಣವನ್ನು ಅವರಿಗೆ ಒಪ್ಪಿಸಿ ಬಸ್ಸಿನಿಂದ ಇಳಿದು ವಾಪಸ್ ಬರುವ ವ್ಯವಸ್ಥೆಯಿತ್ತು. ಎರಡು ಮೂರು ಮೈಲಿ ಊರಿಂದಾಚೆಗೆ ಇಳಿದು ವಿರುದ್ಧ ದಿಕ್ಕಿನಲ್ಲಿ ಬರುವ ಬೇರೆ ಬಸ್ಸಿನಲ್ಲಿ (ಉಚಿತ ಪ್ರಯಾಣದ ವ್ಯವಸ್ಥೆ ಇರುತ್ತಿತ್ತು) ವಾಪಸ್ ಬರಬೇಕಾಗುತ್ತಿತ್ತು. ಹಲವೊಮ್ಮೆ ನಡೆದು ಕೂಡಾ ಬರಬೇಕಾಗುತ್ತಿತ್ತು. ಇಂತಹ ಒಂದೆರಡು ಬಸ್‌ಗಳ ಏಜೆಂಟ್ರಾಗಿ ಸಹಾ ನಮ್ಮಪ್ಪ ಹಲವು ಕಾಲ ಕೆಲಸ ಮಾಡಿದ್ದರು ಮದುವೆ ಕಾಲ, ಜಾತ್ರೆಗಳ ಕಾಲ ಹೊರತುಪಡಿಸಿದರೆ ಪ್ರಯಾಣಿಕರ ಸಂಖ್ಯೆ ಸಹ ಹೇಳಿಕೊಳ್ಳುವಷ್ಟಿರುತ್ತಿರಲಿಲ್ಲವಾಗಿ ಬರುತ್ತಿದ್ದ ಕಮೀಷನ್, ಪಡಬೇಕಾಗಿದ್ದ ಶ್ರಮಕ್ಕೆ ಅನುಗುಣವಾಗಿರುತ್ತಿರಲಿಲ್ಲ. ಗೃಹಕೃತ್ಯದ ಯಾವುದೋ ಒಂದು ಖರ್ಚು ಇದರಿಂದ ಕಳೆಯುತ್ತಿದ್ದುದರಿಂದ ಹಲವು ಕಾಲ ಈ ಉದ್ಯೋಗವನ್ನು ನಮ್ಮಪ್ಪ ಕೈಗೊಂಡಿದ್ದರು.

1956ರಲ್ಲಿ ನಮ್ಮ ಜಿಲ್ಲೆಯ ಎಲ್ಲ ಸಾರಿಗೆ ಮಾರ್ಗಗಳೂ ರಾಷ್ಟ್ರೀಕರಣ (ಅದು ರಾಜ್ಯದ ನಿರ್ಧಾರವಾಗಿದ್ದರೂ ರಾಜ್ಯೀಕರಣ ಎನಿಸಿಕೊಳ್ಳಲಿಲ್ಲ) ಗೊಂಡು, ಬರೀ ಕೆಂಪು ಬಸ್ಸುಗಳು, ಕಂಡಕ್ಟರ್ ಎಂಬ ಇಡೀ ಮಾರ್ಗ ಕ್ರಮಿಸುವ ಸಂಬಳದ ನೌಕರನ ಸೇವೆಯೊಂದಿಗೆ ಚಲಿಸತೊಡಗಿದವು. ಬರೆಯಬೇಕಿಲ್ಲದ, ಸುಮ್ಮನೆ ಕಿತ್ತುಕೊಡುವ ವಿವಿಧ ಮೌಲ್ಯದ ಮುದ್ರಿತ ಟಿಕೀಟುಗಳು ಜಾರಿಗೆ ಬಂದವು.

ನಮ್ಮ ದೊಡ್ಡಪ್ಪ ಈ ಹೊತ್ತಿಗೆ ಪುಣೆಯ ಪ್ರಖ್ಯಾತ ಗುತ್ತಿಗೆ ಕಂಪನಿಯೊಡನೆ ಸೇರಿ ಸಿವಿಲ್ ಕಾಮಗಾರಿಗಳ ಕಂಟ್ರಾಕ್ಟ್ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇದರಿಂದ ಉತ್ತೇಜಿತರಾದ ನನ್ನಪ್ಪ ಕೂಡ ಹೋಬಳಿಯಲ್ಲಿ ಸಣ್ಣಪುಟ್ಟ ಕಾಮಗಾರಿಗಳನ್ನು ಹಳ್ಳಿಯ ಸ್ನೇಹಿತರೊಬ್ಬರ ಜೊತೆಯಲ್ಲಿ ಶುರುಮಾಡಿದ್ದರು. ರಸ್ತೆಗಳ ಸಣ್ಣಪುಟ್ಟ ರಿಪೇರಿ, ಸರ್ಕಾರಿ ಕಟ್ಟಡಗಳ ಸುಣ್ಣ ಬಣ್ಣ ಮುಂತಾದ ವಾರ್ಷಿಕ ನಿರ್ವಹಣೆ ಕೆಲಸಗಳನ್ನು ಮಾಡಿಸುತ್ತಿದ್ದರು. ಇದಕ್ಕೆ ಹೆಚ್ಚಿನ ಬಂಡವಾಳ ಬೇಕಾಗುತ್ತಿರಲಿಲ್ಲ. ಬಿಲ್ ಬರುವುದು ಸ್ವಲ್ಪ ತಡವಾಗುತ್ತಿದ್ದರೂ ಅಲ್ಪ ಸ್ವಲ್ಪ ಲಾಭ ಬರುತ್ತಿತ್ತು.

ಮನೆಯಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಬೆಳೆಯತೊಡಗಿದ್ದರಿಂದಲೂ, ಕಂಟ್ರಾಕ್ಟ್‌ನ ಕೆಲಸಗಳು ಹೋಬಳಿಯಲ್ಲಿ ಇರುತ್ತಿದ್ದುದರಿಂದಲೂ ನಮ್ಮ ಕುಟುಂಬವನ್ನು ಅಲ್ಲಿಗೆ ಬದಲಾಯಿಸುವುದು ಅನಿವಾರ್ಯವಾಯಿತು. ಅದೇ ಮುಂದೆ ನಮ್ಮೂರಾಯಿತು. ನಮ್ಮಪ್ಪನ ಪಾಲಿಗೆ ಬಂದ ಪಿತ್ರಾರ್ಜಿತ ವಾಸದ ಮನೆ ಅಲ್ಲೇ ಇದ್ದಿತಾದರೂ ಅದನ್ನು ನಮ್ಮ ಕುಟುಂಬಕ್ಕೆ ವಾಸವಾಗಿಸಲು ಸಾಕಷ್ಟು ಬದಲಾವಣೆಗಳನ್ನು ಕೈಗೊಳ್ಳಬೇಕಾಗಿತ್ತು. ಹೀಗಾಗಿ ನಮ್ಮ ಕುಟುಂಬದ ವಾಸ್ತವ್ಯಕ್ಕೆ ಅಲ್ಲಿ ಒಂದು ಬಾಡಿಗೆಮನೆ ಪಡೆದದ್ದಾಯಿತು. ಅದೇ ಸಮಯಕ್ಕೆ ನಮ್ಮೂರಿಗೆ ಹೈಸ್ಕೂಲ್ ಸಹಾ ಬಂದು ಮಕ್ಕಳ ವಿದ್ಯಾಭ್ಯಾಸದ ಸಮಸ್ಯೆ ಬಗೆಹರಿಯಿತು.

ಈಗ ನಮ್ಮಪ್ಪನನ್ನು ಕಂಟ್ರಾಕ್ಟರ್ ಎಂದು ಊರಿನವರು ಗುರುತಿಸುವ ಹಾಗಾಯಿತು. ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ವಿಸ್ತರಣಾ ಸೇವೆಗಳು (ಎನ್ ಇ ಎಸ್-ಬಿ.ಡಿ.ಓ ಕಛೇರಿ) ಇಲ್ಲಿ ಮೂರನೇ ದರ್ಜೆಯ ಕಂಟ್ರಾಕ್ಟರ್ ಎಂದು ನೋಂದಣಿಯೂ ಆಯಿತು. ಈವರೆಗೆ ನಮ್ಮ ಚಿಕ್ಕಮ್ಮಂದಿರು, ಸೋದರ ಮಾವಂದಿರು ನಮ್ಮಮ್ಮನಿಗೆ ಬರಯುತ್ತಿದ್ದ ಪತ್ರಗಳ ವಿಳಾಸ ನಮ್ಮಪ್ಪನ ಹೆಸರಿನ ಕೆಳಗೆ ಲ್ಯಾಂಡ್ ಲಾರ್ಡ್ ಮತ್ತು ಕಂಟ್ರಾಕ್ಟರ್ ಎಂದು ಬದಲಾಯಿತು. ಈ ಎರಡೂ ಉದ್ಯೋಗಗಳು ಬಹಳ ವರ್ಷಗಳ ಕಾಲ ನಮ್ಮ ಸಂಸಾರ ನಿರ್ವಹಣೆಗೆ ಸಹಕಾರಿಯಾಗಿದ್ದವು. ನೋಂದಾಯಿತ ಕಂಟ್ರಾಕ್ಟರ್ ಆಗಿದ್ದರಿಂದ ಹಲವಾರು ಕಟ್ಟಡಗಳು, ರಸ್ತೆ, ಸೇತುವೆಗಳ ಕೆಲಸ ಎಲ್ಲವೂ ದೊರೆಯತೊಡಗಿದವು. ಇದ್ದ ಅಲ್ಪಸಲ್ಪ ಬಂಡವಾಳ, ಸರ್ಕಾರದಿಂದ ಸಿಗುತ್ತಿದ್ದ ಮುಂಗಡ, ಕಾಲಕಾಲಕ್ಕೆ ಬಿಡುಗಡೆಯಾಗುತ್ತಿದ್ದ ಬಿಲ್‌ಗಳ ಮೂಲಕ ಹೆಚ್ಚು ಸಾಲಮಾಡದೆ ವ್ಯವಹಾರ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ವ್ಯವಸಾಯದ ಕಡೆ ಗಮನಹರಿಸಲು ಸಾಧ್ಯವಾಗದೆ ಕೆಲಕಾಲ ತೋಟವನ್ನು ಗುತ್ತಿಗೆ ಆಧಾರದಲ್ಲಿ ನೋಡಿಕೊಳ್ಳಲು ಬಿಡಬೇಕಾಯಿತು.

ದೊಡ್ಡಪ್ಪ ಈ ವೇಳೆಗೆ ಹಳೆಯ ಷವರ್ಲೆ ಲಾರಿಯೊಂದನ್ನು ಖರೀದಿಸಿದ್ದರು. ನಮ್ಮ ಹಾಗೂ ಅವರ ಕೆಲಸಗಳಿಗಾಗಿ ಅದು ಸುಮಾರು ಕಾಲ ನಮ್ಮ ಮನೆಯ ಮುಂದೆ ಇರುತ್ತಿತ್ತು. ಜಲ್ಲಿ, ಮರಳು, ಕಲ್ಲುಚಪ್ಪಡಿ ಮುಂತಾದವುಗಳನ್ನು ತರಲು ಅದು ಹೋಗುವಾಗ ಡ್ರೈವರ್ ನ ಕೃಪೆಯಿಂದ ಅದರಲ್ಲಿ ಪ್ರಯಾಣಿಸುವ ಸೌಭಾಗ್ಯ ನಮಗೆ ದೊರಕುತ್ತಿತ್ತು. ಹಲವೊಮ್ಮೆ ಸರ್ಕಾರದ ಲಾರಿ, ಬುಲ್ಡೋಜರ್, ಕಾಂಕ್ರೀಟ್ ಕಲಸುವ ಯಂತ್ರ ಬಾಡಿಗೆ ಆಧಾರದಲ್ಲಿ ನಮ್ಮಪ್ಪನ ಕೆಲಸಕ್ಕೆ ಒದಗಿ ರಾತ್ರಿಯ ಸಮಯದಲ್ಲಿ ನಮ್ಮ ಮನೆಯ ಮುಂದಿನ ಬಯಲಿನಲ್ಲಿ ಬೀಡುಬಿಟ್ಟಿರುತ್ತಿದ್ದವು. ಈ ಮನೆಗೆ ಹೊಂದಿಕೊಂಡಿದ್ದ ಒಂದು ಮನೆಯಲ್ಲಿ ನಮ್ಮ ಊರಿನಲ್ಲಿ ಮೊದಲ ಬಾರಿಗೆ ಉಡುಪಿ ಹೋಟೆಲ್ ತೆರೆದಿದ್ದ ಕೋಟೇಶ್ವರದ ಕೃಷ್ಣಯ್ಯನವರ ಕುಟುಂಬ ನಮ್ಮ ನೆರೆಯಲ್ಲಿ ವಾಸಿಸುತ್ತಿದ್ದು ನಮಗೆ ಒಳ್ಳೆಯ ನೆರೆಯಾಗಿತ್ತು.ಒಮ್ಮೆ ಸಣ್ಣ ಸರ್ಕಸ್ ಕಂಪನಿಯ ಮಾಲೀಕರ ಕುಟುಂಬ ಸಹ ಅಲ್ಪಕಾಲ ನಮ್ಮ ನೆರೆಯವರಾಗಿದ್ದರು.

ಒಂದು ಒಂದೂವರೆ ವರ್ಷ ಕಳೆಯುವಷ್ಟರಲ್ಲಿ ನಮ್ಮ ಸ್ವಂತಮನೆ ಪುನರ್ ನಿರ್ಮಾಣವಾಗಿ ನಮ್ಮ ಕುಟುಂಬ ಅಲ್ಲಿಗೆ ವಾಸ್ತವ್ಯವನ್ನು ಬದಲಾಯಿಸಿತು. ನಮ್ಮಪ್ಪ ನಿರ್ವಹಿಸುತ್ತಿದ್ದ ಕೆಲಸಗಳಿಗೆ ನೆರವಾಗುವ ಕಾರ್ಮಿಕರ ತಂಡವೊಂದು ಈಗಾಗಲೇ ಬೆಳೆದಿತ್ತು.

ನಂತರದಲ್ಲಿ ನಮ್ಮ ಚಿಕ್ಕಪ್ಪ ತಮ್ಮ ಕುಟುಂಬದ ವಾಸ್ತವ್ಯವನ್ನು ತಾಲ್ಲೂಕಿನಿಂದ ನಮ್ಮ ಮನೆಯ ಪಕ್ಕದ ಅವರ ಪಾಲಿನ ಮನೆಗೆ ಬದಲಾಯಿಸಿದರು. ಅವರೂ ನೋಂದಾಯಿತ ಕಂಟ್ರಾಕ್ಟರ್ ಆಗಿದ್ದು ಅಣ್ಣ ತಮ್ಮ ಇಬ್ಬರೂ ಕೂಡಿ ಕೆಲಸಗಳನ್ನು ತೆಗೆದುಕೊಳ್ಳಲು ಶುರುಮಾಡಿದರು. ಇವರಿಬ್ಬರೂ ಜೊತೆಜೊತೆಯಾಗಿ ಎಲ್ಲಾ ರೀತಿಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು. ಕಟ್ಟಡಗಳು, ಸೇತುವೆ, ಚರಂಡಿ, ರಸ್ತೆ, ನಿರ್ಮಾಣ, ಕೆರೆಗಳ ರಿಪೇರಿ ಎಲ್ಲಾ ರೀತಿಯ ಕೆಲಸಗಳು ನಿರಂತರವಾಗಿ ಸಾಗತೊಡಗಿದವು.

ಮನೆಯ ಹಿತ್ತಲಲ್ಲಿ ಮರಗೆಲಸ ಮಾಡುವ ಬಡಗಿಗಳ ತಂಡ ಯಾವಾಗಲೂ ಕಾರ್ಯನಿರತವಾಗಿರುತ್ತಿತ್ತು. ಕ್ವಾರಿಗಳಲ್ಲಿ ಜಲ್ಲಿ, ಚಪ್ಪಡಿಗಳ ಕೆಲಸ ನಡೆಯುತ್ತಿತ್ತು. ಮನೆಯ ಕಪಾಟೊಂದರಲ್ಲಿ ಬಂಡೆ ಸಿಡಿಸಲು ಬೇಕಾಗುವ ಡೈನಮೈಟ್ ದಾಸ್ತಾನಿರುತ್ತಿತ್ತು. ಇದಕ್ಕೆ ಲೈಸನ್ಸ್ ಪಡೆದಿದ್ದರಿಂದ ಯಾವುದೇ ತೊಂದರೆಯಿರಲಿಲ್ಲ. ನಮಗೂ ಸಹ ಕಾಮಗಾರಿಗಳ ತಾಂತ್ರಿಕ ಮಾಹಿತಿಗಳು ಅಲ್ಪಸ್ವಲ್ಪ ತಿಳಿಯಲು ಸಹಾಯಕವಾಗುತ್ತಿತ್ತು. ಗಾರೆ ಕೆಲಸದವರು, ಅವರ ಸಹಾಯಕರು, ಅವಶ್ಯಕತೆ ಬಿದ್ದಾಗ ತಾಲ್ಲೂಕಿನಿಂದ ಬರುತ್ತಿದ್ದ ಕಬ್ಬಿಣದ ಕೆಲಸದವರು (ಬಾರ್ ಬೆಂಡರ್), ಪೇಂಟ್ ಕೆಲಸ ಮಾಡುವವರು, ಜಲ್ಲಿ ಬಂಡೆ(ಕ್ವಾರಿ)ಯವರು, ಆಂದ್ರದ ಬೋವಿಗಳು ಬಡಗಿಗಳು ಇವರೆಲ್ಲರೂ ಸೋಮವಾರದಂದು ನಮ್ಮ ಮನೆಯ ಮುಂದೆ ಬಡವಾಡಗೆ ಸೇರುತ್ತಿದ್ದರು. ಹಲವೊಮ್ಮೆ ಐವತ್ತರವತ್ತು ಜನರ ಗುಂಪು ಇರುತ್ತಿತ್ತು. ವಾರದ ಮಜೂರಿ ವಿತರಿಸುವ ದಿನ ಆದಾಗಿತ್ತು. ಸೋಮವಾರ ಊರಿನ ಸಂತೆ. ಹಾಗಾಗಿ ಕೆಲಸಗಳಿಗೆ ಅಂದು ವಾರದ ರಜೆಯಾಗಿರುತ್ತಿತ್ತು. ಮಧ್ಯಾನ್ಹದೊಳಗೆ ಅಂದಿನ ಬಟವಾಡೆಗೆ ಬೇಕಾಗುವ ಹಣವನ್ನು ಅಪ್ಪ, ಚಿಕ್ಕಪ್ಪ ಹೊಂಚುವುದರಲ್ಲಿ ನಿರತರಾಗಿದ್ದು ಲೆಖ್ಖಗಳೆಲ್ಲವೂ ಪರಿಶೀಲಿಸಿ ಕೆಲಸಗಾರರನ್ನು ಒಬ್ಬೊಬ್ಬರನ್ನಾಗಿ ಕೂಗಿ ಅವನ ಲೆಖ್ಖ ಒಪ್ಪಿಸಿದರೆ ಇನ್ನೊಬ್ಬರು ಅವನಿಗೆ ಸಲ್ಲಬೇಕಾಗಿದ್ದ ಹಣವನ್ನು ಹಂಚುತ್ತಿದ್ದರು. ಹಣದ ಕೊರತೆ ಇದ್ದಾಗಲೋ, ಇಲ್ಲ ಆ ಕೆಲಸಗಾರ ಮುಂದಿನವಾರ ಕೆಲಸಕ್ಕೆ ಕೈಕೊಡುವ ಸಾಧ್ಯತೆಗಳಿದ್ದರೆ ಕೊಡುವ ಹಣದಲ್ಲಿ ಒಂದು ಸಣ್ಣಭಾಗವನ್ನು ಕಡಿಮೆಮಾಡಿ ಬಟವಾಡೆ ಮಾಡಲಾಗುತ್ತಿತ್ತು. ಈ ರೀತಿ ಹಿಡಿದುಕೊಂಡ ಹಣವನ್ನು ಒಂದೆರಡು ದಿನಗಳಲ್ಲಿ ಕೊಡುವ ವ್ಯವಸ್ಥೆ ಇತ್ತು. ಯಾರಿಗೂ ಅನ್ಯಾಯ ಮಾಡುತ್ತಿರಲಿಲ್ಲ. ಕತ್ತಲಾಗುವ ಹೊತ್ತಿಗೆ ಈ ಬಟವಾಡೆಯ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಇಬ್ಬರು ಸಾಹುಕಾರರು (ಕೆಲಸಗಾರರು ಇವರನ್ನು ಕರೆಯುತ್ತಿದ್ದುದು ಹೀಗೆ) ಹಣವೆಲ್ಲಾ ಖಾಲಿಯಾಗಿ ಇನ್ನೂ ಮುಂದುವರೆಯುತ್ತಿದ್ದ ಬೇಡಿಕೆಗಳಿಗೆ ಸ್ಪಂದಿಸಲಾಗದೇ ಬೀಸುವ ದೊಣ್ಣೆ ತಪ್ಪಿಸಿಕೊಳ್ಳಲು ಊರಿನ ಸಿನಿಮಾ ಟೆಂಟಿನೊಳಗೆ ಮರೆಯಾಗುತ್ತಿದ್ದರು. ಕೆಲಸಗಳಲ್ಲಿ ಹೆಚ್ಚಿನ ಲಾಭ ದೊರೆಯುತ್ತಿರಲಿಲ್ಲ. ಹೆಚ್ಚಿನ ಲಾಭದಾಸೆಗೆ ಕಳಪೆ ಕಾಮಗಾರಿ ಮಾಡುತ್ತಿರಲಿಲ್ಲ. ಇವರು ಕಂಟ್ರಾಕ್ಟರ್, ಸಾಹುಕಾರ ಎಂದು ಕರೆಸಿಕೊಂಡರೂ ಇವರಿಗೆ ಉಳಿಯುತ್ತಿದ್ದ ಹಣ, ಹಾಕಿದ ಬಂಡವಾಳದ ಮೇಲಿನ ಖರ್ಚು ಹಾಗೂ ಇವರ ಶ್ರಮಕ್ಕೆ ಸಿಗುತ್ತಿದ್ದ ವೇತನವಷ್ಟೇ ಆಗಿರುತ್ತಿತ್ತು. ಎರಡೂ ಸಂಸಾರಗಳ ನಿರ್ವಹಣೆಗೆ ದಿನಸಿ ಅಂಗಡಿ, ಬಟ್ಟೆ ಅಂಗಡಿಗಳಲ್ಲಿ ಸಾಲದ ಖಾತೆ ನಡೆಯುತ್ತಿತ್ತು. ಕ್ರಮೇಣ ಕಾಂಟ್ರಾಕ್ಟ್ ಕೆಲಸ ಮಾಡುವ ಹೊಸ ಜನ ಹುಟ್ಟಿಕೊಂಡರು. ಒಂದೆರಡು ಕೆಲಸಗಳಲ್ಲಿ ಲಾಭ ಬರಲಿಲ್ಲ.

ಗುತ್ತಿಗೆಗೆ ಕೊಟ್ಟಿದ್ದ ಜಮೀನುಗಳನ್ನು ಸ್ವಂತಕ್ಕೆ ಪಡೆದಿದ್ದರಿಂದ ಅಲ್ಲಿಯೂ ಅಲ್ಪಸ್ವಲ್ಪ ವರಮಾನ ಕಾಣುವಂತಾಯಿತು. ಅನ್ವೇಷಣಾ ಪ್ರವೃತ್ತಿಯವರಾದ ಅಪ್ಪ ಒಮ್ಮೆ ಸೌದೆ ವ್ಯಾಪಾರವನ್ನು, ಸಹಾ ಆರಂಭಿಸಿದ್ದರು. ಹೆಚ್ಚುಕಾಲ ಅದು ಮುಂದುವರೆಯಲಿಲ್ಲ. ಕಾಂಟ್ರಾಕ್ಟ್ ಕೆಲಸಗಳಲ್ಲಿ ನಷ್ಟ ಉಂಟಾಗುವ ಸೂಚನೆಗಳು ಹೆಚ್ಚಾದಾಗ ಮಾಡುವ ಕೆಲಸವನ್ನು ಕಳಪೆಯಾಗಿಸಲು ಒಪ್ಪದೆ, ತಾಯಿಯವರ ಒತ್ತಾಯದ ಮೇಲೆ ಕಂಟ್ರಾಕ್ಟ್ ಕೆಲಸಕ್ಕೆ ಒಂದು ದಿನ ವಿದಾಯ ಹೇಳಿದರು. ಜಮೀನಿನ ವರಮಾನ ಕುಟುಂಬದ ನಿರ್ವಹಣೆಗೆ ಸಾಕಾಗುವಂತೆ ನೋಡಿಕೊಂಡರು. ಮಕ್ಕಳೆಲ್ಲರ ವಿದ್ಯಾಭ್ಯಾಸ ಸಾಗಿತ್ತು. ಓದು ಮುಗಿಸಿ ಕೆಲಸಕ್ಕೆ ಸೇರಿದ ಮಕ್ಕಳು, ಮದುವೆಯಾದ ಅಕ್ಕ, ಅವರ ಪತಿ, ಮುಂದಿನ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನೆರವಾಗಿ ನನ್ನಪ್ಪನ ಮೇಲಿನ ಹೊರೆ ಕಡಿಮೆಮಾಡಿದರು. ಇದನ್ನು ಹೊರತುಪಡಿಸಿದರೆ ಸಂಸಾರ ನಿರ್ವಹಣೆ, ಮಕ್ಕಳ ಮದುವೆಗಳು ಮುಂತಾದವುಗಳನ್ನು ಅವರೇ ನಿರ್ವಹಿಸಿದರು. ಸಾಲ ಮಾಡದಿರುವಿಕೆ, ಸರಳ ಜೀವನ ಇವೆರಡನ್ನೂ ಪಾಲಿಸಿಕೊಂಡ ನನ್ನಪ್ಪ ಹಣಕ್ಕಾಗಿ ಎಂದೂ ಆಸೆಪಡಲಿಲ್ಲ ಇದರಲ್ಲಿ ನನ್ನಮ್ಮನ ಪಾತ್ರವೂ ಹಿರಿದು, ಹೊತ್ತು ಹೊತ್ತಿನ ಊಟ, ತಿಂಡಿ, ಬಟ್ಟೆ ಬರೆಗಳಿಗೆ ಕೊರತೆ ಎಂದೂ ಆಗದಂತೆ ನೋಡಿಕೊಂಡರು. ಮಕ್ಕಳನ್ನೆಲ್ಲಾ ಒಳ್ಳೆಯ ಪ್ರಜೆಗಳನ್ನಾಗಿ ರೂಪಿಸಿದರು.

ಹೆಚ್ಚಿನ ಶಾಲಾ ಶಿಕ್ಷಣವಿಲ್ಲದಿದ್ದರೂ, ತಮ್ಮ ವ್ಯವಹಾರಕ್ಕೆ ಬೇಕಾಗಿದ್ದಷ್ಟು ಕೌಶಲ್ಯವನ್ನು ರೂಢಿಸಿಕೊಂಡಿದ್ದರು. ಹಣದ ಶಿಸ್ತನ್ನು ಪಾಲಿಸಿದ್ದರು. ಎಂದಿಗೂ ಕೈಕಟ್ಟಿ ಕೂರದೇ ಜನ್ಮಕ್ಕಂಟಿದ್ದ ಅಸ್ತಮಾದ ಜೊತೆಗೆ ಹೊಸ ಹೊಸ ಉದ್ಯೋಗಗಳನ್ನು ಇದ್ದಲ್ಲಿಯೇ ಶ್ರದ್ಧೆಯಿಂದ ಮಾಡುತ್ತ ದೊಡ್ಡ ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸಿ ಸಾರ್ಥಕ ಜೀವನ ನಡೆಸಿದ ನನ್ನಪ್ಪ ಅವರಿಗೆ ಜೊತೆ ಕೊಟ್ಟ ನನ್ನಮ್ಮ, ಸಹೋದರ ಸಹೋದರಿಯರು ನಮ್ಮ ಜೀವನದ ಭಾಗವಾಗಿದ್ದು  ಪುಣ್ಯವಿಶೇಷ.

ಅವರ ಜೀವನದ ಉದ್ಯೋಗ ಪರ್ವ ಎಂದಿಗೂ ಉದ್ವೇಗ ಪರ್ವವಾದದ್ದು ನಮ್ಮ ಗಮನಕ್ಕೆ ಬರಲಿಲ್ಲ. ■

---

## ಏಕಾದಶಿ ಮನೆಗೆ ದ್ವಾದಶಿ

ಅವತ್ತು ಸೋಮು ಮನೇಲಿ ತಿಂಡಿ ತಡವಾಯಿತು. ಸೋಮು ಅಸಹನೆಯಿಂದ ಏನೇ ಸೋಮಿ ಇನ್ನೂ ತಿಂಡಿ ಆಗಿಲ್ವಾ ಅಂತ ಕೇಳಿದ. ಬಂದೆ ಇರ್ರೀ ನಿಮಗೆ ಗೊತ್ತಿರೋದು ಎರಡೇ ತಿಂಡಿ ತಿಂಡಿ ಅಂತ ನನ್ನ ತಲೆ ತಿನ್ನೋದು, ತಿಂಡಿ ಕೊಟ್ಟ ಮೇಲೆ ಅದನ್ನು ತಿನ್ನೋದು. ಇವತ್ತು ಹೊಸ ರುಚಿ ಮಾಡ್ತಿದೀನಿ ಸ್ವಲ್ಪ ವೈಟ್ ಮಾಡಿ ಅಂದಳು. ಸೋಮು ಸಿಟ್ಟಿನಿಂದ ಮನೆಯಿಂದ ಆಚೆ ಹೊರಟು ಅವನ ಸ್ನೇಹಿತ ಪುಟ್ಟು ಮನೆಗೆ ಬಂದ. ಲೋ ಪುಟ್ಟು ಬಹಳ ಹಸಿವಾಗ್ತಿದೆ ಸೋಮಿ ಇವತ್ತು ಇನ್ನೂ ತಿಂಡಿ ಮಾಡೇ ಇಲ್ಲ. ಸ್ವಲ್ಪ ತಿಂಡಿ ಕೊಡೋ ಅಂದ. ಪುಟ್ಟು ಅದಕ್ಕೇನು ಅಂತ ಒಳಗೆ ಹೋಗಿ ಒಂದು ಖಾಲಿ ತಟ್ಟೆ ಇನ್ನೊಂದು ಖಾಲಿ ಲೋಟ ತಂದಿಟ್ಟ. ಸೋಮು ಇದೇನೋ ಅಂದರೆ ಪುಟ್ಟು ನಕ್ಕು ಇವತ್ತು ಏಕಾದಶಿ ನಮ್ಮನೇಲಿ ಏನೂ ಮಾಡಲ್ಲ ಅಂದು ನಕ್ಕ. ಸೋಮು ತನ್ನ, ಹೊಟ್ಟೆಗೆ ಹೊಡೆದುಕೊಂಡು ಮತ್ತೆ ಈಗ ಸೋಮಿ ತಿಂಡಿ ರೆಡಿ ಮಾಡಿರಬಹುದು ಅಂತ ತನ್ನ ಮನೆಗೇ ಹೊರಟು ಇದನ್ನೇ ದೊಡ್ಡವರು ಏಕಾದಶಿ ಮನೆಗೆ ದ್ವಾದಶಿ ಬಂದ ಹಾಗೆ ಅನ್ನುತ್ತಿದ್ದುದು ಅಂದುಕೊಂಡ.